# ಕಮಲ ಪತ್ರ

RNI No.:KARKAN/2023/84034 | ಸಂಪುಟ : 04 | ಸಂಚಿಕೆ : 02 | ಮೇ 2026 | ಬೆಂಗಳೂರು | ₹ : 10




## ಬಿಎಸ್‌ವೈ ಅಭಿಮಾನೋತ್ಸವ




ನವದೆಹಲಿಯ ವಿಜ್ಞಾನ ಭವನದಲ್ಲಿ ಆಯೋಜಿಸಿದ್ದ ನಾರಿ ಶಕ್ತಿ ಸಮ್ಮೇಳನದಲ್ಲಿ ಪ್ರಧಾನಿ ಶ್ರೀ ನರೇಂದ್ರ ಮೋದಿ



ಪ್ರಧಾನಿ ಶ್ರೀ ನರೇಂದ್ರ ಮೋದಿ ರವರಿಗೆ ಸಿಕ್ಕಿಂ ಗ್ಯಾಂಗ್‌ಟಾಕ್‌ನಲ್ಲಿ ಉತ್ಸಾಹದ ಸ್ವಾಗತ




ನವದೆಹಲಿಯ ಹೈದರಾಬಾದ್ ಹೌಸ್‌ನಲ್ಲಿ ನಡೆದ ಭಾರತ - ಕೋರಿಯಾ ಬಿಸಿನೆಸ್ ಡೈಲಾಗ್‌ನಲ್ಲಿ ಪ್ರಧಾನಿ ಶ್ರೀ ನರೇಂದ್ರ ಮೋದಿ




ನವ ದೆಹಲಿಯ ಭಾರತ ರತ್ನ ಶ್ರೀ ಸುಬ್ರಮಣ್ಯ ಸಭಾಂಗಣದಲ್ಲಿ ಆಯೋಜಿಸಿದ್ದ 11ನೇ ಮಿಷನ್ ಮುಖ್ಯಸ್ಥರ ಸಮ್ಮೇಳನದಲ್ಲಿ ಪ್ರಧಾನಿ ಶ್ರೀ ನರೇಂದ್ರ ಮೋದಿ




ಅಸ್ಸಾಂ ರಾಜ್ಯದ ಗುವಾಹಟಿಯಲ್ಲಿ ನಡೆದ ನೂತನ ಎನ್‌ಡಿಎ ಸರ್ಕಾರದ ಪ್ರಮಾಣವಚನ ಸ್ವೀಕಾರ ಸಮಾರಂಭದಲ್ಲಿ ಪ್ರಧಾನಮಂತ್ರಿ ಶ್ರೀ ನರೇಂದ್ರ ಮೋದಿ

# ಪ್ರಜಾಪ್ರಭುತ್ವದ ರಕ್ಷಣೆಯೊಂದಿಗೆ ರಾಷ್ಟ್ರರಕ್ಷಣೆ ನಮ್ಮ ಹೊಣೆ

ಪ್ರಸ್ತುತ ಜಾಗತಿಕ ವಿದ್ಯಮಾನವನ್ನು ಗಮನದಲ್ಲಿ ಇಟ್ಟುಕೊಂಡು ಪ್ರಧಾನಮಂತ್ರಿ ನರೇಂದ್ರ ಮೋದಿಜಿಯವರು ಇತ್ತೀಚೆಗೆ ನೀಡಿದ ಕರೆ ಅತ್ಯಂತ ದೂರದೃಷ್ಟಿಯುಳ್ಳದ್ದು ಮತ್ತು ದೇಶದ ಭದ್ರತೆ ಹಾಗೂ ಸ್ಥಿರತೆಯ ದೃಷ್ಟಿಯಿಂದ ಅತ್ಯಂತ ಸೂಕ್ಷ್ಮವಾದ ವಿಷಯ ಕೂಡ. ಮಿತವಾದ ಇಂಧನದ ಬಳಕೆ, ಅನಗತ್ಯ ಪ್ರಯಾಣ ಮಾಡದಿರುವುದು, ದೇಶದ ವಿದೇಶಿ ವಿನಿಮಯಕ್ಕೆ ಹೊರೆಯಾಗುವ ಪ್ರಯಾಣ ಅಥವಾ ಖರೀದಿ ಮಾಡದಿರುವುದು, ಸ್ವದೇಶಿ ಉತ್ಪನ್ನಗಳ ಬೆಳವಣಿಗೆಗೆ ಆದ್ಯತೆ, ಸಾವಯವ ಕೃಷಿಯತ್ತ ಒಲವು ಸೇರಿದಂತೆ ಆರೇಳು ಪ್ರಮುಖ ಅಂಶಗಳನ್ನು ಅವರು ರಾಷ್ಟ್ರದ ಮುಂದೆ ಮನವಿ ಮಾಡಿದ್ದಾರೆ. ಇದನ್ನು ನಾವು ಸಂಕಷ್ಟವೆಂದು ಭಾವಿಸದೆ, ದೇಶದ ಆರ್ಥಿಕ ಭದ್ರತೆಗಾಗಿ ಕೈಗೊಂಡಿರುವ ಅತ್ಯಗತ್ಯ ನಾಗರೀಕ ಕರ್ತವ್ಯವೆಂದು ಭಾವಿಸಬೇಕು. ಬಿಜೆಪಿಯ ಜವಾಬ್ದಾರಿಯುತ ಕಾರ್ಯಕರ್ತರಾಗಿ ಈ ಆರ್ಥಿಕ ಶಿಸ್ತನ್ನು ಜನಸಾಮಾನ್ಯರಿಗೆ ತಲುಪಿಸಿ ಸಶಕ್ತ ಭಾರತ ನಿರ್ಮಾಣಕ್ಕೆ ಬೆನ್ನೆಲುಬಾಗುವುದು ನಮ್ಮ ಕರ್ತವ್ಯ.

2026ರ ಐದು ರಾಜ್ಯಗಳ ಚುನಾವಣಾ ಫಲಿತಾಂಶವು ದೇಶವ್ಯಾಪಿಯಾಗಿ ಭಾರತೀಯ ಜನತಾ ಪಾರ್ಟಿ ಸಂಘಟನೆಗೆ ಆನೆ ಬಲ ತಂದುಕೊಟ್ಟಿದೆ. ಅಸ್ಸಾಂ ಮತ್ತು ಪುದುಚೇರಿಯಲ್ಲಿ ಅಧಿಕಾರ ಉಳಿಸಿಕೊಂಡಿರುವುದು ಮತ್ತು ಬಂಗಾಳದಲ್ಲಿ ಬಿಜೆಪಿ ತೋರಿಸಿದ ಸಂಘಟನಾತ್ಮಕ ಇಚ್ಛಾಶಕ್ತಿ ನಿಜಕ್ಕೂ ಅದ್ಭುತ. ಒಂದು ವರ್ಷದ ಹಿಂದೆ ಬಿಜೆಪಿ ರಾಷ್ಟ್ರೀಯ ಸಂಘಟನಾ ಪ್ರಧಾನ ಕಾರ್ಯದರ್ಶಿಗಳಾದ ಶ್ರೀ. ಬಿ. ಎಲ್. ಸಂತೋಷ್ ಅವರು ಬಂಗಾಳದ ಚುನಾವಣೆಯನ್ನು ಕೇವಲ ಒಂದು ಚುನಾವಣೆಯಾಗಿ ನೋಡದೆ ಅದನ್ನು 'ನಾಗರಿಕತೆಯ ಸಂಘರ್ಷ' ಎಂದು ವ್ಯಾಖ್ಯಾನಿಸಿದ್ದು, ಬಂಗಾಲದಲ್ಲಿ ಬಿಜೆಪಿಯ ಗೆಲುವು ಕೇವಲ ಬಿಜೆಪಿಯದ್ದು ಮಾತ್ರವಾಗಿರದೆ ಸಮಸ್ತ ಭಾರತದ ಸಾಂಸ್ಕೃತಿಕ-ನಾಗರಿಕತೆಯ ಗೆಲುವು ಎಂಬುದನ್ನು ದೇಶಕ್ಕೆ ದೇಶವೇ ಸಂಭ್ರಮಿಸಿದ ರೀತಿಯಲ್ಲೇ ಸಾಬೀತಾಗಿದೆ. ಈ ವಿಜಯದ ದೀರ್ಘ ಕಾಲೀನ ಪ್ರಭಾವ ದಕ್ಷಿಣದ ರಾಜ್ಯಗಳ ಮೇಲೂ ಆಗಲಿದೆ. ಕೇರಳದಲ್ಲಿ ಮೊದಲ ಬಾರಿಗೆ 3 ಸ್ಥಾನಗಳಲ್ಲಿ ಗೆಲುವಿನ ಮೂಲಕ ಸಂಘಟನೆಗೆ ಬಲ ತಂದಿದೆ ಮತ್ತು ತಮಿಳುನಾಡಿನಲ್ಲಿ ಬಿಜೆಪಿ ಹಿಂದಿನ 3 ಸ್ಥಾನಗಳಿಂದ ಕುಸಿದಿರುವುದು ಅಲ್ಲಿ ಬದಲಾದ ಚುನಾವಣಾ ಸಮೀಕರಣಗಳು ಕಾರಣ ಎನ್ನಲಾಗುತ್ತಿದೆಯಾದರೂ, ಮುಂದಿನ ದಿನಗಳಲ್ಲಿ ಪಕ್ಷದ ಬಲವರ್ಧನೆಗೆ ಈ ಅನುಭವಗಳು ಪೂರಕವಾಗಲಿವೆ. ಕರ್ನಾಟಕದ ಎರಡು ಉಪ ಚುನಾವಣೆಗಳಲ್ಲಿ ಬಿಜೆಪಿಗೆ ಹಿನ್ನಡೆಯಾಗಿದ್ದು ಇದರ ಬಗ್ಗೆ ಮಂಥನದ ಅಗತ್ಯವಿದೆ

## ಸಂಪಾದಕೀಯ

ಚಿತ್ರದುರ್ಗದಲ್ಲಿ ನಡೆದ 'ಬಿಎಸ್‌ವೈ 50' ಅಭಿನಂದನಾ ಉತ್ಸವವು ಕೇವಲ ವ್ಯಕ್ತಿಗತ ಸಂಭ್ರಮವಾಗಿರದೆ, ದೊಡ್ಡ ಮಟ್ಟದಲ್ಲಿ ಬಿಜೆಪಿ ಸಂಘಟನಾ ಸಾಮರ್ಥ್ಯದ ಪ್ರದರ್ಶನವಾಗಿದೆ. ಐದು ದಶಕಗಳ ಕಾಲ ಪಕ್ಷವನ್ನು ಕಟ್ಟಿ ಬೆಳೆಸಿದ ಶ್ರೀ ಬಿ. ಎಸ್. ಯಡಿಯೂರಪ್ಪನವರ ಸುದೀರ್ಘ ರಾಜಕಾರಣದ ಪ್ರಯಾಣ ಪಕ್ಷದ ಸಂಘಟನೆಯಲ್ಲಿ ಅತ್ಯಂತ ಮಹತ್ವದ ಪಾತ್ರ ವಹಿಸಿದ್ದು, ಅದರ ಸಂಭ್ರಮಾಚರಣೆಯಲ್ಲಿ ಭಾಗಿಯಾಗಲು ದೇಶದ ಗೃಹ ಮತ್ತು ಸಹಕಾರಿ ಸಚಿವರಾದ ಶ್ರೀ ಅಮಿತ್ ಶಾ ಅವರು ಆಗಮಿಸಿ ಅವರು ಆಡಿದ ಮಾತುಗಳು, ಪ್ರಧಾನಿ ಶ್ರೀ ನರೇಂದ್ರ ಮೋದಿಯವರ ಅಭಿನಂದನಾ ಪತ್ರವನ್ನು ಶ್ರೀ ಬಿ. ಎಸ್. ಯಡಿಯೂರಪ್ಪನವರಿಗೆ ಹಸ್ತಾಂತರಿಸಿದ್ದು ನಿಜಕ್ಕೂ ಸಮಾವೇಶದ ಸೊಬಗನ್ನು ಇಮ್ಮಡಿಗೊಳಿಸಿತು.

ಇವಿಎಂ (EVM) ಯಂತ್ರಗಳನ್ನು ಟೀಕಿಸುತ್ತಾ, ಸ್ಥಳೀಯ ಸಂಸ್ಥೆಗಳ ಚುನಾವಣೆಗೆ ಬ್ಯಾಲೆಟ್ ಪೇಪರ್ ಬೇಕೆಂದು ಹಠ ಹಿಡಿಯುತ್ತಿರುವ ಕಾಂಗ್ರೆಸ್ ಸರ್ಕಾರಕ್ಕೆ, ಚುನಾವಣಾ ಪ್ರಕ್ರಿಯೆಗಳನ್ನು ನ್ಯಾಯಸಮ್ಮತವಾಗಿ ನಡೆಸುವ ಬದ್ಧತೆ ಇಲ್ಲದಿರುವುದು ವಿಷಾದನೀಯ. ಬ್ಯಾಲೆಟ್ ಪೇಪರ್ ಮೂಲಕ ಚುನಾವಣೆ ನಡೆಸಿದರೆ ಕಾಂಗ್ರೆಸ್ ಸರಕಾರ ಅದನ್ನು ಎಷ್ಟು ಪಾರದರ್ಶಕವಾಗಿ ನಡೆಸಬಹುದು ಎಂಬುದಕ್ಕೆ ಕಾಂಗ್ರೆಸ್ ನಡೆ ಒಂದು ಸ್ಪಷ್ಟ ನಿದರ್ಶನ. ಕಾಂಗ್ರೆಸ್‌ನ ಇಂತಹ ಕುತಂತ್ರಗಳ ವಿರುದ್ಧ ಸಂಘಟಿತ ಹೋರಾಟ ನಡೆಸುವುದು ಇಂದಿನ ಅನಿವಾರ್ಯತೆಯಾಗಿದೆ.

**(ಬಿದರೆ ಪ್ರಕಾಶ್)**
ಸಂಪಾದಕರು

# ಕಮಲ ಪಥ

**ಪ್ರಕಾಶಕರು**
ಹೆಚ್.ಎಸ್. ಗೋಪಿನಾಥ್
ಮೊ : 9341231253


**ಸಂಪಾದಕರು**
ಬಿದರೆ ಪ್ರಕಾಶ್
ಮೊ : 9513447961


**ಸುಭಾಷಿತ**



**ನೀವು ಕೈಗೊಳ್ಳುವ ಯಾವುದೇ ಕೆಲಸವನ್ನು ಗಂಭೀರವಾಗಿ, ಸಂಪೂರ್ಣವಾಗಿ ಮತ್ತು ಉತ್ತಮವಾಗಿ ಮಾಡಿ; ಅದನ್ನು ಅರ್ಧಕ್ಕೆ ನಿಲ್ಲಿಸಬೇಡಿ ಅಥವಾ ಪೂರ್ಣಗೊಳಿಸದೆ ಬಿಡಬೇಡಿ.**

**- ಡಾ. ಶ್ಯಾಮಾ ಪ್ರಸಾದ್ ಮುಖರ್ಜಿ**





**ಕಮಲ ಪಥ ಪತ್ರಿಕೆಗಾಗಿ ಸಂಪರ್ಕಿಸಿ :**
☎ : 08022041976, 23569999
ಅಜಿತ್‌ಶೆಟ್ಟಿ ಹೆರಂಜೆ 97430 91999

email : bjpkamalapatha@gmail.com

#7/6, 4ನೇ ತಿರುವು, ಸಿ.ಸಿ. ರಸ್ತೆ,
ಸರ್ವಜ್ಞನಗರ, ಕಾಕ್ಸ್ ಟೌನ್,
ಬೆಂಗಳೂರು 560 005


**ಆತ್ಮೀಯ ಓದುಗರೆ,**
**ನಿಮ್ಮ ವಿಳಾಸದಲ್ಲಿ ಬದಲಾವಣೆ ಇದ್ದರೆ ದಯವಿಟ್ಟು ತಿಳಿಸಿ. ನಿಮ್ಮ ಹೊಸ ವಿಳಾಸಕ್ಕೆ ಮಾಸಪತ್ರಿಕೆ ಕಳುಹಿಸಲಾಗುವುದು.**


06




## ಅಭಿಮಾನೋತ್ಸವದಲ್ಲಿ ಅಭಿಮಾನಿಗಳ ಸಾಗರ

**ರೈತ ನಾಯಕ, ಮಾಜಿ ಮುಖ್ಯಮಂತ್ರಿ, ಬಿ.ಎಸ್. ಯಡಿಯೂರಪ್ಪನವರ ರಾಜಕೀಯ ಜೀವನಕ್ಕೆ 50 ವರ್ಷ**

- ದೀವಟಿಗೆ : ಸಾಂಸ್ಕೃತಿಕ ಲೋಕದ ಧ್ರುವತಾರೆ ಎಸ್. ಆರ್. ರಾಮಸ್ವಾಮಿ ...........05
- ಬಂಗಾಳದಲ್ಲಿ ಕೇಸರಿ ಉದಯ, ನನಸಾದ ಶ್ಯಾಮಪ್ರಸಾದ್ ಮುಖರ್ಜಿ ಕನಸು ......13
- ಅಸ್ಸಾಂ ಗೆಲುವಿನಲ್ಲಿ ಮೋದಿ-ಶರ್ಮಾ ಮೋಡಿ..................................16
- ಪುದುಚೇರಿ ವಿಧಾನಸಭಾ ಚುನಾವಣೆ 2026 .........................................19
- ಕೇರಳವೂ ಬದಲಾಗುವುದು ಖಚಿತ.....................................................21
- ತಮಿಳುನಾಡು ಅಸೆಂಬ್ಲಿ ಚುನಾವಣೆ 2026 – ಅದರ ಸೋಲಿಗೆ ಬಿಜೆಪಿಯನ್ನು ದೂಷಿಸಬಹುದೇ ..........................................................................23
- 2011ರ ಜನಗಣತಿಯ ಆಧಾರ ಮತ್ತು ಮಸೂದೆಯ ತುರ್ತು ಉದ್ದೇಶ – ಕೇಂದ್ರ ಗೃಹ ಸಚಿವ ಅಮಿತ್ ಶಾ ಅವರು ಲೋಕಸಭೆಯಲ್ಲಿ ಮಾಡಿದ ಭಾಷಣದ ಸಾರಾಂಶ........25
- ನಾರಿ ಶಕ್ತಿಯ ಹೆಜ್ಜೆಗೆ ಕಾಂಗ್ರೆಸ್ ವಿರೋಧ ಖಂಡಿಸಿ ''ನಾರಿ ಶಕ್ತಿ ಫೋರಂ'' ವತಿಯಿಂದ ಬೃಹತ್ ಪ್ರತಿಭಟನೆ ...............................................................28
- ಕಾರ್ಯಕರ್ತರ ಹೃದಯದಲ್ಲಿ ಶಾಶ್ವತವಾಗಿ ಉಳಿದ ಜಗದೀಶ್ ಹಿರೇಮನಿ............30
- **ಹಿರಿಯ ಕಾರ್ಯಕರ್ತರ ಪರಿಚಯಮಾಲೆ :** ಜೈಲಿನಲ್ಲಿ ಕೈದಿಗಳಿಂದಲೇ ಮಾರಕ ದಾಳಿಗೀಡಾದರು – ಡಿ.ಎಂ. ರಂಗನಾಥ .......................................31
- **ಚರ್ಚೆಗೊಂದು ಸಾಲು :** ಪ್ರತೀ ಚುನಾವಣೆಗಳೂ ಹೊಸ ಕಾರ್ಯಕರ್ತನ ಅನ್ವೇಷಣೆಗೆ ಸಿಗುವ ಒಂದು ಅವಕಾಶ.........................................................32
- **ಮಾಸದ ಮಾಧುರ್ಯ :** 109ನೇ ಕಾರ್ಯಕ್ರಮದಲ್ಲಿ ಅಭಿನಯ ತರಂಗ ವತಿಯಿಂದ – ಶಬ್ದಾನುಸಂಧಾನ..............................................................33
- **ಮನ್ ಕಿ ಬಾತ್ :** ಜನರ ಸಹಭಾಗಿತ್ವ ದೇಶದ ಅಭಿವೃದ್ಧಿ..............................34
- **ಸಮಷ್ಟಿ** – ಸಜ್ಜನರ ಮೌನ, ದುರ್ಜನರ ಕ್ರಿಯಾಶೀಲತೆ..............................36



# ಸಾಂಸ್ಕೃತಿಕ ಲೋಕದ ಧ್ರುವತಾರೆ
# ಎಸ್. ಆರ್. ರಾಮಸ್ವಾಮಿ

ಡಾ. ಹರೀಶ್ ಆತ್ರೇಯ
ಕಾರ್ಯಕರ್ತರು

**ಖ್ಯಾ**ತ ವಿದ್ವಾಂಸರು, ಹಿರಿಯ ಪತ್ರಕರ್ತರು ಮತ್ತು ಸಾಂಸ್ಕೃತಿಕ ಲೋಕದ ಧ್ರುವತಾರೆಯಾಗಿದ್ದ ಎಸ್.ಆರ್. ರಾಮಸ್ವಾಮಿ ಅವರು ಕಳೆದ ತಿಂಗಳು ಇಹಲೋಕ ತ್ಯಜಿಸಿದ್ದು ಕರ್ನಾಟಕದ ಬೌದ್ಧಿಕ ಕ್ಷೇತ್ರಕ್ಕೆ ತುಂಬಲಾರದ ನಷ್ಟ. ಎಂಟು ದಶಕಗಳ ಕಾಲ ನಿರಂತರವಾಗಿ ಜ್ಞಾನೋಪಾಸನೆಯಲ್ಲಿ ತೊಡಗಿದ್ದ ಅವರು, ಕೇವಲ ಒಬ್ಬ ಲೇಖಕರಾಗಿರದೆ ಒಂದು ನಡೆಯುವ ವಿಶ್ವಕೋಶದಂತಿದ್ದರು.

### ಡಿ.ವಿ.ಜಿ ಅವರ 'ನಯನ' ಮತ್ತು ಬೌದ್ಧಿಕ ಉತ್ತರಾಧಿಕಾರಿ

ಎಸ್. ಆರ್. ರಾಮಸ್ವಾಮಿ ಅವರ ಜೀವನದಲ್ಲಿ ಮಹತ್ವದ ಘಟ್ಟವೆಂದರೆ ಅದು ಆಧುನಿಕ ಕರ್ನಾಟಕದ ಮಹರ್ಷಿ ಡಿ.ವಿ. ಗುಂಡಪ್ಪ (ಡಿವಿಜಿ) ಅವರೊಂದಿಗಿನ ಒಡನಾಟ. ಡಿವಿಜಿಯವರ ಜೀವನದ ಅಂತ್ಯಕಾಲದಲ್ಲಿ ಅವರ ದೃಷ್ಟಿ ಕ್ಷೀಣಿಸಿದಾಗ, ರಾಮಸ್ವಾಮಿಯವರು ಅವರ ಕಣ್ಣಾಗಿ ಕಾರ್ಯನಿರ್ವಹಿಸಿದರು. ಡಿವಿಜಿಯವರು ಡಿಕ್ಟೇಟ್ ಮಾಡುತ್ತಿದ್ದ ವಿಚಾರಗಳನ್ನು ಅಕ್ಷರರೂಪಕ್ಕೆ ಇಳಿಸುವ ಮೂಲಕ, ಅವರ ಅನೇಕ ಅಮೂಲ್ಯ ಕೃತಿಗಳು ಲೋಕಾರ್ಪಣೆಯಾಗಲು ರಾಮಸ್ವಾಮಿ ಕಾರಣರಾದರು. ಡಿವಿಜಿಯವರ 'ಗೋಖಲೆ ಸಾರ್ವಜನಿಕ ವಿಚಾರ ಸಂಸ್ಥೆ'ಯನ್ನು ದಶಕಗಳ ಕಾಲ ಅತ್ಯಂತ ಶಿಸ್ತಿನಿಂದ ಮುನ್ನಡೆಸಿದ ಅವರು, ಅದರ ಗೌರವ ಕಾರ್ಯದರ್ಶಿ ಮತ್ತು ಅಧ್ಯಕ್ಷರಾಗಿ ಸಂಸ್ಥೆಯ ಘನತೆಯನ್ನು ಎತ್ತಿ ಹಿಡಿದರು.

### ರಾಷ್ಟ್ರೋತ್ಥಾನದ ರೂವಾರಿ ಮತ್ತು ಸಾಹಿತ್ಯ ಸೇವೆ

ರಾಷ್ಟ್ರೀಯ ಸ್ವಯಂಸೇವಕ ಸಂಘದ (RSS) ಪ್ರೇರಣೆಯೊಂದಿಗೆ ಕಾರ್ಯನಿರ್ವಹಿಸುವ ರಾಷ್ಟ್ರೋತ್ಥಾನ ಪರಿಷತ್ ನ 'ರಾಷ್ಟ್ರೋತ್ಥಾನ ಸಾಹಿತ್ಯ'ದ ಮುಖ್ಯಸ್ಥರಾಗಿ ರಾಮಸ್ವಾಮಿಯವರ ಸೇವೆ ಅನನ್ಯವಾದುದು.

ಅವರ ಸಂಪಾದಕತ್ವದಲ್ಲಿ ಹೊರಬಂದ 'ಭಾರತ-ಭಾರತಿ' ಪುಸ್ತಕ ಮಾಲೆ ಕರ್ನಾಟಕದ ಮನೆಮನೆಗೆ ದೇಶಪ್ರೇಮದ ಸಂದೇಶ ತಲುಪಿಸಿತು.

ವೈಚಾರಿಕ ಸಾಹಿತ್ಯ, ಕಲೆ, ಆರ್ಥಿಕತೆ ಮತ್ತು ಪರಿಸರದ ಬಗ್ಗೆ ಅವರು ನೂರಾರು ಪುಸ್ತಕಗಳನ್ನು ಬರೆದಿದ್ದಾರೆ.


'ಉತ್ಥಾನ' ಮಾಸಪತ್ರಿಕೆಯ ಸಂಪಾದಕರಾಗಿ ಪತ್ರಿಕೋದ್ಯಮಕ್ಕೆ ಹೊಸ ದಿಕ್ಕು ನೀಡಿದರು. 'ಸುಧರ್ಮ' ಸಂಸ್ಕೃತ ದಿನಪತ್ರಿಕೆಯ ಸಲಹೆಗಾರರಾಗಿಯೂ ಅವರು ಮಾರ್ಗದರ್ಶನ ನೀಡಿದ್ದರು.

### ಬಹುಮುಖಿ ವ್ಯಕ್ತಿತ್ವ ಮತ್ತು ಸರಳ ಜೀವನ

ಎಸ್. ಆರ್. ರಾಮಸ್ವಾಮಿಯವರು ಕೇವಲ ಸಾಹಿತ್ಯಕ್ಕೆ ಸೀಮಿತವಾಗಿರಲಿಲ್ಲ. ಸಮಾಜದ ಪ್ರಚಲಿತ ವಿದ್ಯಮಾನಗಳ ಬಗ್ಗೆ ಅವರಿಗೆ ಅಪಾರ ಹಿಡಿತವಿತ್ತು. ಪರಿಸರ ಹೋರಾಟಗಾರರಾಗಿ ಕುಸುಮಬಾಲೆ ಅಂತಹ ಹೋರಾಟಗಳಿಗೆ ಬೌದ್ಧಿಕ ಬೆಂಬಲ ನೀಡಿದ್ದರು. ಭಾರತೀಯ ಕೃಷಿ ಪದ್ಧತಿ ಮತ್ತು ಸ್ವದೇಶಿ ಆರ್ಥಿಕ ಚಿಂತನೆಗಳ ಬಗ್ಗೆ ಅವರು ಗಾಢವಾದ ಪಾಂಡಿತ್ಯ ಹೊಂದಿದ್ದರು.

ಅವರ ಬರವಣಿಗೆಯಲ್ಲಿ ಯಾವುದೇ ಆಡಂಬರವಿಲ್ಲದೆ ನೇರ ಹಾಗೂ ತರ್ಕಬದ್ಧ ವಿಚಾರಗಳಿರುತ್ತಿದ್ದವು. ಇಷ್ಟೆಲ್ಲಾ ಸಾಧನೆ ಮಾಡಿದರೂ ಅವರು ಅತೀ ಸರಳ ವ್ಯಕ್ತಿತ್ವದವರಾಗಿದ್ದರು. 2015ರಲ್ಲಿ ಅವರಿಗೆ ರಾಜ್ಯೋತ್ಸವ ಪ್ರಶಸ್ತಿ ಸೇರಿದಂತೆ ಅನೇಕ ಗೌರವಗಳು ಸಂದಿದ್ದರೂ, ಅವರು ಎಂದಿಗೂ ಪ್ರಚಾರ ಬಯಸಿದವರಲ್ಲ.

ಎಸ್. ಆರ್. ರಾಮಸ್ವಾಮಿ ಅವರ ನಿಧನದಿಂದ ಒಂದು ಜ್ಞಾನ ಯುಗಾಂತ್ಯವಾಗಿದೆ. ಸನಾತನ ಮೌಲ್ಯಗಳನ್ನು ಆಧುನಿಕ ಜಗತ್ತಿಗೆ ಪರಿಚಯಿಸಿದ, ಸ್ವದೇಶಿ ಪರಂಪರೆಯ ಪರವಾಗಿ ದನಿಯೆತ್ತಿದ ಮತ್ತು ಡಿವಿಜಿಯವರ ಆದರ್ಶಗಳನ್ನು ಪಾಲಿಸಿದ ಅವರು ಎಂದೆಂದಿಗೂ ಸ್ಮರಣೀಯರು. ಅವರ ಬದುಕು ಮತ್ತು ಬರಹಗಳು ಮುಂದಿನ ತಲೆಮಾರಿನ ಲೇಖಕರಿಗೆ ಮತ್ತು ಚಿಂತಕರಿಗೆ ಸದಾ ದಾರಿದೀಪ.




# ಅಭಿಮಾನೋತ್ಸವದಲ್ಲಿ ಅಭಿಮಾನಿಗಳ ಸಾಗರ

**ರೈತ ನಾಯಕ, ಮಾಜಿ ಮುಖ್ಯಮಂತ್ರಿ ಶ್ರೀ ಬಿ.ಎಸ್. ಯಡಿಯೂರಪ್ಪನವರ ರಾಜಕೀಯ ಜೀವನಕ್ಕೆ 50 ವರ್ಷ**




ರೈತ ನಾಯಕ, ಮಾಜಿ ಮುಖ್ಯಮಂತ್ರಿ ಶ್ರೀ ಬಿ.ಎಸ್. ಯಡಿಯೂರಪ್ಪನವರ ರಾಜಕೀಯ ಜೀವನ 50 ವರ್ಷ ಪೂರೈಸಿರುವ ಅಂಗವಾಗಿ ನಗರದ ಹೊರವಲಯದ ಮಾದಾರ ಚೆನ್ನಯ್ಯ ಗುರುಪೀಠದ ಬಳಿಯ ಮೈದಾನದಲ್ಲಿ ಶನಿವಾರ ಬಿಎಸ್‌ವೈ ಅಭಿಮಾನೋತ್ಸವ ಹಮ್ಮಿಕೊಳ್ಳಲಾಗಿತ್ತು. ಕಾರ್ಯಕ್ರಮಕ್ಕೆ ಕೇಂದ್ರ ಗೃಹ ಸಚಿವ ಅಮಿತ್ ಶಾ ಸೇರಿದಂತೆ ಕೇಂದ್ರ ಸಚಿವರು, ಮಾಜಿ ಮುಖ್ಯಮಂತ್ರಿಗಳು, ಮಾಜಿ ಸಚಿವರು, ನಾಡಿನ ಅನೇಕ ಮಠಾಧೀಶರು ಆಗಮಿಸಿದ್ದರು.

ಇದಲ್ಲದೇ ನಾಡಿನ ಮೂಲೆ ಮೂಲೆಗಳಿಂದ ಸಾಗರೋಪಾದಿಯಲ್ಲಿ ಅಭಿಮಾನಿಗಳ ದಂಡು ಚಿತ್ರದುರ್ಗಕ್ಕೆ ಹರಿದುಬಂದಿತ್ತು. ಎತ್ತ ನೋಡಿದರೂ ಜನವೋ ಜನ. ನಗರ ಸೇರಿದಂತೆ ನಗರದ ಹೊರವಲಯದ ಹೆದ್ದಾರಿಗಳಲ್ಲಿ ವಾಹನಗಳು ಸಾಲುಗಟ್ಟಿ ನಿಂತಿದ್ದವು. ಇದರಿಂದ ನಗರದ ಸುತ್ತಮುತ್ತಲಿನ ಪ್ರದೇಶ ಸೇರಿದಂತೆ ಸುಮಾರು 40 ಕಿಮೀ ವ್ಯಾಪ್ತಿಯಲ್ಲಿ ಸಂಚಾರ ದಟ್ಟಣೆ ಉಂಟಾಗಿತ್ತು. ಪೊಲೀಸರು ಅಭಿಮಾನಿಗಳನ್ನು ನಿಯಂತ್ರಿಸಿ ಸುಗಮ ಸಂಚಾರಕ್ಕೆ ಅನುವು ಮಾಡಿಕೊಡುವಲ್ಲಿ ಸಾಕು ಸಾಕಾಗಿ ಹೋದರು.

ರಾಜ್ಯದ 224 ವಿಧಾನಸಭಾ ಕ್ಷೇತ್ರಗಳು ಸೇರಿದಂತೆ ಪ್ರತಿ ಕ್ಷೇತಗಳಿಂದ ಸಾವಿರ ಸಾವಿರ ಸಂಖ್ಯೆಯ ಅಭಿಮಾನಿಗಳು ಕಾರ್ಯಕ್ರಮಕ್ಕೆ ನಾಡಿನ ವಿವಿಧಡೆಗಳಿಂದ ಜನಸಾಗರವೇ ಹರಿದುಬಂದಿತ್ತು. ಶನಿವಾರ ಮುಂಜಾನೆಯಿಂದಲೇ ಅಭಿಮಾನಿಗಳು ಕಾರ್ಯಕ್ರಮ ನಡೆಯುವ ಮೈದಾನಕ್ಕೆ ದಾಂಗುಡಿ ಇಟ್ಟಿದ್ದರು. ಇವರ ನಿರ್ವಹಣೆಗೆ ವಿಶೇಷ ತಂಡಗಳನ್ನು ರಚಿಸಲಾಗಿತ್ತು. ನಾಡಿನ ವಿವಿಧ ಜಿಲ್ಲೆಗಳಿಂದ ಬಂದ ಅಭಿಮಾನಿಗಳಿಗೆ ಅಚ್ಚುಕಟ್ಟಾಗಿ ಊಟದ ವ್ಯವಸ್ಥೆ ಮಾಡಲಾಗಿತ್ತು. ಅನೇಕ ಪ್ರಬಂಧಕರು ಸ್ವಯಂಪ್ರೇರಿತರಾಗಿ ಅಭಿಮಾನಿಗಳಿಗೆ ಅಗತ್ಯ ಸೇವೆ ಒದಗಿಸಿದರು.

ಊಟದ ನಿರ್ವಹಣೆಗೆ ಕಾರ್ಯಕ್ರಮ ವೇದಿಕೆಯ ಒಂದೆರಡು ಕಡೆ ವ್ಯವಸ್ಥೆ ಮಾಡಲಾಗಿತ್ತು. ಊಟ ತಯಾರಿಸಲು ಐದಾರು ಕಡೆ ದೊಡ್ಡ ಶೆಡ್‌ಗಳನ್ನು ನಿರ್ಮಿಸಲಾಗಿತ್ತು. ಪ್ರತಿಯೊಂದು ಕಡೆ ನೂರಾರು ಕೌಂಟರ್‌ಗಳನ್ನು ತೆರೆದು ಜನರಿಗೆ ಊಟ, ತಿಂಡಿ ನೀಡಲಾಯಿತು. ಬೆಳಿಗ್ಗೆ ತಿಂಡಿಗೆ ಉಪ್ಪಿಟ್ಟು, ಕೇಸರಿಬಾತ್, ಇಡ್ಲಿ, ವಡೆ, ಸಾಂಬಾರ್ ನೀಡಲಾಯಿತು. ಬಳಿಕ 11 ಗಂಟೆಯ ನಂತರ ಟೊಮೋಟೋ ಬಾತ್, ಪೊಲಾವ್, ಮೊಸರನ್ನ, ಮೈಸೂರುಪಾಕ್ ನೀಡಲಾಯಿತು. ಅಭಿಮಾನಿಗಳು ಹೊಟ್ಟೆತುಂಬ ಊಟ ಮಾಡಿ ಸಂತೃಪ್ತರಾದರು.

ಇದಲ್ಲದೇ ಕಾರ್ಯಕ್ರಮದ ಪೆಂಡಾಲ್‌ನಲ್ಲಿದ್ದ ಜನರಿಗೆ ತಿನ್ನಲು ಬ್ರೆಡ್, ದಿಲ್‌ಕುಷ್, ಬಾಳೆಹಣ್ಣು, ಕುಡಿಯಲು ನೀರಿನ ಬಾಟಲ್‌ಗಳನ್ನು ಕುಳಿತಲ್ಲಿಯೇ ವಿತರಣೆ ಮಾಡಲಾಯಿತು. ಸಾಗರೋಪಾದಿಯಲ್ಲಿ ಅಭಿಮಾನಿಗಳು ನೆರೆದಿದ್ದ ಪರಿಣಾಮ, ಅವರಿಗೆ ನೀಡಲು ತಂದಿದ್ದ ಪರಿಕರಗಳನ್ನು ಪೆಂಡಾಲ್‌ನಲ್ಲಿ ಅಲ್ಲಲ್ಲಿ ರಾಶಿ ಹಾಕಲಾಗಿತ್ತು. ನೆರೆದಿದ್ದ ಜನರಿಗೆ ಅಲ್ಲಲ್ಲಿ ಕುಡಿಯುವ ನೀರು, ಮಜ್ಜಿಗೆ ಪ್ಯಾಕೇಟ್‌ಗಳನ್ನು ವಿತರಿಸಲಾಗುತ್ತಿತ್ತು. ಬಿಸಿಲಿನ ಝಳ ತಪ್ಪಿಸಲು ಅಲ್ಲಲ್ಲಿ ಏರ್ ಕೂಲರ್‌ಗಳು, ಬೃಹತ್ ಗಾತ್ರದ ಫ್ಯಾನ್‌ಗಳನ್ನು ಅಳವಡಿಸಲಾಗಿತ್ತು. ಕಾರ್ಯಕ್ರಮದ ಹಿನ್ನೆಲೆಯಲ್ಲಿ ಸುಮಾರು 3000 ಪ್ರಬಂಧಕರು ಕಳೆದ ಹದಿನೈದು ದಿನಗಳಿಂದ ವಿವಿಧ ಸಮಿತಿಗಳಲ್ಲಿ ಕೆಲಸ ಮಾಡಿದ್ದಾರೆ. ಅಲ್ಲದೇ ಹಾಲಿ ಮತ್ತು ಮಾಜಿ ಶಾಸಕರು ವಿವಿಧ ಜವಾಬ್ದಾರಿಗಳನ್ನು ಹಂಚಿಕೊಂಡು ನಿಭಾಯಿಸಿದರು. ಕಾರ್ಯಕ್ರಮದಲ್ಲಿ ನೆರೆದಿದ್ದ ಅಭಿಮಾನಿಗಳು ವೇದಿಕೆಯಲ್ಲಿದ್ದ ನಾಯಕರುಗಳಿಗೆ ಜೈಕಾರ ಹಾಕುತ್ತಿದ್ದರು. ಕೇಕೆ, ಸಿಳ್ಳೆ ಹಾಕಿ ಸಂಭ್ರಮಿಸಿದರು. ಒಂದು ಹಂತದಲ್ಲಿ ತುದಿಗಾಲಲ್ಲಿ ನಿಂತು ಕಾರ್ಯಕ್ರಮ ವೀಕ್ಷಿಸಿದರು. ಅಮಿತ್ ಶಾ ಭಾಷಣದ ವೇಳೆ ಮೋದಿ, ಮೋದಿ ಎಂದು ಕೂಗುತ್ತಾ ಅಭಿಮಾನ ವ್ಯಕ್ತಪಡಿಸಿದರು.

# ಅಭಿಮಾನೋತ್ಸವದಲ್ಲಿ ಅಭಿಮಾನಿ ಸ್ವಾಮೀಜಿಗಳ ಮಿಲನ



ಮಾಜಿ ಮುಖ್ಯಮಂತ್ರಿ ಶ್ರೀ ಬಿ.ಎಸ್. ಯಡಿಯೂರಪ್ಪ ಅವರ ಅಭಿಮಾನೋತ್ಸವದಲ್ಲಿ ರಾಜ್ಯದ ಎಲ್ಲಾ ವಿಧಾನಸಭಾ ಕ್ಷೇತ್ರಗಳಿಂದ ಲಕ್ಷೋಪಲಕ್ಷ ಸಂಖ್ಯೆಯ ಜನಸಾಗರವು ಹರಿದು ಬಂತು. ಎಲ್ಲರೂ ನಾಯಕರ ಪ್ರಖರ ಮಾತುಗಳನ್ನಾಲಿಸಿ, ತೃಪ್ತ ಭಾವನೆಯಲ್ಲಿ ಹಾಗೂ ಹೊಸ ಹುಮ್ಮಸ್ಸಿನಲ್ಲಿದ್ದದ್ದು ಕಂಡುಬಂತು. ರಾಜ್ಯದ ಮುನ್ನೂರಕ್ಕೂ ಅಧಿಕ ಸ್ವಾಮೀಜಿಗಳನ್ನು ಒಂದೇ ವೇದಿಕೆಯಲ್ಲಿ ಸೇರಿಸಿದ್ದು, ಹಾಗೂ ಮುಖ್ಯ ವೇದಿಕೆಯಲ್ಲಿ ನಾಡಿನ ಪ್ರಮುಖ 15-20 ಸ್ವಾಮೀಜಿಗಳು ಆಸೀನರಾಗಿ ಶ್ರೀ ಯಡಿಯೂರಪ್ಪ ಅವರ ಕೊಡುಗೆಗಳನ್ನು ಮೆಲುಕು ಹಾಕಿದ್ದು ಅಭಿಮಾನೋತ್ಸವಕ್ಕೆ ಮೆರುಗು ನೀಡಿತು.

## ಪುಸ್ತಕ ಬಿಡುಗಡೆ



**ಕಾರ್ಯಕ್ರಮದಲ್ಲಿ ಯಡಿಯೂರಪ್ಪ ಅವರ ಜೀವನ ಚರಿತ್ರೆ, ಕೆಂದಾವರೆ - ಕಮಲ ಅರಳಿದ ಕಥೆ ಹಾಗೂ ವಿಧಾನ ಮಂಡಲದಲ್ಲಿ ಅವರ ಭಾಷಣಗಳ ಸಂಗ್ರಹ ಸದನ ಶಿಕಾರಿ- ಯಡಿಯೂರಪ್ಪ ಅವರ ಗುಡುಗಿನ ನುಡಿಗಳು ಪುಸ್ತಕಗಳನ್ನು ಕೇಂದ್ರ ಗೃಹ ಸಚಿವ ಅಮಿತ್ ಶಾ ಅವರು ಬಿಡುಗಡೆ ಮಾಡಿದರು.**

# ಮೋದಿ ಸಂದೇಶ ವಾಚಿಸಿದ ಕೇಂದ್ರ ಸಚಿವ ಪ್ರಲ್ಹಾದ ಜೋಶಿ



**ಸರಳತೆ, ಕಠಿಣ ಪರಿಶ್ರಮ, ಜನರ ಕಡೆ ಅವರ ಪ್ರೀತಿ, ರಾಜ್ಯದ ಏಳಿಗೆಗಾಗಿ ಯಡಿಯೂರಪ್ಪ ಅವರ ಶ್ರಮ ಅಪಾರವಾದುದು ಎಂದು ಪ್ರಧಾನ ಮಂತ್ರಿ ನರೇಂದ್ರ ಮೋದಿ ಬಣ್ಣಿಸಿದ್ದಾರೆ. ಮಾಜಿ ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ಅವರ ಅಭಿಮಾನೋತ್ಸವದ ಹಿನ್ನೆಲೆಯಲ್ಲಿ ಪ್ರಧಾನಿಯವರು ಕಳುಹಿಸಿದ ಸಂದೇಶವನ್ನು ಕೇಂದ್ರ ಸಚಿವ ಪ್ರಹ್ಲಾದ ಜೋಶಿ ವಾಚಿಸಿದರು. ಬಳಿಕ ಪ್ರಧಾನಿಯವರ ಸಂದೇಶವುಳ್ಳ ಸಂದೇಶ ಫಲಕವನ್ನು ಯಡಿಯೂರಪ್ಪ ಅವರಿಗೆ ಸಲ್ಲಿಸಿದರು.**



**ಆಡಳಿತ ಪಕ್ಷದ ಸೂರ್ಯ ಮುಳುಗುತ್ತಿದೆ, ನಮ್ಮ ಪಕ್ಷದ ಸೂರ್ಯ ಉದಯಿಸುತ್ತಿದೆ. ಮುಂದವರ ಹಡಗು ಮುಳುಗುತ್ತಿದೆ. ನಮ್ಮ ಹಡಗು ದಡ ಸೇರುತ್ತಿದೆ. ಮುಂಬರುವ ದಿನಗಳಲ್ಲಿ ಎಲ್ಲರೂ ಒಗ್ಗಟ್ಟಾಗಿ, ಒಂದಾಗಿ ಯಡಿಯೂರಪ್ಪ ಅವರ ಆಡಳಿತ ಮತ್ತು ಅವರ ಕಾರ್ಯಕ್ರಮಗಳು ಮತ್ತೆ ಕರ್ನಾಟಕದಲ್ಲಿ ಸ್ಥಾಪನೆಯಾಗಬೇಕು.**

**- ಬಸವರಾಜ ಬೊಮ್ಮಾಯಿ, ಸಂಸದರು**



# ಅಭಿಮಾನೋತ್ಸವದಲ್ಲಿ ಅಮಿತ್ ಶಾರವರ ಅಭಿಮಾನದ ನುಡಿ

> ಪಶ್ಚಿಮ ಬಂಗಾಲದಲ್ಲಿ ಇಂದು ಬಿಜೆಪಿಯ ಮುಖ್ಯಮಂತ್ರಿಯ ಪದಗ್ರಹಣ ನಡೆದಿದೆ. ಇದೇ ದಿನ ಯಡಿಯೂರಪ್ಪ ಅವರ 50 ವರ್ಷಗಳ ರಾಜಕೀಯ ಸೇವೆಗೆ ಸಂಬಂಧಿಸಿದ ಕಾರ್ಯಕ್ರಮ ನಡೆಯುತ್ತಿದೆ. ವಿವೇಕಾನಂದರು, ಶ್ಯಾಮಪ್ರಸಾದ ಮುಖರ್ಜಿ ಮೊದಲಾದವರು ಹುಟ್ಟಿದ ನಾಡಿನಲ್ಲಿ ಹೊಸ ಶಕೆ ಆರಂಭವಾಗಿದೆ.
>
> – ಅಮಿತ್ ಶಾ, ಕೇಂದ್ರ ಗೃಹ ಸಚಿವರು



ಬಿಜೆಪಿ ನಾಯಕ ಮತ್ತು ರೈತ ನಾಯಕ ಬಿ.ಎಸ್. ಯಡಿಯೂರಪ್ಪ ಅವರ 5 ದಶಕಗಳ ಸುದೀರ್ಘ ಸಾರ್ವಜನಿಕ ಜೀವನ, ಹೋರಾಟವು ಯುವಜನತೆಗೆ ಮಾದರಿ ಎಂದು ಕೇಂದ್ರ ಗೃಹ ಸಚಿವ ಅಮಿತ್ ಶಾ ಅವರು ತಿಳಿಸಿದ್ದಾರೆ. ನಗರದ ಮಾದಾರ ಚೆನ್ನಯ್ಯ ಪೀಠದ ಪಕ್ಕದ ಮೈದಾನದಲ್ಲಿ ಶನಿವಾರ ಆಯೋಜಿಸಿದ್ದ ಬಿ.ಎಸ್. ಯಡಿಯೂರಪ್ಪ ಅವರ ರಾಜಕೀಯ ಜೀವನದ ಸುವರ್ಣೋತ್ಸವದ ಅಂಗವಾಗಿ ಏರ್ಪಡಿಸಿದ ಬಿಎಸ್‌ವೈ ಅಭಿಮಾನೋತ್ಸವದಲ್ಲಿ ಅವರನ್ನು ಅಭಿನಂದಿಸಿ ಮಾತನಾಡಿದರು.

ಜನಸೇವೆ, ರೈತರ ಕಲ್ಯಾಣಕ್ಕಾಗಿ ಯಡಿಯೂರಪ್ಪ ಅವರು ದುಡಿದವರು. ಕರ್ನಾಟಕದ ಮುಖ್ಯಮಂತ್ರಿಯಾಗಿಯೂ ಅವರು ಸೇವೆ ಸಲ್ಲಿಸಿದ್ದಾರೆ. ಇರುವ ರಸ್ತೆಯಲ್ಲೇ ಚಲಿಸುವವರು, ಹೊಸದಾಗಿ ಮಾರ್ಗದರ್ಶನ ಮಾಡುವವರು ಇರುತ್ತಾರೆ. ಯಡಿಯೂರಪ್ಪ ಅವರು ಮಾರ್ಗದರ್ಶನ ಮಾಡುವ ನಾಯಕರಾಗಿ ಹೊರಹೊಮ್ಮಿದ್ದಾರೆ. ಅವರು ಸಾಧಾರಣ ಕುಟುಂಬದಿಂದ ಬಂದವರು. ಅವರ ಇಚ್ಛಾಶಕ್ತಿ, ಸಂಘದ ಸಂಸ್ಕಾರ, ರಾಷ್ಟ್ರಭಕ್ತಿಯು ಅವರ ಜೀವನದುದ್ದಕ್ಕೂ ಮಾರ್ಗದರ್ಶನ ನೀಡಿದೆ ಎಂದು ತಿಳಿಸಿದರು. ದಕ್ಷಿಣ ಭಾರತದಲ್ಲಿ ಯಡಿಯೂರಪ್ಪ ಅವರಂಥ ಹೋರಾಟಗಾರ ಯಾರೂ ಇಲ್ಲ. ಬಸ್ಸು ಅಥವಾ ಸೈಕಲ್ಲಿನಲ್ಲಿ ಹಳ್ಳಿಗಳಿಗೆ ತೆರಳಿ ತಮ್ಮ ಹೋರಾಟದ ಜೀವನ ನಡೆಸಿದ್ದಾರೆ. ಸಾವಿರಾರು ಕಿ.ಮೀ. ಪಾದಯಾತ್ರೆ, ಮಾಡಿ ರೈತರ ಪರವಾಗಿ ಹೋರಾಟ ಮಾಡಿದವರು. ಈ ಮೂಲಕ ರೈತ ನಾಯಕರಾಗಿ ಹೊರಹೊಮ್ಮಿದರು. ಇದಕ್ಕಾಗಿ ಅವರು ಜೈಲುವಾಸ ಅನುಭವಿಸಬೇಕಾಯಿತು ಎಂದರು.

2014ರಿಂದ ಕರ್ನಾಟಕಕ್ಕೆ ಬರುತ್ತಿದ್ದೇನೆ. ಅಲ್ಲಿಂದ ಈವರೆಗೆ ಸ್ವಾಮೀಜಿಗಳ ಜತೆ ಅನೇಕ ವೇದಿಕೆಗಳನ್ನು ಹಂಚಿಕೊಂಡಿದ್ದೇನೆ. ಯಡಿಯೂರಪ್ಪ ಅವರ ವ್ಯಕ್ತಿತ್ವದಿಂದ ಎಲ್ಲ ಮತ-ಸಂಪ್ರದಾಯಗಳ ಸ್ವಾಮೀಜಿಗಳು ಇಲ್ಲಿದ್ದಾರೆ. ಯಡಿಯೂರಪ್ಪ ಅವರದು ಮಾದರಿ ಜೀವನವಾಗಿದೆ. ಬಿಜೆಪಿ, ದಕ್ಷಿಣ ಭಾರತದಲ್ಲಿ ಬಿಜೆಪಿಯನ್ನು ಕಟ್ಟಿ ಬೆಳೆಸಿದವರ ದಾಖಲೆ ಬರೆಯುವಾಗ ದೊಡ್ಡ ನಾಯಕರಾಗಿ ಯಡಿಯೂರಪ್ಪ ಅವರು ಇರುತ್ತಾರೆ. ಸಮಾಜವನ್ನು ಪ್ರೀತಿಸುವ ಯಡಿಯೂರಪ್ಪ ಅವರು ಹಸಿರು ಶಾಲಿನೊಂದಿಗೆ ಕೃಷಿ ಬಜೆಟ್ ಮಂಡಿಸಿದವರು ಎಂದು ವಿವರಿಸಿದರು. ಯಡಿಯೂರಪ್ಪ ಅವರು ಶತಾಯುಷಿಯಾಗಲಿ ಎಂದು ಹಾರೈಸಿದರು.



# ತ್ಯಾಗ, ಪರಿಶ್ರಮ, ಹೋರಾಟಕ್ಕೆ ಮತ್ತೊಂದು ಹೆಸರೇ ಯಡಿಯೂರಪ್ಪ

## ಬಿಎಸ್‌ವೈ ಧೀಮಂತ ನಾಯಕ: ವಿಜಯೇಂದ್ರ

ನಾಡು ಕಂಡ ಧೀಮಂತ ರೈತ ನಾಯಕ ಬಿ.ಎಸ್. ಯಡಿಯೂರಪ್ಪ ಅವರು ಅಧಿಕಾರಕ್ಕಾಗಿ ಹೋರಾಟ ಮಾಡಲಿಲ್ಲ. ಬದಲಿಗೆ ಜನರಿಗಾಗಿ ಹೋರಾಟ ಮಾಡಿದವರು. ತ್ಯಾಗ, ಪರಿಶ್ರಮ, ಹೋರಾಟಕ್ಕೆ ಮತ್ತೊಂದು ಹೆಸರೇ ಯಡಿಯೂರಪ್ಪ ಎಂದು ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ. ವಿಜಯೇಂದ್ರ ಹೇಳಿದರು.

ಅಭಿಮಾನೋತ್ಸವದಲ್ಲಿ ಮಾತನಾಡಿದ ಅವರು, ಬಿಎಸ್‌ವೈ ಅವರು ಜನನಾಯಕರಾದವರು. ನನ್ನಂತಹ ಅನೇಕರಿಗೆ ಪ್ರೇರಣೆಯಾದವರು. ಇಂದು ಈ ಅಭಿಮಾನೋತ್ಸವಕ್ಕೆ ರಾಜ್ಯದ ಮೂಲೆ ಮೂಲೆಗಳಿಂದ ಜನರು ಬಂದಿರುವುದು ನೋಡಿದರೆ ಬಿಎಸ್‌ವೈ ಅವರ ಮೇಲೆ ಎಂತಹ ಅಭಿಮಾನವಿದೆ ಎಂಬುದು ತಿಳಿಯುತ್ತದೆ. ಇದೊಂದು ಐತಿಹಾಸಿಕ ಕ್ಷಣ. ಬಿಎಸ್‌ವೈ ಅವರ ಐವತ್ತು ವರ್ಷಗಳ ರಾಜಕೀಯ ಜೀವನಕ್ಕೆ ಗೌರವ ಸಲ್ಲಿಸುವ ಕ್ಷಣ ಎಂದು ಹೇಳಿದರು.

ಚಿತ್ರದುರ್ಗದ ಪುಣ್ಯಭೂಮಿ ವೀರರ ಭೂಮಿಯಾಗಿದೆ. ಕರ್ನಾಟಕದ ಇತಿಹಾಸದಲ್ಲಿ ಮೊದಲ ಬಾರಿಗೆ ಎಲ್ಲಾ ಜಾತಿ ಪಂಥಗಳ ಸ್ವಾಮೀಜಿಯವರು ಒಂದೇ ವೇದಿಕೆಯಲ್ಲಿದ್ದಾರೆ. ಕರ್ನಾಟಕದ ಲಕ್ಷಾಂತರ ಅಭಿಮಾನಿಗಳು ಯಡಿಯೂರಪ್ಪ ಅವರನ್ನು ತಮ್ಮ ನಾಯಕರೆಂದು ಕೊಂಡಾಡುತ್ತಿದ್ದಾರೆ ಎಂದರು.

**ಜನಹಿತಕ್ಕಾಗಿ ಹೋರಾಟ:** ಅಧಿಕಾರಕ್ಕಾಗಿ ಹೋರಾಟ ಅಲ್ಲ, ಜನರ ಹಿತಕ್ಕಾಗಿ ಹೋರಾಟ ನಡೆಸಿದವರು. ಬಿಎಸ್‌ವೈ ಅವರ ಹೋರಾಟಗಳನ್ನು ನಾನು ಹತ್ತಿರದಿಂದ ನೋಡಿದ್ದೇನೆ. ಅವರು ತಮ್ಮ ಜೀವನದಲ್ಲಿ ಅನೇಕ ಏಳುಬೀಳುಗಳನ್ನು ಕಂಡಿದ್ದಾರೆ. ಜೀವನದುದ್ದಕ್ಕೂ ಯಾವುದೇ ಸವಾಲುಗಳು ಬಂದರೂ ಬೆನ್ನು ತೋರಿಸಿ ಓಡಿ ಹೋದವರಲ್ಲ. ಯಾವುದೇ ರಾಜಕೀಯ ಷಡ್ಯಂತ್ರ, ಸವಾಲು ಬಂದರೂ ಅದನ್ನು ಧೈರ್ಯವಾಗಿ ಎದುರಿಸಿದವರು ಎಂದು ವಿವರಿಸಿದರು.

ರಾಜ್ಯದ ಇತಿಹಾಸದಲ್ಲಿ ರೈತರ ಹೆಸರಿನಲ್ಲಿ ಪ್ರಮಾಣವಚನ ಸ್ವೀಕರಿಸಿದ ಮುಖ್ಯಮಂತ್ರಿ ಯಡಿಯೂರಪ್ಪ ಅವರು, ರೈತರಿಗಾಗಿ ಬಜೆಟ್ ಮಂಡಿಸಿದವರು. ಭಾಗ್ಯಲಕ್ಷ್ಮಿ ಬಾಂಡ್ ಯೋಜನೆ ಆರಂಭಿಸಿ ಹೆಣ್ಣು ಶಾಪ ಅಲ್ಲ ಎಂಬ ಭಾವನೆಯನ್ನು ಮೂಡಿಸಿದವರು. ರಾಜ್ಯದ ಎಲ್ಲ ಮಠಗಳಿಗೆ ಅನುದಾನ ನೀಡಿ ಆರ್ಥಿಕ ಶಕ್ತಿ ತುಂಬಿದವರು ಎಂದು ಹೇಳಿದರು.

ಜನರ ಅಪೇಕ್ಷೆಯಂತೆ ಪ್ರೀತಿ, ವಿಶ್ವಾಸ ಉಳಿಸಿಕೊಂಡು ಕೆಲಸ ಮಾಡುತ್ತೇನೆ. ಕಡಿಮೆ ಅವಧಿಯಲ್ಲಿ ಈ ಕಾರ್ಯಕ್ರಮ ಆಯೋಜನೆ ಮಾಡಿದ್ದೇವೆ. ನಿಮ್ಮೆಲ್ಲರ ಸಹಕಾರ ಸದಾ ಇರಲಿ ಎಂದರು.

ಚುನಾವಣಾ ಚಾಣಕ್ಯ ಎಂದೇ ಹೆಸರು ಪಡೆದಿರುವ ಗೃಹ ಅಮಿತ್ ಶಾ ಅವರು, ಪಶ್ಚಿಮ ಬಂಗಾಳದಲ್ಲಿ ಬಿಜೆಪಿ ಸರ್ಕಾರದ ಪ್ರಮಾಣವಚನ ಸಮಾರಂಭದಲ್ಲಿ ಭಾಗಿಯಾಗಿ ಪುಣ್ಯಭೂಮಿ ಚಿತ್ರದುರ್ಗಕ್ಕೆ ಬಂದಿದ್ದಾರೆ ಅವರಿಗೆ ನಾಡಿನ ಜನತೆಯ ಪರವಾಗಿ ಧನ್ಯವಾದ ಎಂದರು.



**ಇಡೀ ಹಿಂದು ಧರ್ಮ ಮತ್ತು ಸನಾತನ ಧರ್ಮದ ಉಳಿವಿಗಾಗಿ ಸಂಘಟನೆಯ ಅಶ್ವಮೇಧವನ್ನು ಬಿಟ್ಟಿದ್ದೇವೆ. ಅದನ್ನು ತಡೆಯುವ ಶಕ್ತಿ ಯಾರಿಗೂ ಇಲ್ಲ. ಯಡಿಯೂರಪ್ಪ ಅವರ ಹೋರಾಟದ ರಾಜಕಾರಣವೆಂದರೆ ಹೌದಪ್ಪಗಳ ಚಾವಡಿಯಲ್ಲ, ಬಡವರ ಪರವಾಗಿ ಹೋರಾಟ ಮಾಡುವಂತಹ ಹೋರಾಟದ ಅಂಗಳ.**

**– ಕೋಟ ಶ್ರೀನಿವಾಸ ಪೂಜಾರಿ, ಸಂಸದರು**

# ಕಾಗಿನೆಲೆ ಅಭಿವೃದ್ಧಿಗೆ ಅತಿಹೆಚ್ಚು ಅನುದಾನ





**ಧಾರ್ಮಿಕ ಕೇಂದ್ರಗಳಿಗೆ ಅನುದಾನ ನೀಡಿದ ಪ್ರಥಮ ಮುಖ್ಯಮಂತ್ರಿ. ಅವರ ಮೇಲಿನ ಅಭಿಮಾನಕ್ಕೆ ಎಲ್ಲ ಮಠಾಧೀಶರು ಇಲ್ಲಿಗೆ ಆಗಮಿಸಿದ್ದಾರೆ. ಇದೊಂದು ಸಾರ್ಥಕ ಸಮಾರಂಭ. ಮುಂದೊಂದು ದಿನ ಅಮೃತ ಮಹೋತ್ಸವ, ಶತಮಾನೋತ್ಸವ ಆಚರಿಸುವಂತಾಗಲಿ.**

**– ಶ್ರೀ ಪ್ರಸನ್ನ ವೀರಸೋಮೇಶ್ವರ ಶಿವಾಚಾರ್ಯ ಸ್ವಾಮೀಜಿ, ರಂಭಾಪುರೀ ಪೀಠ.**

ರೈತ ನಾಯಕ, ಮಾಜಿ ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ಹುಟ್ಟು ಹೋರಾಟಗಾರ. ಸೈಕಲ್ ಮೇಲೆ ರಾಜ್ಯ ಪ್ರವಾಸ ಮಾಡಿ ಪಕ್ಷ ಸಂಘಟನೆ ಮಾಡಿ ವಿಧಾನಸೌಧದ ಗದ್ದುಗೆ ಏರಿದರು ಎಂದು ಕಾಗಿನೆಲೆ ಕನಕ ಗುರುಪೀಠದ ಶ್ರೀ ನಿರಂಜನಾನಂದಪುರಿ ಸ್ವಾಮೀಜಿ ಬಣ್ಣಿಸಿದರು.

ಮಾಜಿ ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪನವರ ರಾಜಕೀಯ ಜೀವನಕ್ಕೆ 50 ವರ್ಷಗಳು ತುಂಬಿರುವ ಹಿನ್ನೆಲೆಯಲ್ಲಿ ನಗರದ ಹೊರ ವಲಯದ ಶಿವ ಶರಣ ಮಾದಾರ ಚೆನ್ನಯ್ಯ ಗುರುಪೀಠದ ಬಳಿಯ ಮೈದಾನದಲ್ಲಿ ಶನಿವಾರ ನಡೆದ ಬಿಎಸ್‌ವೈ ಅಭಿಮಾನೋತ್ಸವ ಕಾರ್ಯಕ್ರಮದಲ್ಲಿ ಭಾಗವಹಿಸಿ ಅವರು ಮಾತನಾಡಿದರು.

ಇಂದಿನ ಕನಕ ಜಯಂತಿ ಆಚರಣೆ ಬಿ.ಎಸ್. ಯಡಿಯೂರಪ್ಪನವರ ಕೊಡುಗೆ. ಕಾಗಿನೆಲೆ ಅಭಿವೃದ್ಧಿಗೆ ಅತಿಹೆಚ್ಚು ಅನುದಾನ ನೀಡಿ ರಾಷ್ಟ್ರೀಯ ಪ್ರವಾಸಿ ತಾಣ ಮಾಡಿದರು. ಕೊಟ್ಟ ಮಾತಿನಂತೆ ನಡೆದವರು ಯಡಿಯೂರಪ್ಪ. ಮೈಲಾರದಲ್ಲಿ ಶಾಲೆ ಆರಂಭಿಸಲು ಅಗತ್ಯ ಅನುದಾನಕ್ಕೆ 10 ಕೋಟಿ ಹಣ ನೀಡಿದರು. ಇವರ ಬಗ್ಗೆ ಮಾತನಾಡಲು ಸಮಯ ಸಾಕಾಗುವುದಿಲ್ಲ. ದೇವರು ಇವರಿಗೆ ನೂರಾರು ವರ್ಷ ಆಯಸ್ಸು, ಆರೋಗ್ಯ ಕೊಟ್ಟು ಕಾಪಾಡಲಿ. ಇವರಿಂದ ರಾಜ್ಯಕ್ಕೆ ಇನ್ನೂ ಉತ್ತಮ ಸೇವೆ ದೊರೆಯುವಂತಾಗಲಿ ಎಂದು ಆಶಿಸಿದರು.

### ಇತಿಹಾಸ ಪುಟ ಸೇರುವ ಕಾರ್ಯಕ್ರಮ

ಶ್ರೀ ಫಕೀರ ದಿಂಗಾಲೇಶ್ವರ ಸ್ವಾಮೀಜಿ ಮಾತನಾಡಿ, ರಾಜ್ಯದಲ್ಲಿ ಇದೊಂದು ಇತಿಹಾಸ ಪುಟ ಸೇರುವ ಕಾರ್ಯಕ್ರಮ. ಬಿಎಸ್‌ವೈ ಅಭಿಮಾನಿಗಳ ಜನಸಾಗರವೇ ಇಲ್ಲಿ ಸೇರಿದೆ. ಹಾಗಾಗಿ ಅಭಿಮಾನೋತ್ಸವವನ್ನು ಎಂಟನೇ ಅದ್ಭುತ ಎಂದು ಹೇಳಬಹುದು. ಶ್ರೀರಾಮನ ಪಟ್ಟಾಭಿಷೇಕದ ನಂತರ ಈ ದೇಶದಲ್ಲಿ ನಡೆದ ಅತಿದೊಡ್ಡ ಕಾರ್ಯಕ್ರಮ ಈ ಅಭಿಮಾನೋತ್ಸವ. ಅಭಿಮಾನಿಗಳು ಸ್ವಯಂಪ್ರೇರಣೆಯಿಂದ ಬಂದು ಇಲ್ಲಿ ಸೇರಿದ್ದಾರೆ. ರೈತಪರ ಹೋರಾಟಕ್ಕಾಗಿ ತನ್ನ ಜೀವನವನ್ನೇ ಮುಡಿಪಾಗಿಟ್ಟವರು ಬಿಎಸ್‌ವೈ. ಎಷ್ಟೋ ಜನ ಅವರನ್ನು ಮುಗಿಸಲು ನೋಡಿದರು. ಆದರೆ ಜನರ ಪ್ರೀತಿಯಿಂದ ಅದು ಸಾಧ್ಯವಾಗಿಲ್ಲ ಎಂದರು.

ಮೈಸೂರಿನ ಸುತ್ತೂರು ಮಠದ ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ, ಆದಿಚುಂಚನಗಿರಿ ಮಠದ ಡಾ. ಶ್ರೀ ನಿರ್ಮಲಾನಂದ ಸ್ವಾಮೀಜಿ, ಶ್ರೀ ಮಾದಾರ ಚೆನ್ನಯ್ಯ ಸ್ವಾಮೀಜಿ, ಭೋವಿ ಗುರುಪೀಠದ ಶ್ರೀ ಇಮ್ಮಡಿ ಸಿದ್ದರಾಮೇಶ್ವರ ಸ್ವಾಮೀಜಿ, ಹರಿಹರ ಪಂಚಮಸಾಲಿ ಗುರುಪೀಠದ ಶ್ರೀ ವಚನಾನಂದ ಸ್ವಾಮೀಜಿ ಮಾತನಾಡಿದರು.

ವಾರಣಾಸಿ ಕಾಶೀ ಪೀಠದ ಶ್ರೀ ಚಂದ್ರಶೇಖರ ಸ್ವಾಮೀಜಿ, ಸಿದ್ಧಗಂಗಾ ಮಠದ ಶ್ರೀ ಸಿದ್ಧಲಿಂಗ ಸ್ವಾಮೀಜಿ ಬೆಕ್ಕಿನಕಲ್ಮಠದ ಶ್ರೀ ಮುರುಘರಾಜೇಂದ್ರ ಸ್ವಾಮೀಜಿ, ಶ್ರೀ ಬಸವಕುಮಾರ ಸ್ವಾಮೀಜಿ, ಶ್ರೀ ಬ್ರಹ್ಮಾನಂದ ಸರಸ್ವತಿ ಸ್ವಾಮೀಜಿ, ಸಿರಿಗೆರೆ ಡಾ. ಶ್ರೀ ಶಿವಮೂರ್ತಿ ಶಿವಾಚಾರ್ಯ ಸ್ವಾಮೀಜಿ, ಉಡುಪಿ ಶ್ರೀ ವಿಶ್ವಪ್ರಸನ್ನತೀರ್ಥ ಸ್ವಾಮೀಜಿ, ಶ್ರೀ ಶಾಂತವೀರ ಸ್ವಾಮೀಜಿ, ಶ್ರೀ ಸೋಮಶೇಖರ ಸ್ವಾಮೀಜಿ, ಸರ್ದಾರ್ ಸೇವಾಲಾಲ್ ಸ್ವಾಮೀಜಿ, ಶ್ರೀ ಕೃಷ್ಣ ಯಾದವಾನಂದ ಸ್ವಾಮೀಜಿ, ಶ್ರೀ ಬಸವ ಗುಂಡಯ್ಯ ಸ್ವಾಮೀಜಿ, ಭಗೀರಥ ಗುರುಪೀಠದ ಶ್ರೀ ಪುರುಷೋತ್ತಮಾನಂದ ಸ್ವಾಮೀಜಿ, ಡಾ. ಶ್ರೀ ಪಂಡಿತಾರಾಧ್ಯ ಶಿವಾಚಾರ್ಯ ಸ್ವಾಮೀಜಿ ಸೇರಿದಂತೆ ನಾಡಿನ ನೂರಾರು ಮಠಾಧೀಶರು ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು.

# ನನ್ನ ಜೀವನದ ಪರ್ವ ದಿನ, ಇದು ಜನರಿಗೆ ಕೃತಜ್ಞತೆ ಸಲ್ಲಿಸುವ ದಿನ

# ಪಕ್ಷಕ್ಕಾಗಿ ಪ್ರಾಮಾಣಿಕ ಕೆಲಸ: ಯಡಿಯೂರಪ್ಪ



ನನ್ನ ಜೀವನದ ಕೊನೆಯ ಉಸಿರು ಇರುವವರೆಗೂ ವಿರಮಿಸುವುದಿಲ್ಲ. ದೇಶಕ್ಕಾಗಿ, ಪಕ್ಷಕ್ಕಾಗಿ ಪ್ರಾಮಾಣಿಕ ಕೆಲಸ ಮಾಡುತ್ತೇನೆ ಎಂದು ಮಾಜಿ ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ಹೇಳಿದರು. ಬಿಎಸ್‌ವೈ ಅಭಿಮಾನೋತ್ಸವ ಕಾರ್ಯಕ್ರಮದಲ್ಲಿ ಸನ್ಮಾನ ಸ್ವೀಕರಿಸಿ ಮಾತನಾಡಿದ ಅವರು, ಇದು ನನ್ನ ಜೀವನದ ಪರ್ವ ದಿನ. ಇದು ಜನರಿಗೆ ಕೃತಜ್ಞತೆ ಸಲ್ಲಿಸುವ ದಿನ. ನಾನಿಂದು ರಾಜಕೀಯ ನಾಯಕನಾಗಿ ನಿಂತಿಲ್ಲ. ನಿಮ್ಮ ಮಗನಾಗಿ ನಿಂತಿದ್ದೇನೆ. ನಿಮ್ಮ ಅಭಿಮಾನದ ಜನಸಾಗರದ ಮುಂದೆ ನನ್ನ ಮಾತು ಬರುತ್ತಿಲ್ಲ, ಜನ್ಮ ಜನ್ಮಾಂತರದಲ್ಲೂ ನಾನು ಋಣಿಯಾಗಿರುತ್ತೇನೆ ಎಂದು ತಿಳಿಸಿದರು.

ತುರ್ತು ಪರಿಸ್ಥಿತಿಯಲ್ಲಿ ಸೆರೆವಾಸ ಅನುಭವಿಸಿರುವುದರಿಂದ ಹಿಡಿದು, ಅನೇಕ ಹೋರಾಟ ಮಾಡಿ ಬಂದಿದ್ದೇನೆ. ನನಗೆ ಸಂಸ್ಕಾರ ಕೊಟ್ಟ ಆರ್‌ಎಸ್‌ಎಸ್ (ರಾಷ್ಟ್ರೀಯ ಸ್ವಯಂಸೇವಕ ಸಂಘ)ನ್ನು ಎಂದಿಗೂ ಮರೆಯುವುದಿಲ್ಲ. ನಾನೊಬ್ಬ ಸ್ವಯಂಸೇವಕ ಎನ್ನಲು ನನಗೆ ಹೆಮ್ಮೆ ಇದೆ. ಸರ್ದಾರ್ ವಲ್ಲಭಭಾಯಿ ಪಟೇಲ್ ಬಳಿಕ, ಉಕ್ಕಿನ ಗೃಹಸಚಿವ ಅಮಿತ್ ಶಾ ಅವರಿಗೆ ಧನ್ಯವಾದಗಳು ಎಂದರು.

ಎಲ್ಲಾ ವೇದಿಕೆಯ ಮೇಲಿರುವ ಪೂಜ್ಯರಿಗೆ ನನ್ನ ವಂದನೆಗಳು. ಅಭಿಮಾನೋತ್ಸವ ಬಗ್ಗೆ ಈಗಾಗಲೇ ಅನೇಕರು ಅಭಿಪ್ರಾಯ ಹಂಚಿಕೊಂಡಿದ್ದಾರೆ. ಬಸವಣ್ಣ ಅವರ ಇವನಾರವ ಇವನಾರವ ಎನ್ನದೇ ಯಡಿಯೂರಪ್ಪ ನಮ್ಮವ ಎಂದು ಎಲ್ಲರೂ ಭಾವಿಸಿದ್ದೀರಿ. ನನ್ನ ದೇಹದಲ್ಲಿ ಉಸಿರಿರುವವರೆಗೆ ವಿರಮಿಸುವುದಿಲ್ಲ. ರಾಷ್ಟ್ರಕ್ಕಾಗಿ ಮತ್ತು ಪಕ್ಷಕ್ಕಾಗಿ ಶ್ರಮಿಸುವುದಾಗಿ ಯಡಿಯೂರಪ್ಪ ಹೇಳಿದರು.

**ಕಾರ್ಯಕ್ರಮದಲ್ಲಿ ಹಾಜರಿದ್ದ ಗಣ್ಯರು :** ಬಿಜೆಪಿ ರಾಷ್ಟ್ರೀಯ ಸಂಘಟನಾ ಕಾರ್ಯದರ್ಶಿ ಶ್ರೀ ಬಿ.ಎಲ್. ಸಂತೋಷ್, ಕೇಂದ್ರ ಸಚಿವ ಶ್ರೀ ಪ್ರಹ್ಲಾದ್ ಜೋಷಿ, ಕು.ಶೋಭಾ ಕರಂದ್ಲಾಜೆ, ಶ್ರೀ ವಿ. ಸೋಮಣ್ಣ, ಬಿಜೆಪಿ ರಾಜ್ಯ ಉಸ್ತುವಾರಿ ಶ್ರೀ ರಾಧಾ ಮೋಹನ್ ಅಗರವಾಲ್, ಶ್ರೀ ಸುಧಾಕರ ರೆಡ್ಡಿ, ಸಂಸದರಾದ ಶ್ರೀ ಗೋವಿಂದ ಕಾರಜೋಳ, ಶ್ರೀ ಬಿ.ವೈ. ರಾಘವೇಂದ್ರ, ಶ್ರೀ ಡಾ. ಮಂಜುನಾಥ್, ಶ್ರೀ ಕೋಟ ಶ್ರೀನಿವಾಸ್ ಪೂಜಾರಿ, ಮಾಜಿ ಮುಖ್ಯಮಂತ್ರಿಗಳಾದ ಶ್ರೀ ಸದಾನಂದ ಗೌಡ, ಶ್ರೀ ಜಗದೀಶ್ ಶೆಟ್ಟರ್, ಶ್ರೀ ಬಸವರಾಜ ಬೊಮ್ಮಾಯಿ, ಮಾಜಿ ಸಂಸದ ಶ್ರೀ ಪ್ರಭಾಕರ್ ಖೋರೆ, ವಿಧಾನಸಭೆ ವಿರೋಧ ಪಕ್ಷದ ನಾಯಕ ಶ್ರೀ ಆರ್. ಅಶೋಕ್, ವಿಧಾನ ಪರಿಷತ್ ವಿರೋಧ ಪಕ್ಷದ ನಾಯಕ ಶ್ರೀ ಚಲವಾದಿ ನಾರಾಯಣಸ್ವಾಮಿ, ಮಾಜಿ ಸಂಸದ ಶ್ರೀ ಜಿ.ಎಂ. ಸಿದ್ಧೇಶ್ವರ್, ಪರಿಷತ್ ಸದಸ್ಯ ಶ್ರೀ ಸಿ.ಟಿ. ರವಿ, ಮಾಜಿ ಸಚಿವ ಶ್ರೀ ಅಶ್ವತ್ಥ ನಾರಾಯಣ, ಶ್ರೀ ಎ. ನಾರಾಯಣಸ್ವಾಮಿ, ಶಾಸಕ ಡಾ.ಎಂ. ಚಂದ್ರಪ್ಪ, ಮಾಜಿ ಶಾಸಕ ಶ್ರೀ ಜಿ.ಹೆಚ್. ತಿಪ್ಪಾರೆಡ್ಡಿ, ಮಾಜಿ ಸಚಿವ ಶ್ರೀ ಬಿ.ಸಿ. ಪಾಟಿಲ್, ಶ್ರೀ ರೇಣುಕಾಚಾರ್ಯ ಮತ್ತಿತರರು ಭಾಗವಹಿಸಿದ್ದರು.



# ಬಂಗಾಳದಲ್ಲಿ ಕೇಸರಿ ಉದಯ, ನನಸಾದ ಶ್ಯಾಮಪ್ರಸಾದ್ ಮುಖರ್ಜಿ ಕನಸು



ರಾಕೇಶ್ ಶೆಟ್ಟಿ
ಲೇಖಕರು

ಬಿಜೆಪಿಯ ರಾಷ್ಟ್ರೀಯ ಸಂಘಟನಾ ಪ್ರಧಾನ ಕಾರ್ಯದರ್ಶಿ ಶ್ರೀ ಬಿ.ಎಲ್. ಸಂತೋಷ್ ಅವರು, 'ಬಂಗಾಳ ನಮಗೆ ರಾಜಕೀಯ ಯುದ್ಧವಲ್ಲ, ನಾಗರಿಕತೆಯ ಯುದ್ಧ. ಬಂಗಾಳದ ಗೆಲುವಿನಲ್ಲಿ ಭಾರತದ ಗೆಲುವಿದೆ' ಎಂದಿದ್ದರು. ಈ ನಾಗರಿಕತೆಯ ಯುದ್ಧವನ್ನು ಬಿಜೆಪಿ ಗೆದ್ದಿದೆ. ಬಿಜೆಪಿಯ ಈ ಗೆಲುವು ಸುವರ್ಣ ಬಾಂಗ್ಲಾ ಉದಯಕ್ಕೆ ನಾಂದಿಯಾಗಲಿದೆ.

'ಬಂಗಾಳ ಇಂದು ಯೋಚಿಸುವುದನ್ನು ಭಾರತ ನಾಳೆ ಯೋಚಿಸುತ್ತದೆ' ಎನ್ನುವ ಕಾಲವೊಂದಿತ್ತು. ಸ್ವಾತಂತ್ರ್ಯಪೂರ್ವದ ಬಂಗಾಳದ ಸಾಂಸ್ಕೃತಿಕ, ಬೌದ್ಧಿಕ ಸಾಮರ್ಥ್ಯದ ಕನ್ನಡಿಯಂತಿದೆ ಈ ಮಾತು. ಯಾರೇ ವಿನಃ ಹೇಳಿ? ರಾಮಕೃಷ್ಣ ಪರಮಹಂಸರು, ಸ್ವಾಮಿ ವಿವೇಕಾನಂದರು, ಮಹರ್ಷಿ ಅರವಿಂದರು, ರವೀಂದ್ರನಾಥ ಟಾಗೋರ್, ಸುಭಾಷ್ ಚಂದ್ರ ಬೋಸ್, ರಾಸ್ ಬಿಹಾರಿ ಬೋಸ್, ಪರಮಹಂಸ ಯೋಗಾನಂದ, ಜಗದೀಶ್ ಚಂದ್ರ ಬೋಸ್, ಶ್ಯಾಮಪ್ರಸಾದ್ ಮುಖರ್ಜಿ... ಹೀಗೆ ಖ್ಯಾತನಾಮ ಬಂಗಾಳಿಗಳ ಪಟ್ಟಿ ಬೆಳೆಯುತ್ತಲೇ ಹೋಗುತ್ತದೆ.

ಭಾರತದ ಸ್ವಾತಂತ್ರ್ಯ ಹೋರಾಟದ ಕೇಂದ್ರಸ್ಥಾನ ಬಂಗಾಳವೇ ಆಗಿತ್ತು. ಬ್ರಿಟಿಷರು ಭಾರತ ಬಿಟ್ಟು ಹೋಗುವಲ್ಲಿ ನಿರ್ಣಾಯಕ ಪಾತ್ರ ನಿರ್ವಹಿಸಿದವರು ಬಂಗಾಳದ ಮಣ್ಣಿನಿಂದ ಬಂದ ಸುಭಾಷ್ ಚಂದ್ರ ಬೋಸ್. ಅಂತಹ ಬಂಗಾಳದ ಭಾಗ್ಯ ಸ್ವಾತಂತ್ರ್ಯದ

| ಒಟ್ಟು ಸ್ಥಾನಗಳು | 293 |
| --- | --- |
| ಬಿಜೆಪಿ | 208 |
| ಟಿಎಂಸಿ | 79 |
| ಕಾಂಗ್ರೆಸ್ | 02 |
| ಇತರೆ | 04 |



## ಗೆಲುವಿನ ಹಿಂದೆ ಕನ್ನಡಿಗರ ಶ್ರಮ



ಈಗ ಬಿಜೆಪಿ ಗೆದ್ದಿದೆ. ಜನಸಂಘದ ಸ್ಥಾಪಕ ಶ್ಯಾಮಪ್ರಸಾದ್ ಮುಖರ್ಜಿಯವರ ಕನಸು ನನಸಾಗಿದೆ. ಬಿಜೆಪಿಯ ರಾಷ್ಟ್ರೀಯ ಸಂಘಟನಾ ಕಾರ್ಯದರ್ಶಿ ಶ್ರೀ ಬಿ.ಎಲ್ ಸಂತೋಷ್ ಅವರು, ’ಬಂಗಾಳ ನಮಗೆ ರಾಜಕೀಯ ಯುದ್ಧವಲ್ಲ, ನಾಗರಿಕತೆಯ ಯುದ್ಧ. ಬಂಗಾಳದ ಗೆಲುವಿನಲ್ಲಿ ಭಾರತದ ಗೆಲುವಿದೆ’ ಎಂದಿದ್ದರು.



ವಿಧಾನ ಪರಿಷತ್ ಸದಸ್ಯರಾದ ಶ್ರೀ ಸಿ.ಟಿ. ರವಿಯವರು ದಕ್ಷಿಣ 24 ಪರಗಣ ಹಾಗೂ ಉತ್ತರ 24 ಪರಗಣ ಭಾಗವೂ ಸೇರಿದಂತೆ ಕಲ್ಕತ್ತಾ ವಿಭಾಗದ 63 ಕ್ಷೇತ್ರಗಳಲ್ಲಿ ನಿರಂತರವಾಗಿ ಚುನಾವಣಾ ಪ್ರಭಾರಿಯಾಗಿ ಕಾರ್ಯನಿರ್ವಹಿಸಿ ಬಂಗಾಳದ ಬಿಜೆಪಿ ಗೆಲುವಿನಲ್ಲಿ ತಮ್ಮದೇ ಆದ ಯೋಗದಾನವನ್ನು ನೀಡಿದರು.



ಈ ನಾಗರಿಕತೆಯ ಯುದ್ಧವನ್ನು ಬಿಜೆಪಿ ಗೆದ್ದಿದೆ. ಮುಖ್ಯ ವಿಷಯವೇನೆಂದರೆ, ಈ ಹೋರಾಟದಲ್ಲಿ ನಮ್ಮ ಕರ್ನಾಟಕದ ಮುದ್ದಿಗೆರೆಯ ಯುವಕ ಶ್ರೀ ಅರುಣ್ ಬಿನ್ನಡಿ ಪ್ರಮುಖ ಪಾತ್ರ ವಹಿಸಿದರು. ನಾರ್ತ್ ಝೋನ್ ಸಿಲಿಗುರಿ ವಿಭಾಗ ಸಂಘಟನಾ ಪ್ರಧಾನ ಕಾರ್ಯದರ್ಶಿಯಾಗಿ ಹೋಗಿದ್ದ ಅರುಣ್ 28 ಕ್ಷೇತ್ರಗಳಲ್ಲಿ 26 ಕ್ಷೇತ್ರವನ್ನು ಗೆಲ್ಲಿಸಿದ್ದಾರೆ. ಇದೇನು ಸುಲಭದ ಕಾರ್ಯವಾಗಿರಲಿಲ್ಲ ಎನ್ನುವುದು ಅವರ ಜೊತೆ ಮಾತಾಡಿದಾಗ ಅರ್ಥವಾಗುತ್ತದೆ. ಬೂತ್ ಮಟ್ಟದ ಸಭೆಗಳನ್ನು ನಡೆಸಲು ಸಹ ಟಿಎಂಸಿ ಗೂಂಡಾಗಳು ಬಿಡುತ್ತಿರಲಿಲ್ಲ, ಅಂತಹ ಕಡೆ ತುದಿಗಾಲಲ್ಲಿ ನಿಂತು ತಂದಿರುವ ಗೆಲುವಿದು. ಇಂಥ ಪರಿಶ್ರಮದ ಫಲವಾಗಿ ದೊರೆತಿರುವ ಬಿಜೆಪಿಯ ಗೆಲುವು ಸುವರ್ಣ ಬಾಂಗ್ಲಾ ಉದಯಕ್ಕೆ ನಾಂದಿಯಾಗಲಿ.

## ಬೇಡುವುದಿಲ್ಲ, ಉಳಿಸುವುದಿಲ್ಲ

ಭಾರತದ ಉಳಿದ ರಾಜ್ಯಗಳ ಚುನಾವಣೆಗಳು ಆಡಳಿತ ವಿರೋಧಿ ಅಲೆ, ಪ್ರಣಾಳಿಕೆ, ಅಭಿವೃದ್ಧಿ ಕಾರ್ಯ ಇತ್ಯಾದಿಗಳ ಮೇಲೆ ನಡೆದರೆ ಬಂಗಾಳದಲ್ಲಿ ಹಾಗೆ ನಡೆಯುವ ಪರಿಸ್ಥಿತಿಯಿಲ್ಲ. ಟಿಎಂಸಿ ಪಕ್ಷದವರು ತಮಗೆ ಮತ ಹಾಕಿ ಎಂದು ಮತದಾರರಲ್ಲಿ ಬೇಡುವುದಿಲ್ಲ, ತಮಗೆ ಮತ ಹಾಕದಿದ್ದರೆ ನಿಮ್ಮನ್ನು ಉಳಿಸುವುದಿಲ್ಲ ಎನ್ನುತ್ತಾರೆ. ಕಮ್ಯುನಿಸ್ಟರ ಆಡಳಿತವಿದ್ದ ಕೇರಳ, ತ್ರಿಪುರದಲ್ಲೂ ಇದೇ ಪರಿಸ್ಥಿತಿಯಿತ್ತು. ತ್ರಿಪುರಾದಲ್ಲಿ ಬಿಜೆಪಿ ಆಡಳಿತ ಬಂದ ನಂತರ ಅಲ್ಲಿ ಪರಿಸ್ಥಿತಿ ಬದಲಾಯಿತು. ಕೇರಳದಲ್ಲಿ ಇನ್ನು ನಿಂತಿದ್ದು 2017ರಲ್ಲಿ ಬಿಜೆಪಿ ನಡೆಸಿದ ಜನ ಸುರಕ್ಷಾ ಯಾತ್ರೆಯ ನಂತರ. ಸೋಶಿಯಲ್ ಮೀಡಿಯಾ ಕಾಲದಲ್ಲಿ ಹಿಂಸಾಚಾರ ನಡೆಸಿ ಮುಚ್ಚಿಡುವುದು ಸುಲಭವಲ್ಲ ಎಂಬ ಕನಿಷ್ಠ ನಾಚಿಕೆ ಕೇರಳದ ಕಮ್ಯುನಿಸ್ಟರಿಗೆ ಬಂತು. ಆದರೆ ಮಮತಾರಿಗೆ ಯಾವುದೂ ಲೆಕ್ಕಕ್ಕಿರಲಿಲ್ಲ. ಇಂತಹ ರಾಜ್ಯದಲ್ಲಿ ಬದಲಾವಣೆ ಸುಲಭವಿರಲಿಲ್ಲ. ಆದರೆ ಕಾಲ ಎಲ್ಲಕ್ಕೂ ದಾರಿ ಮಾಡಿಕೊಡುತ್ತದೆ.

ನಂತರ ಒಮ್ಮೆಯೂ ವಾಗಿ ಚಲಿಸದಿರಲಾರಂಭಿಸಿತು. ’ಭಾರತ ಇಂದು ಸಾಧಿಸುವುದನ್ನು ಬಂಗಾಳ ನಾಳೆ-ನಾಡಿದ್ದಾದರೂ ಸಾಧಿಸಬಲ್ಲದೇ?’ ಎಂದು ಕೇಳಿಕೊಳ್ಳುವಂತಹ ಸ್ಥಿತಿಗೆ ರಾಜಕೀಯ ಪಕ್ಷಗಳು ತಂದು ನಿಲ್ಲಿಸಿದವು.

### ದುರಾಡಳಿತಕ್ಕೆ ನಲುಗಿದ ಬಂಗಾಳ

ಬಂಗಾಳಿಗಳ ಬಗ್ಗೆ ಯೋಚಿಸುವಾಗ ಕನಿಕರವಾಗುತ್ತದೆ. ಸ್ವಾತಂತ್ರ್ಯದ ನಂತರದ ಬರೋಬ್ಬರಿ 30 ವರ್ಷವನ್ನು ಕಾಂಗ್ರೆಸ್ (ಐಎನ್‌ಸಿ ಮತ್ತು ಬಂಗಾಳ ಕಾಂಗ್ರೆಸ್) ಕೈಗೆ ಕೊಟ್ಟು ಪೆಟ್ಟು ತಿಂದು, ನಂತರ 34 ವರ್ಷಗಳ ಕಾಲ ಕಮ್ಯುನಿಸ್ಟರ ಕಪಿಮುಷ್ಟಿಯಲ್ಲಿ ಸಿಲುಕಿ ನರಳಾಡಿ, ಕಡೆಗೆ ಮಮತಾ ಬ್ಯಾನರ್ಜಿಯ ತೃಣಮೂಲ ಕಾಂಗ್ರೆಸ್ ಪಕ್ಷದ ಕೈಗೆ ರಾಜ್ಯದ ಚುಕ್ಕಾಣಿಯನ್ನು ಕೊಟ್ಟು ಬೆಂಕಿಯಿಂದ ಬಾಣಲೆಗೆ ಬಿದ್ದ ದುಸ್ಥಿತಿ ಬಂಗಾಳಿಗಳದ್ದು. ಕಮ್ಯುನಿಸ್ಟರ ಹಿಂಸಾಚಾರ, ಓಲೈಕೆಯ ರಾಜಕಾರಣವನ್ನು ವಿರೋಧಿಸುತ್ತಲೇ 2011ರಲ್ಲಿ ಅಧಿಕಾರಕ್ಕೇರಿದ ಮಮತಾ ನಂತರ ಅಳವಡಿಸಿಕೊಂಡಿದ್ದು ಮಾತ್ರ ಕಮ್ಯುನಿಸ್ಟರ ಹಿಂಸಾಚಾರ ಮತ್ತು ಓಲೈಕೆಯ ರಾಜಕಾರಣವನ್ನೇ.

### ಸವಾಲಿನ ಹಾದಿಯಲ್ಲಿ ಬಿಜೆಪಿ

34 ವರ್ಷಗಳ ಕಮ್ಯುನಿಸ್ಟರ ದುರಾಡಳಿತ ಕೊನೆಯಾಗಿದ್ದು ನಂದಿಗ್ರಾಮದಲ್ಲಿ ಮಮತಾ ನಡೆಸಿದ ಹೋರಾಟ. ಆಗ ಅವರ ಬೆಂಬಲಕ್ಕೆ ನಿಂತಿದ್ದು ಬಿಜೆಪಿ. ಎನ್‌ಡಿಎ ಜೊತೆಗಿನ ಸಂಬಂಧ ಕಮ್ಯುನಿಸ್ಟರ ವಿರುದ್ಧದ ಹೋರಾಟದ ಇಂಧನವಾಗಿತ್ತು. ಆದರೆ ಅಧಿಕಾರಕ್ಕೇರಿದ ನಂತರ ಅದೇ ಬಿಜೆಪಿಯನ್ನು ಮಮತಾ ಉಳಿಯಲು

ಬಿಡಲಿಲ್ಲ. ಬಿಜೆಪಿ ಕಾರ್ಯಕರ್ತರ ಹತ್ಯೆ, ಹೆಣ್ಣುಮಕ್ಕಳ ಅತ್ಯಾಚಾರ ಮುಂದುವರಿಯಿತು. 2014ರ ಲೋಕಸಭಾ ಚುನಾವಣೆಯಲ್ಲಿ ದೇಶಾದ್ಯಂತ ಮೋದಿ ಅಲೆಯಿದ್ದಾಗ ಬಂಗಾಳದಲ್ಲಿ ಗೆದ್ದಿದ್ದು 2 ಸೀಟು. ಆದರೆ 2019ರ ವೇಳೆಗೆ ಬಂಗಾಳದ ದೊಡ್ಡ ಬೌದ್ಧಿಕ ವರ್ಗ ಬಿಜೆಪಿ ಪರಗೆ ಬಂದಿತು. ಪರಿಣಾಮವಾಗಿ 18 ಸೀಟುಗಳನ್ನು ಪಡೆಯಿತು. 2021ರ ಚುನಾವಣೆ ವೇಳೆಗೆ ಒಂದು ಕಾಲದ ಮಮತಾ ಬಲಗೈಯಾಗಿದ್ದ ಸುವೆಂದು ಅಧಿಕಾರಿ ಬಿಜೆಪಿಗೆ ಬಂದರು. ಆಗ ಆಷಾಢ ರಂಗೇರಿತು. ಟಿಎಂಸಿ ಗೂಂಡಾಗಳ ವ್ಯಾಪಕ ಹಿಂಸಾಚಾರದ ನಡುವೆಯೂ ಬಿಜೆಪಿ 77 ಸೀಟು ಗೆದ್ದಿತು.

ಬಿಜೆಪಿಯ ವೈಫಲ್ಯದಿಂದ ಬುಸುಗುಟ್ಟುತ್ತಿದ್ದ ಮಮತಾ ಚುನಾವಣೆಯ ಬಹಿರಂಗ ಪ್ರಚಾರದಲ್ಲಿ 'ಕೇಂದ್ರದ ಭದ್ರತಾ ಪಡೆಗಳು ಎಂದು ತುಂಬಾ ಮೆರೆಯಬೇಡಿ. ಅವರು ಹೋದ ನಂತರ ಪೇಲಾ ಹೋಗ್' ಎಂದಿದ್ದರು. ಫಲಿತಾಂಶದ ನಂತರ ಈ ಮಾತನ್ನು ಟಿಎಂಸಿ ಗೂಂಡಾಗಳು ಅಕ್ಷರಶಃ ಮಾಡಿ ತೋರಿಸಿದರು. ಬಿಜೆಪಿ ಕಾರ್ಯಕರ್ತರ ರಕ್ತ ಹರಿಯಿತು. 300ಕ್ಕೂ ಹೆಚ್ಚು ಜೀವಗಳು ಹೋದವು. ಹೆಣ್ಣುಮಕ್ಕಳ ಅತ್ಯಾಚಾರ, ಮನೆಗಳು ಸುಟ್ಟು ಕರಕಲಾದವು. 2024ರ ಲೋಕಸಭಾ ಚುನಾವಣೆಯಲ್ಲಿ ಬೂತ್ ಏಜೆಂಟರೂ ಸಿಗದ ಪರಿಸ್ಥಿತಿಯಿತ್ತು, ಪರಿಣಾಮ ಬಿಜೆಪಿ 6 ಸೀಟು ಕಳೆದುಕೊಂಡು 12ಕ್ಕೆ ಇಳಿಯಿತು.

### ಬಂಗಾಳಿಗಳ ಬಡಿದೆಬ್ಬಿಸಿದ ಘಟನೆ

2024ರಲ್ಲಿ ಕೊಲ್ಕತ್ತಾದ ಆರ್ ಜಿ ಕರ್ ಮೆಡಿಕಲ್ ಕಾಲೇಜಿನಲ್ಲಿ ಹೆಣ್ಣುಮಗಳ ಮೇಲೆ ಅತ್ಯಾಚಾರ, ಕೊಲೆಯಾಯಿತು. ಪ್ರಾಂಶುಪಾಲ ಹಾಗೂ ಸ್ಥಳೀಯ ಪೊಲೀಸರು ಅತ್ಯಾಹತ್ಯೆ ಎಂದು ಕತೆ ಕಟ್ಟಿದರು. ಇದರ ವಿರುದ್ಧ ಸುಮಾರು 42 ದಿನಗಳ ಕಾಲ ವೈದ್ಯರು ಬೃಹತ್ ಹೋರಾಟ ನಡೆಸಿದರು.





ಈ ಘಟನೆ ಬಂಗಾಳದ ಅಂತಸತ್ವವನ್ನು ಬಡಿದೆಬ್ಬಿಸಿತು. ಮಮತಾ ದುರಾಡಳಿತದ ಅಂತ್ಯ ಆರಂಭವಾಗಿದ್ದೇ ಇಲ್ಲಿಂದ. ಈ ಹೆಣ್ಣುಮಗಳ ತಾಯಿ ರತ್ನ ದೇವನಾಥ್ ಅವರಿಗೆ ಬಿಜೆಪಿ ಈ ಬಾರಿ ಟಿಕೆಟ್ ನೀಡಿತು. ಅಕ್ಕ ಮತ ಬೇಡಲು ಹೋದಾಗ ಹೆಣ್ಣುಮಕ್ಕಳೆಲ್ಲ ಆ ತಾಯಿಯನ್ನು ಅಪ್ಪಿ ಅಳುತ್ತಾ ನಿಮ್ಮ ಜೊತೆ ನಾವಿದ್ದೇವೆ ಎನ್ನುತ್ತಿದ್ದರು. ಈಗ ರತ್ನ ಗೆದ್ದು ಶಾಸಕಿಯಾಗಿದ್ದಾರೆ.

ರಾಷ್ಟ್ರಮಟ್ಟದಲ್ಲಿ ಸದ್ದು ಮಾಡಿದ ಇನ್ನೊಂದು ಭಯಾನಕ ಕೇಸ್ ಸಂದೇಶಖಾಯಾದ್ದು. ಪಡಿತರ ಹಗರಣದ ಆರೋಪದ ಮೇಲೆ ಟಿಎಂಸಿಯ ಶೇಖ್ ಶಹಜಾಹನ್ ಕಚೇರಿಯ ಮೇಲೆ ಇ.ಡಿ ದಾಳಿ ಮಾಡಿದಾಗ ಟಿಎಂಸಿ ಗೂಂಡಾಗಳು ಅಧಿಕಾರಿಗಳ ಮೇಲೆ ಮಾರಣಾಂತಿಕ ದಾಳಿ ಮಾಡಿದರು. ಇದೇ ಶಹಜಾಹನ್ ಮತ್ತವನ ತಂಡ ಊರಿನ ಹೆಣ್ಣುಮಕ್ಕಳನ್ನು ವಶಕ್ಕೆ ಕರೆಸಿಕೊಂಡು ಅತ್ಯಾಚಾರವನ್ನು ಮಾಡುತ್ತಿತ್ತು. ರೈತರ ಜಮೀನಿಗೆ ಉಪ್ಪು ನೀರನ್ನು ಸುರಿದು ಬರಡು ಮಾಡಿ ಜಮೀನನ್ನು ಕಬಳಿಕೆ ಮಾಡುತ್ತಿತ್ತು. ಜನರ ತಾಳ್ಮೆ ಕಟ್ಟೆಯೊಡೆದಾಗ ಅದರ ನೇತೃತ್ವ ವಹಿಸಿದ ದಿಟ್ಟ ಹೆಣ್ಣು ರೇಖಾ ಪಾತ್ರ. ಅವರೂ ಈಗ ಶಾಸಕಿಯಾಗಿದ್ದಾರೆ. ಶಹಜಾಹನ್ ಜೈಲಿನಲ್ಲಿದ್ದಾನೆ.

ಈ 2 ಘಟನೆಗಳ ಜೊತೆಗೆ ನೆರೆಯ ಬಾಂಗ್ಲಾದೇಶದಲ್ಲಿ ನಡೆದ ಹಿಂದೂಗಳ ಹತ್ಯೆ, ವಲಸೆಯ ಬಂಗಾಳಿಗಳನ್ನು ಬಡಿದೆಬ್ಬಿಸಿತು. ಏನೇ ಧೈರ್ಯ ಮಾಡಿ ನಿಂತರೂ ಟಿಎಂಸಿಯ ಗೂಂಡಾಗಿರಿ ವಿರುದ್ಧ ಬಡಿದಾಡಲು ಒಂದು ಹೆಗಲು ಬೇಕಿತ್ತು, ಬಿಜೆಪಿ ಆ ಹೆಗಲಾಯಿತು. ನಾನಾ ಕೇಸುಗಳಿಗೆ ಒಳಗಾಗಿ ಹೋಗಿದ್ದ ಕಾರ್ಯಕರ್ತರನ್ನು ಬಡಿದೆಬ್ಬಿಸಿ ಹೋದಂದು ನಿಮ್ಮ ಕುಟುಂಬದ ಜೊತೆ ನಾವಿದ್ದೇವೆ ಎಂದು ಧೈರ್ಯ ತುಂಬಲಾಯಿತು. ಕೇಂದ್ರದ ಭದ್ರತಾ ಪಡೆಗಳು ಟಿಎಂಸಿಯ ಆರ್ಭಟಕ್ಕೆ ಬ್ರೇಕ್ ಹಾಕಿ, ನಿರ್ಭಯವಾಗಿ ಬಂದು ಮತ ಚಲಾಯಿಸುವ ವಾತಾವರಣ ನಿರ್ಮಿಸಿದವು.



# ಅಸ್ಸಾಂ ಗೆಲುವಿನಲ್ಲಿ ಮೋದಿ-ಶರ್ಮಾ ಮೋಡಿ

| | | | | |
|---|---|---|---|---|
| ಬಿಜೆಪಿ | 102 | ಒಟ್ಟು ಸ್ಥಾನಗಳು 126 | ಎಐಯುಡಿಎಫ್ | 02 |
| ಕಾಂಗ್ರೆಸ್ | 21 | | ಇತರೆ | 01 |

**ಅ**ಸ್ಸಾಂ ವಿಧಾನಸಭಾ ಚುನಾವಣೆಯಲ್ಲಿ ಭಾರತೀಯ ಜನತಾ ಪಕ್ಷದ ಸತತ ಜಯಗಳಿಕೆಯಲ್ಲಿ ಮತ್ತು ಈಶಾನ್ಯ ಭಾರತದಲ್ಲಿ ಪಕ್ಷವನ್ನು ಒಂದು ಅಜೇಯ ಶಕ್ತಿಯನ್ನಾಗಿ ರೂಪಿಸುವಲ್ಲಿ ಶ್ರೀ ಹಿಮಂತ ಬಿಸ್ವ ಶರ್ಮ ಅವರ ವ್ಯಕ್ತಿತ್ವ ಹಾಗೂ ಅವರ ಜನಪ್ರಿಯತೆ ಅತ್ಯಂತ ನಿರ್ಣಾಯಕ ಪಾತ್ರ ವಹಿಸಿವೆ.

ಶತಮಾನದ ರಾಜಕಾರಣದಲ್ಲಿ 'ಮಾಮ' ಎಂದು ಯುವ ಮತ್ತು ಮಹಿಳಾ ಸಮುದಾಯದ ಮುಂದೆ ಕರೆಯಲ್ಪಡುವ ಶರ್ಮ ಅವರಿಗೆ ಅಸ್ಸಾಂನ ತಳವಮಟ್ಟದ ಸಾಮಾಜಿಕ ಮತ್ತು ರಾಜಕೀಯ ಸಮೀಕರಣಗಳನ್ನು ಅತ್ಯಂತ ಸೂಕ್ಷ್ಮವಾಗಿ ಅರಿತ ಒಬ್ಬ ದಕ್ಷ ಸಂಘಟಕರಾಗಿ ಅನುಭವ ಇತ್ತು. ಹಾಗಾಗಿ ಕೇಂದ್ರದೊಂದಿಗೆ ಡಬಲ್ ಇಂಜಿನ್ ಸರಕಾರದ ಸಾಧನೆಗಳನ್ನು ರಾಜ್ಯದ ಮೂಲೆ ಮೂಲೆಗೂ ತಲುಪಿಸುವಲ್ಲಿ ಯಶಸ್ವಿಯಾದರು. ಅವರ ಸಂಘಟನಾ ಚಾತುರ್ಯವು ಬಿಜೆಪಿಗೆ ಕೇವಲ ನಗರ ಪ್ರದೇಶಗಳಲ್ಲಿ ಮಾತ್ರವಲ್ಲದೆ, ಗ್ರಾಮೀಣ ಮತ್ತು ಬುಡಕಟ್ಟು ಪ್ರದೇಶಗಳಲ್ಲೂ ವಿಸ್ತರಿಸಿತು. ಕೆಳ ಅಸ್ಸಾಂನ ಗ್ರಾಮೀಣ ಭಾಗಗಳು, ಚಹಾ ತೋಟದ ಕಾರ್ಮಿಕರ ವಲಯ, ಕಾಬಿರ್ ಆಂಗ್ಲಾಂಗ್ ಮತ್ತು ಡಿಮಾ ಹಸಾವೊ ಬೋಡೋಲ್ಯಾಂಡ್ ಪ್ರಾದೇಶಿಕ ಪ್ರದೇಶ ಬರಾಕ್ ವ್ಯಾಲಿಯಲ್ಲಿ ಬಿಜೆಪಿಯ ಪ್ರಭಾವ ಹೆಚ್ಚಿಸುವಲ್ಲಿ ಸಫಲರಾದರು.

ಹಿಮಂತ ಬಿಸ್ವ ಶರ್ಮ ಅವರು ಕೋವಿಡ್-19 ಸಾಂಕ್ರಾಮಿಕದ ಅವಧಿಯಲ್ಲಿ ತೋರಿದ ಅಪ್ರತಿಮ ಆಡಳಿತಾತ್ಮಕ ಮುತ್ಸದ್ದಿತನ ಅವರನ್ನು ಅಸ್ಸಾಂನ ಮನೆಮಾತಾಗಿಸಿತು. ಆರೋಗ್ಯ ಸಚಿವರಾಗಿ ಅವರು ಜಾರಿಗೆ ತಂದ 'ಅರುಣೋದೋಯಿ' ಯೋಜನೆಯು ಆರ್ಥಿಕ ಸಂಕಷ್ಟದಲ್ಲಿದ್ದ ಲಕ್ಷಾಂತರ ಬಡ ಕುಟುಂಬಗಳಿಗೆ ನೇರ ನಗದು ವರ್ಗಾವಣೆಯ ಮೂಲಕ ಆಸರೆಯಾಯಿತು. ಕೋವಿಡ್ ಸಮಯದಲ್ಲಿ ಅವರು ಗುವಾಹಟಿಯ ಮಹೇಂದ್ರ ಮೋಹನ್ ಚೌಧರಿ ಆಸ್ಪತ್ರೆ (MMCH) ಮತ್ತು ಗುವಾಹಟಿ ವೈದ್ಯಕೀಯ ಕಾಲೇಜು ಆಸ್ಪತ್ರೆಗಳಿಗೆ (GMCH) ಪಿಪಿಇ ಕಿಟ್ ಧರಿಸಿ ಸ್ವತಃ ಭೇಟಿ ನೀಡುತ್ತಿದ್ದುದು ಮತ್ತು ಮಧ್ಯರಾತ್ರಿಯವರೆಗೂ ವಿಮಾನ ನಿಲ್ದಾಣ ಹಾಗೂ ರೈಲ್ವೆ ನಿಲ್ದಾಣಗಳಲ್ಲಿ ತಪಾಸಣಾ ಕಾರ್ಯಗಳನ್ನು ಖುದ್ದಾಗಿ





ಮೇಲ್ವಿಚಾರಣೆ ನಡೆಸುತ್ತಿದ್ದ ರೀತಿ ಜನರಲ್ಲಿ ಭರವಸೆ ಮೂಡಿಸಿತು.

ಹಿಮಂತ ಬಿಸ್ವಾಸ್ ಶರ್ಮ ಅವರು ಅಕ್ರಮ ವಲಸೆ ಮತ್ತು ಮದರಸಾಗಳ ವಿಷಯದಲ್ಲಿ ಅತ್ಯಂತ ಕಠಿಣ ನಿಲುವುಗಳನ್ನು ತಳೆದಿದ್ದು ಅವರನ್ನು ಅಸ್ಸಾಮ್‌ನಲ್ಲಿ ಇನ್ನಷ್ಟು ಜನಪ್ರಿಯಗೊಳಿಸಿತು. ರಾಜ್ಯದ ಜನಸಂಖ್ಯಾ ರಚನೆಯನ್ನು (Demograpgy) ರಕ್ಷಿಸುವ ಉದ್ದೇಶದಿಂದ ಅವರು ಅಕ್ರಮ ವಲಸಿಗರನ್ನು ಪತ್ತೆಹಚ್ಚಲು ರಾಷ್ಟ್ರೀಯ ನಾಗರಿಕ ನೋಂದಣಿ (NRC) ಪ್ರಕ್ರಿಯೆಯನ್ನು ಬೆಂಬಲಿಸಿದ್ದಲ್ಲದೆ, ಗಡಿ ಪ್ರದೇಶಗಳಲ್ಲಿ ಬಿಗಿ ಭದ್ರತೆಗೆ ಒತ್ತು ನೀಡಿದರು. ಪ್ರಮುಖವಾಗಿ, 2020 ರಲ್ಲಿ ಅವರು ಶಿಕ್ಷಣ ಸಚಿವರಾಗಿದ್ದಾಗ 'ಅಸ್ಸಾಂ ಮದರಸಾ ಶಿಕ್ಷಣ (ಪ್ರಾಂತೀಕರಣ) ಕಾಯ್ದೆ'ಯನ್ನು ರದ್ದುಗೊಳಿಸುವ ಮೂಲಕ ಸರ್ಕಾರಿ ಅನುದಾನಿತ ಮದರಸಾಗಳನ್ನು ಸಾಮಾನ್ಯ ಶಾಲೆಗಳಾಗಿ ಪರಿವರ್ತಿಸಿದರು.

ಇದರ ಜೊತೆಗೆ, ರಾಜ್ಯದಲ್ಲಿ ಸುಮಾರು 3000 ಕ್ಕೂ ಹೆಚ್ಚು ಮದರಸಾಗಳನ್ನು ಮುಚ್ಚಲು ಅಥವಾ ನಿಯಂತ್ರಿಸಲು ಕ್ರಮ ಕೈಗೊಂಡರು. ಕೆಲವು ಮದರಸಾಗಳು ಉಗ್ರಗಾಮಿ ಸಂಘಟನೆಗಳಾದ ಅಲ್-ಖೈದಾ (AQIS) ಮತ್ತು ಅನ್ಸಾರುಲ್ಲಾ ಬಾಂಗ್ಲಾ ಟೀಮ್ (ABT) ನೊಂದಿಗೆ ಸಂಪರ್ಕ ಹೊಂದಿವೆ ಎಂಬ ತನಿಖಾ ವರದಿಗಳ ಆಧಾರದ ಮೇಲೆ ಅಂತಹ ಕಟ್ಟಡಗಳನ್ನು ಧ್ವಂಸಗೊಳಿಸುವ ಕ್ರಮ ಕೈಗೊಂಡರು. ಅಕ್ರಮ ನುಸುಳುವಿಕೆಯನ್ನು ತಡೆಯಲು ಮತ್ತು ಭೂ ಅತಿಕ್ರಮಣ ಮುಕ್ತಗೊಳಿಸಲು ನಡೆಸಿದ 'ಧಲ್ಪುರ್'ನಂತಹ ತೆರವು ಕಾರ್ಯಾಚರಣೆಗಳು ಅವರು ಅಕ್ರಮ ವಲಸಿಗರ ವಿರುದ್ಧ ಹೊಂದಿರುವ ಶೂನ್ಯ ಸಹಿಷ್ಣುತೆ ನಿಲುವು ಸ್ಥಳೀಯ ಮೂಲ ನಿವಾಸಿ ಅಸ್ಸಾಮಿಗರ ಮೇಲೆ ಬಹಳ ಪ್ರಭಾವ ಬೀರಿತು. ಅವರ ಚಾಣಾಕ್ಷ ರಾಜತಾಂತ್ರಿಕತೆಯು ಕೇವಲ ಅಸ್ಸಾಂಗೆ ಸೀಮಿತವಾಗದೆ, ಇಡೀ ಈಶಾನ್ಯ ಭಾರತದ ರಾಜ್ಯಗಳಲ್ಲಿ ಬಿಜೆಪಿಯ ಪ್ರಭಾವ ಬೆಳೆಯಲು ಕಾರಣವಾಯಿತು.

ಈಶಾನ್ಯ ಪ್ರಜಾಪ್ರಭುತ್ವ ಒಕ್ಕೂಟದ (NEDA) ಸಂಚಾಲಕರಾಗಿ ಅವರು ಪ್ರಾದೇಶಿಕ ಪಕ್ಷಗಳೊಂದಿಗೆ ಮಾಡಿಕೊಂಡ ಮೈತ್ರಿಗಳು ಮತ್ತು ಸಣ್ಣ ಪುಟ್ಟ ಸಮುದಾಯಗಳ ಆಕಾಂಕ್ಷೆಗಳನ್ನು ಗೌರವಿಸಿ ಅವರನ್ನು ಮುಖ್ಯವಾಹಿನಿಗೆ ತಂದ ರೀತಿ ಗಮನಾರ್ಹವಾಗಿದೆ. ಅಸ್ಸಾಂನಂತಹ ವೈವಿಧ್ಯಮಯ ರಾಜ್ಯದಲ್ಲಿ ವಿವಿಧ ಬುಡಕಟ್ಟು ಗುಂಪುಗಳ ನಡುವೆ ಸಮನ್ವಯ ಸಾಧಿಸಿ ಎಲ್ಲರನ್ನೂ ಒಂದೇ ವೇದಿಕೆಯಡಿ ತರುವುದು ಅಸಾಧ್ಯದ ಮಾತಾಗಿತ್ತು, ಆದರೆ ಶರ್ಮ ಅವರು ತಮ್ಮ ವೈಯಕ್ತಿಕ ವರ್ಚಸ್ಸಿನ ಕಾರಣ ಇದನ್ನು ಸಾಧ್ಯವಾಗಿಸಿದರು. ಇದು ಗಡಿ ಜಿಲ್ಲೆಗಳಲ್ಲಿ ಬಿಜೆಪಿಯ ಗೆಲುವಿಗೆ ಬಹಳ ಸಹಕಾರಿಯಾಯಿತು.

ಕಳೆದ 10 ವರ್ಷಗಳಲ್ಲಿ ಹಿಮಂತ ಬಿಸ್ವಾಸ್ ಶರ್ಮ ಅವರ ನಾಯಕತ್ವದಲ್ಲಿ ಅಸ್ಸಾಂ ರಾಜ್ಯದ ಆರ್ಥಿಕತೆಯು ಕುಂಠಿತ ಸ್ಥಿತಿಯಿಂದ ವೇಗವಾಗಿ ಬೆಳೆಯುತ್ತಿರುವ ಆರ್ಥಿಕತೆಯಾಗಿ ರೂಪಾಂತರಗೊಂಡಿದೆ.

2014-15ರಲ್ಲಿ ರಾಜ್ಯದ ಒಟ್ಟು ದೇಶೀಯ ಉತ್ಪನ್ನ (GSDP) ಕೇವಲ 1.98 ಲಕ್ಷ ಕೋಟಿ ರೂಪಾಯಿಗಳಷ್ಟಿತ್ತು, ಆದರೆ ಅವರ ಸಮರ್ಥ ಆರ್ಥಿಕ ನೀತಿಗಳಿಂದಾಗಿ ಇಂದು ಅಂದರೆ 2023-24ರ ಆರ್ಥಿಕ ವರ್ಷದಲ್ಲಿ ಇದು 5.67 ಲಕ್ಷ ಕೋಟಿ ರೂಪಾಯಿಗಳಿಗೆ ಏರಿಕೆಯಾಗಿದೆ, ಅಂದರೆ ಸುಮಾರು 186% ರಷ್ಟು ಭಾರಿ ಬೆಳವಣಿಗೆಯನ್ನು ಸಾಧಿಸಿದೆ. ಈ ಬೆಳವಣಿಗೆಗೆ ಪೂರಕವಾಗಿ ರಾಜ್ಯದಲ್ಲಿ ಬೃಹತ್ ಮೂಲಸೌಕರ್ಯ ಯೋಜನೆಗಳನ್ನು ಜಾರಿಗೆ ತರಲಾಗಿದ್ದು, ಸುಮಾರು 5,900 ಕೋಟಿ ರೂಪಾಯಿ ವೆಚ್ಚದ 4.94 ಕಿ.ಮೀ ಉದ್ದದ ಬೋಗಿಬೀಲ್ ಸೇತುವೆ ಮತ್ತು 950 ಕೋಟಿ ರೂಪಾಯಿ ವೆಚ್ಚದ 9.15 ಕಿ.ಮೀ ಉದ್ದದ ಧೋಲಾ-ಸಾದಿಯಾ ಸೇತುವೆಗಳು ಈಶಾನ್ಯ ಭಾರತದ ಸಂಪರ್ಕ ಕ್ರಾಂತಿಗೆ ನಾಂದಿ ಹಾಡಿವೆ.

ವಾಯುಯಾನ ಕ್ಷೇತ್ರದಲ್ಲಿ, ಗುವಾಹಟಿಯ ಲೋಕಪ್ರಿಯ ಗೋಪಿನಾಥ್ ಬೊರ್ಡೋಲೋಯ್ ಅಂತರಾಷ್ಟ್ರೀಯ ವಿಮಾನ ನಿಲ್ದಾಣದಲ್ಲಿ ಸುಮಾರು 5,000 ಕೋಟಿ ರೂಪಾಯಿ ವೆಚ್ಚದಲ್ಲಿ ನೂತನ ಇಂಟಿಗ್ರೇಟೆಡ್ ಟರ್ಮಿನಲ್ ನಿರ್ಮಿಸಲಾಗುತ್ತಿದ್ದು, ಇದು




ವಾರ್ಷಿಕ 1.3 ಕೋಟಿ ಪ್ರಯಾಣಿಕರನ್ನು ನಿಭಾಯಿಸುವ ಸಾಮರ್ಥ್ಯ ಹೊಂದಿದೆ. ಕೈಗಾರಿಕಾ ವಲಯದಲ್ಲಿ ಅತಿ ದೊಡ್ಡ ಮೈಲಿಗಲ್ಲಾಗಿ ಟಾಟಾ ಗ್ರೂಪ್ ಅಸ್ಸಾಂನ ಜಾಗಿರೋಡ್‌ನಲ್ಲಿ 27,000 ಕೋಟಿ ರೂಪಾಯಿ ಹೂಡಿಕೆಯೊಂದಿಗೆ ಸೆಮಿಕಂಡಕ್ಟರ್ ಘಟಕವನ್ನು ಸ್ಥಾಪಿಸುತ್ತಿದೆ. ಇದರ ಜೊತೆಗೆ, ಆರೋಗ್ಯ ಕ್ಷೇತ್ರದಲ್ಲಿ ಕ್ರಾಂತಿ ತರಲು ಸುಮಾರು 3,200 ಕೋಟಿ ರೂಪಾಯಿ ವೆಚ್ಚದಲ್ಲಿ ಗುವಾಹಟಿಯಲ್ಲಿ ಏಮ್ಸ್ (AIIMS) ನಿರ್ಮಾಣ ಮತ್ತು ವಿವಿಧ ಜಿಲ್ಲೆಗಳಲ್ಲಿ 12ಕ್ಕೂ ಹೆಚ್ಚು ಹೊಸ ವೈದ್ಯಕೀಯ ಕಾಲೇಜುಗಳನ್ನು ಸ್ಥಾಪಿಸಿರುವುದು ಅಸ್ಸಾಂ ಅನ್ನು ವೇಗವಾಗಿ ಬೆಳೆಯುತ್ತಿರುವ ರಾಜ್ಯಗಳ ಪಟ್ಟಿಯಲ್ಲಿ ಮುಂಚೂಣಿಗೆ ತಂದಿದೆ. ಇಂದು ರಾಜ್ಯವು ವಾರ್ಷಿಕ ಸುಮಾರು 14% ರಿಂದ 15% ರ ದರದಲ್ಲಿ ಅಭಿವೃದ್ಧಿ ಹೊಂದುತ್ತಿದ್ದು, ತಲಾದಾಯದಲ್ಲಿಯೂ ಗಣನೀಯ ಏರಿಕೆ ಕಂಡುಬಂದಿದೆ.

ಹಿಮಂತ ಬಿಸ್ವ ಶರ್ಮ ಅವರ ಸಾರ್ವಜನಿಕರ ಜೊತೆಗಿನ ಸಂವಹನ ಮಾಡುವ ಅವರ ಶೈಲಿ ಮತ್ತು ಕ್ಷಮತೆ ಅವರ ಅಸ್ಸಾಮ್ ಚುನಾವಣಾ ಪ್ರಚಾರದಲ್ಲಿ ಅತ್ಯಂತ ಮಹತ್ವದ ಪಾತ್ರ ವಹಿಸಿತು. ಅವರು ಚುನಾವಣಾ ಪ್ರಚಾರಗಳನ್ನು ದೇಶದ ಉಳಿದ ಕಡೆಯ ಪ್ರಚಾರಕ್ಕೆ ಹೋಲಿಸಿ ನೋಡಿದರೆ ಅದು ಬೇರೆ ತರಹದ್ದಾಗಿತ್ತು. ಅದು ಚುನಾವಣಾ ಸಮಾವೇಶಗಳಿಗಿಂತ ಹೆಚ್ಚಾಗಿ ಯಾವುದೋ ಸಾಂಸ್ಕೃತಿಕ ಕಾರ್ಯಕ್ರಮಗಳ ಪ್ರದರ್ಶನ ವೇದಿಕೆಯಂತೆ ಕಾಣುತ್ತಿತ್ತು. ಸ್ವತಃ ಹಿಮಂತ ಬಿಸ್ವಾಸ್ ಶರ್ಮ ಅವರೇ ಮತದಾರರು ಮತ್ತು ಕಲಾವಿದರ ಜೊತೆ ಹಾಡಿ ಕುಣಿಯುತ್ತಿದ್ದರು. ಸಾರ್ವಜನಿಕ ಸಭೆಗಳಲ್ಲಿ ಅವರು ಬಳಸುವ ಭಾಷೆ, ಎದುರಾಳಿಗಳ ಟೀಕೆಗಳಿಗೆ ನೀಡುವ ತೀಕ್ಷ್ಣವಾದ ಅವರದ್ದೇ ಸಿಗ್ನೇಚರ್ ಶೈಲಿಯ ಪದಗುಚ್ಛಗಳ ಬಳಕೆ, ಮಾತನಾಡುವಾಗ ಅವರು ಬಳಸುವ ಅಂಕಿಅಂಶಗಳ ಆಧಾರಿತ ಉತ್ತರಗಳು ಜನರನ್ನು ಸೆಳೆಯಿತು.

ಅಸ್ಸಾಂ ಚುನಾವಣೆಯಲ್ಲಿ ಬಿಜೆಪಿ-ಎನ್‌ಡಿಎ ಮೈತ್ರಿಕೂಟದ ಭರ್ಜರಿ ಗೆಲುವಿಗೆ ಮತ್ತೊಂದು ಪ್ರಮುಖ ಕಾರಣ ಪ್ರಧಾನಿ ಶ್ರೀ ನರೇಂದ್ರ ಮೋದಿ ಮತ್ತು ಶ್ರೀ ಹಿಮಂತ ಬಿಸ್ವ ಶರ್ಮ ಅವರ ಮೋದಿ-ಶರ್ಮ ಜುಗಲ್ಬಂದಿ. ಇದು ಈ ಗೆಲುವಿಗೆ ಅತ್ಯಂತ ಪ್ರಬಲ ಇಂಧನದಂತೆ ಕೆಲಸ ಮಾಡಿತು.

2026 ರ ವಿಧಾನಸಭಾ ಚುನಾವಣೆಯ ಅಂಕಿಅಂಶಗಳ ಪ್ರಕಾರ, ಪ್ರಧಾನಿ ಮೋದಿ ಅವರು ಗುವಾಹಟಿಯಲ್ಲಿ ನಡೆಸಿದ ಬೃಹತ್ ರೋಡ್ ಶೋ ಮತ್ತು ಹೊಜಾಯ್ ಹಾಗೂ ದಿಬ್ರುಗಢದಂತಹ ಪ್ರಮುಖ ಕೇಂದ್ರಗಳಲ್ಲಿ ನಡೆಸಿದ ರ್‍ಯಾಲಿಗಳು ಲಕ್ಷಾಂತರ ಜನರನ್ನು ಸೆಳೆಯುವಲ್ಲಿ ಯಶಸ್ವಿಯಾದವು. ಈ ಮೋದಿ ಮ್ಯಾಜಿಕ್‌ಗೆ ಪೂರಕವಾಗಿ ಶ್ರೀ ಹಿಮಂತ ಬಿಸ್ವ ಶರ್ಮ ಅವರು ರಾಜ್ಯಾದ್ಯಂತ ನೂರಾರು ಸಣ್ಣ ಹಾಗೂ ದೊಡ್ಡ ಸಾರ್ವಜನಿಕ ಸಭೆಗಳನ್ನು ನಡೆಸಿದರು.

ಅಸ್ಸಾಮಿನಲ್ಲಿ 85.96% ಮತದಾನವಾಗಿದ್ದು, ಬಿಜೆಪಿ ನೇತೃತ್ವದ ಎನ್ ಡಿ ಎ ಮೈತ್ರಿಕೂಟವು ಒಟ್ಟು 126 ಸ್ಥಾನಗಳಲ್ಲಿ 102 ಸ್ಥಾನಗಳನ್ನು ಗೆಲ್ಲುವ ಮೂಲಕ ಹ್ಯಾಟ್ರಿಕ್ ಸಾಧನೆ ಮಾಡಿದೆ; ಇದರಲ್ಲಿ ಬಿಜೆಪಿ ಒಂದೇ ದಾಖಲೆಯ 82 ಸ್ಥಾನಗಳನ್ನು ತನ್ನದಾಗಿಸಿಕೊಂಡಿದೆ. ಮೋದಿ ಅವರ ರಾಷ್ಟ್ರೀಯ ಅಭಿವೃದ್ಧಿಯ ದೂರದೃಷ್ಟಿ ಮತ್ತು ಶರ್ಮ ಅವರ ಸ್ಥಳೀಯ ಸಂಘಟನಾ ಚಾತುರ್ಯದ ಈ ಜೋಡಿಯು ಪ್ರತಿಪಕ್ಷಗಳ ಮೈತ್ರಿಯನ್ನು ಧೂಳೀಪಟ ಮಾಡಿ, ಅಸ್ಸಾಂನಲ್ಲಿ ಅಭಿವೃದ್ಧಿ ಮತ್ತು ಅಸ್ಮಿತೆಯ ರಾಜಕಾರಣಕ್ಕೆ ಹೊಸ ಆಯಾಮ ನೀಡಿತು.



# ಪುದುಚೇರಿ ವಿಧಾನಸಭಾ ಚುನಾವಣೆ 2026



**ಪು**ದುಚೇರಿಯ 2026ರ ವಿಧಾನಸಭಾ ಚುನಾವಣೆಯಲ್ಲಿ ಎನ್‌ಡಿಎ ಮೈತ್ರಿ ಕೂಟ ಅಭೂತಪೂರ್ವ ಜಯ ಸಾಧಿಸಿ ಮರಳಿ ಅಧಿಕಾರದ ಚುಕ್ಕಾಣಿ ಹಿಡಿದಿದೆ. ಇದು ಸುಶಾಸನ ಮತ್ತು ಅಭಿವೃದ್ಧಿಯ ಮಂತ್ರಕ್ಕೆ ಸಂದ ಜಯವಾಗಿದೆ. 2021ರ ಚುನಾವಣೆಯಲ್ಲಿ ಬಿಜೆಪಿ 6 ಸ್ಥಾನಗಳನ್ನು ಗೆಲ್ಲುವ ಮೂಲಕ ಮೊದಲ ಬಾರಿಗೆ ಎನ್‌ಡಿಎ ಮೈತ್ರಿಕೂಟದ ಸರ್ಕಾರದಲ್ಲಿ ಅಧಿಕಾರಕ್ಕೆ ಬಂತು.

ಈ ಬಾರಿ ಅಂದರೆ 2026ರಲ್ಲಿ, ಎನ್‌ಡಿಎ ಒಕ್ಕೂಟವು 18 ಸ್ಥಾನಗಳನ್ನು (ಎಐಎನ್‌ಆರ್‌ಸಿ 12, ಬಿಜೆಪಿ 4, ಮತ್ತು ಇತರರು 2) ಪಡೆಯುವ ಮೂಲಕ ಬಹುಮತದ ಗಡಿಯನ್ನು ದಾಟಿ ಮತ್ತೆ ಅಧಿಕಾರಕ್ಕೇರಿರುವುದು ಬಿಜೆಪಿ ಹಾಗು ಮೈತ್ರಿಕೂಟದ ಕಾರ್ಯಕರ್ತರ ಪರಿಶ್ರಮಕ್ಕೆ ಸಿಕ್ಕ ಜಯವಾಗಿದೆ. ಈ ಬಾರಿಯ ಚುನಾವಣೆಯಲ್ಲಿ 4 ಸ್ಥಾನಗಳನ್ನು ಗೆಲ್ಲಲು ಸಾಧ್ಯವಾದರೂ ಕಾರೈಕಲ್‌ನಂತಹ ಹೊಸ ಕ್ಷೇತ್ರದಲ್ಲಿ ಮೊದಲ ಬಾರಿಗೆ ಕಮಲವನ್ನು ಅರಳಿಸುವ ಮೂಲಕ ತನ್ನ ವಿಜಯ ಯಾತ್ರೆಯನ್ನು ಮುಂದುವರಿಸಿದೆ. ಕಾಂಗ್ರೆಸ್ ಪಕ್ಷವು 2016ರಲ್ಲಿ 15 ಸ್ಥಾನಗಳನ್ನು ಗೆಲುವು ಗಳಿಸಿದ್ದರೆ, 2021ರಲ್ಲಿ ಅದು 2ಕ್ಕೆ ಕುಸಿದು, ಈಗ 2026ರಲ್ಲಿ ಕೇವಲ 1 ಸ್ಥಾನಕ್ಕೆ ಸೀಮಿತವಾಗಿದೆ.

| ಒಟ್ಟು ಸ್ಥಾನಗಳು | 30 |
|---|---|
| ಬಿಜೆಪಿ+ | 18 |
| ಕಾಂಗ್ರೆಸ್+ | 06 |
| ಇತರೆ | 06 |

ಈ ಚುನಾವಣೆಯಲ್ಲಿ ಹಲವು ಪ್ರಮುಖ ಘಟನೆಗಳು ಎನ್‌ಡಿಎ ಮೈತ್ರಿಗೆ ದಾರಿ ಮಾಡಿಕೊಟ್ಟವು. ವಿಶೇಷವಾಗಿ ಮೈತ್ರಿಕೂಟದ ನಾಯಕ ಎನ್. ರಂಗಸ್ವಾಮಿ ಅವರು ತಟ್ಟಂಚವಾಡಿ ಕ್ಷೇತ್ರದಲ್ಲಿ ಭರ್ಜರಿ ಬಹುಮತದಿಂದ ಗೆದ್ದಿರುವುದು ಮತ್ತು ಬಿಜೆಪಿಯ ಎ. ನಮಶಿವಾಯಂ ಅವರು ಮಣ್ಣಾಡಿಪೇಟೆಯಲ್ಲಿ ಸ್ಥಿರವಾದ ಪ್ರದರ್ಶನ

ನೀಡಿರುವುದು ಪಕ್ಷಕ್ಕೆ ಹೆಚ್ಚಿನ ಬಲ ನೀಡಿದೆ. ಕಾಂಗ್ರೆಸ್ ಮತ್ತು ಡಿಎಂಕೆ ನೇತೃತ್ವದ ಇಂಡಿಯಾ ಮೈತ್ರಿಕೂಟದಲ್ಲಿನ ಆಂತರಿಕ ಕಲಹಗಳು ಮತ್ತು ಸೀಟು ಹಂಚಿಕೆಯ ಗೊಂದಲಗಳು ಅವರಿಗೆ ಮುಳುವಾದವು.

ಇದಕ್ಕೆ ವ್ಯತಿರಿಕ್ತವಾಗಿ ಪ್ರಧಾನಿ ನರೇಂದ್ರ ಮೋದಿ ಅವರ 'ಡಬಲ್ ಇಂಜಿನ್ ಸರ್ಕಾರ'ದ ಪರಿಕಲ್ಪನೆಯನ್ನು ಪುದುಚೇರಿಯ ಜನರ ಮನೆಮನಕ್ಕೆ ತಲುಪಿಸುವಲ್ಲಿ ಯಶಸ್ವಿಯಾಯಿತು. ತಮಿಳಗ ವೆಟ್ರಿ ಕಳಗಂನಂತಹ (ಟಿವಿಕೆ) ಹೊಸ ಪಕ್ಷಗಳು ಬಂದರೂ ಸಹ, ಪುದುಚೇರಿಯ ಸುಸ್ಥಿರತೆಗೆ ಎನ್‌ಡಿಎ ಮಾತ್ರವೇ ಏಕೈಕ ಆಯ್ಕೆ ಎಂದು ಮತದಾರರು ಸಾರಿದ್ದಾರೆ.




ಎನ್‌ಡಿಎ ಸರ್ಕಾರದ ಈ ಐತಿಹಾಸಿಕ ವಿಜಯದ ಹಿಂದೆ ಕಳೆದ ಐದು ವರ್ಷಗಳಲ್ಲಿ ಸರ್ಕಾರ ಮಾಡಿದ ಅಭಿವೃದ್ಧಿ ಕ್ರಾಂತಿಯ ದೊಡ್ಡ ಬಲವಿದೆ. ಪ್ರಧಾನಿ ಮೋದಿ ಅವರ 'BEST' (Business, Education, Spirituality, and Tourism) ಮಂತ್ರದ ಅಡಿಯಲ್ಲಿ 2,700 ಕೋಟಿಗೂ ಅಧಿಕ ಮೊತ್ತದ ಯೋಜನೆಗಳನ್ನು ಜಾರಿಗೆ ತಂದರು. ಮುಖ್ಯವಾಗಿ ಶಿಕ್ಷಣ ಕ್ಷೇತ್ರದಲ್ಲಿ ಕಾರೈಕಲ್‌ನ ಎನ್‌ಐಟಿ




(NIT) ಕ್ಯಾಂಪಸ್‌ನಲ್ಲಿ ಆಧುನಿಕ ಎಂಜಿನಿಯರಿಂಗ್ ಬ್ಲಾಕ್ ನಿರ್ಮಿಸಿರುವುದು ಮತ್ತು ಆರೋಗ್ಯ ಕ್ಷೇತ್ರದಲ್ಲಿ ಜಿಪ್ಮರ್ (JIPMER) ಆಸ್ಪತ್ರೆಯಲ್ಲಿ ನೂತನ ಕ್ಯಾನ್ಸರ್ ಕೇಂದ್ರವನ್ನು ಆಧುನೀಕರಿಸುವ ಮೂಲಕ ಪುದುಚೇರಿಯನ್ನು ವೈದ್ಯಕೀಯ ಹಬ್ ಆಗಿ ಮಾಡಿದ್ದು, ಸ್ಮಾರ್ಟ್ ಸಿಟಿ ಯೋಜನೆಯಡಿ ಬೃಹತ್ ಕಾಲುವೆಗಳ ಪುನಶ್ಚೇತನ, ಪ್ರವಾಸಿಗರಿಗಾಗಿ ಬೀಚ್ ಪ್ರೊಮೆನೇಡ್ ವಿಸ್ತರಣೆ ಮತ್ತು ನಗರ ಸಾರಿಗೆಯಲ್ಲಿ ಎಲೆಕ್ಟ್ರಿಕ್ ಬಸ್‌ಗಳ ಪರಿಚಯವು ನಗರದ ಮುಖವನ್ನೇ ಬದಲಿಸಿದೆ.

ಅಲ್ಲದೆ, ಬಡ ಮಹಿಳೆಯರಿಗೆ ನೀಡುವ ಮಾಸಿಕ ಧನಸಹಾಯವನ್ನು 1,000 ದಿಂದ 2,500 ರೂಪಾಯಿಗಳಿಗೆ ಏರಿಸಿರುವುದು ಮತ್ತು ಕಿಸಾನ್ ಸಮ್ಮಾನ್ ನಿಧಿಯಂತಹ ಯೋಜನೆಗಳ ಮೂಲಕ ರೈತರ ಕೈ ಹಿಡಿದಿರುವುದು ನಮ್ಮ ಬದ್ಧತೆಯನ್ನು ತೋರಿಸುತ್ತದೆ. ಈ ಅಭಿವೃದ್ಧಿ ಪಥವೇ ನಮ್ಮನ್ನು 2026ರಲ್ಲಿ ಮತ್ತೆ ಅಧಿಕಾರದ ಗದ್ದುಗೆಗೆ ಏರಿಸಿದೆ.




**ಪುದುಚೇರಿಯ ಪ್ರಭಾರಿಯಾಗಿ ಕರ್ನಾಟಕದವರೇ ಆದ ಶ್ರೀ ನಿರ್ಮಲ್‌ಕುಮಾರ್ ಸುರಾನಾ ರವರ ತಂಡದ ಪಾತ್ರವೂ ಪುದುಚೇರಿ ಚುನಾವಣೆಯಲ್ಲಿ ಒಂದು ಸಕಾರಾತ್ಮಕ ಅಂಶವಾಗಿ ಕೆಲಸ ಮಾಡಿರುವುದು ಶ್ಲಾಘನೀಯ ಹಾಗೂ ಅನುಕರಣೀಯ.**



## ಕೇರಳದಲ್ಲಿ ನಿರ್ಣಾಯಕ ಶಕ್ತಿ

# ಕೇರಳವೂ ಬದಲಾಗುವುದು ಖಚಿತ




**ಬಿನು ಪದ್ಮಂ**
ಕಾರ್ಯಕರ್ತರು
ಕಾಸರಗೋಡು, ಕೇರಳ


ಇದುವರೆಗೆ ಜಿಹಾದಿಗಳು ಮತ್ತು ಕಮ್ಯುನಿಸ್ಟರು ಬಿಜೆಪಿಯನ್ನು 'ಪಿಜೆಪಿ' ಎಂದು ಅಪಹಾಸ್ಯ ಮಾಡುತ್ತಿದ್ದರು. ಪಿಜೆಪಿ ಎಂದರೆ 'ಪೂಜ್ಯೇಪಿ' (ಪೂಜ್ಯ ಎಂದರೆ ಶೂನ್ಯ), ಅಂದರೆ ಬಿಜೆಪಿಗೆ ಶೂನ್ಯ ಫಲಿತಾಂಶ ಸಿಗುತ್ತದೆ ಎಂದು ಅವರು ಹೇಳುತ್ತಿದ್ದರು. ಆದರೆ ಕಳೆದ ಕೆಲವು ಸಮಯದ ಬಿಜೆಪಿಯ ಚಟುವಟಿಕೆಗಳು ಅದಕ್ಕೆ ತಕ್ಕ ಉತ್ತರವಾಗಿವೆ.

ಕೆ. ಸುರೇಂದ್ರನ್ ರಾಜ್ಯ ಅಧ್ಯಕ್ಷರಾಗಿದ್ದಾಗ ಬಿಜೆಪಿ 20% ಮತಗಳನ್ನು ಗಳಿಸಿ ಕೇರಳದಲ್ಲಿ ನಿರ್ಣಾಯಕ ಶಕ್ತಿಯೆಂದು ಸಾಬೀತುಪಡಿಸಿತು. ತ್ರಿಶ್ಯೂರಿನಿಂದ ಒಬ್ಬ ಸಂಸದರು ಲೋಕಸಭೆಗೆ ಆಯ್ಕೆಯಾದರು. ತಿರುವನಂತಪುರಂ ಕಾರ್ಪೊರೇಶನ್‌ನಲ್ಲಿ ಬಿಜೆಪಿ ಬಹುಮತ ಪಡೆಯಿತು. ಈಗ ಮೂವರು ಶಾಸಕರು ಬಿಜೆಪಿಯಿಂದ ವಿಧಾನಸಭೆಗೆ ಪ್ರವೇಶಿಸುತ್ತಿದ್ದಾರೆ. ಇವೆಲ್ಲವೂ ಕೇರಳದ ಮಟ್ಟಿಗೆ ಇತಿಹಾಸವನ್ನು ತಿರುಗಿ ಬರೆದಂತೆ.

| ಒಟ್ಟು ಸ್ಥಾನಗಳು | 140 |
|---|---|
| ಯುಡಿಎಫ್ | 79 |
| ಎಲ್‌ಡಿಎಫ್ | 02 |
| ಬಿಜೆಪಿ+ | 03 |
| ಇತರೆ | 02 |

## ಬಿಜೆಪಿ ಸೋಲಿಸಲು ಅಸ್ತಿತ್ವ ಕಳೆದುಕೊಂಡ ಸಿಪಿಎಂ

ಸಿಪಿಎಂ ಈ ಬಾರಿ ಐತಿಹಾಸಿಕ ಸೋಲನ್ನು ಅನುಭವಿಸಿತು. ಬಿಜೆಪಿಯನ್ನು ಸೋಲಿಸಲು ಹೋಗಿ ಅವರು ತಮ್ಮ ಅಸ್ತಿತ್ವವನ್ನೇ ಕಳೆದುಕೊಂಡರು. ಮುಸ್ಲಿಂ ಮತಗಳಿಗಾಗಿ ಅವರು ಹಿಂದೂ ಆಚರಣೆಗಳನ್ನು ಮತ್ತು ಸಂಸ್ಕೃತಿಯನ್ನು ಅಪಹಾಸ್ಯ ಮಾಡಿದರು. ಶಬರಿಮಲೆ ಆಚರಣೆಗಳನ್ನು ಪ್ರಶ್ನಿಸುವುದು, ಗಣಪತಿಯನ್ನು ಕೇವಲ 'ಮಿಥ್' (ಕಲ್ಪಿತ ಕಥೆ) ಎಂದು ಕರೆಯುವುದು, ಗುರುವಾಯೂರು ದೇವಸ್ಥಾನದ ಬಗ್ಗೆ ಅವಹೇಳನಕಾರಿ ಮಾತುಗಳು – ಹೀಗೆ ಹಿಂದೂಗಳನ್ನು ಅವಮಾನಿಸುವ ಎಲ್ಲಾ ಪ್ರಯತ್ನಗಳನ್ನು ಅವರು ಮಾಡಿದರು. ಆದರೆ ಮುಸ್ಲಿಂ ಸಮುದಾಯ ಅವರಿಗೆ ಮತ ನೀಡದೆ ತಮ್ಮದೇ ಆದ ಮೈತ್ರಿಕೂಟಕ್ಕೆ ಬೆಂಬಲ ನೀಡಿತು, ಇದರಿಂದ ಸಿಪಿಎಂನ ಅಡಿಪಾಯವೇ ಅಲುಗಾಡಿತು.

ಬಿಜೆಪಿ ಮೂರು ಕ್ಷೇತ್ರಗಳಲ್ಲಿ ಗೆದ್ದಿದ್ದರೂ, 19 ಕ್ಷೇತ್ರಗಳಲ್ಲಿ 25% ಕ್ಕಿಂತ ಹೆಚ್ಚು ಮತಗಳನ್ನು ಗಳಿಸಿದೆ. ಕೇರಳದಲ್ಲಿ ಅತಿ ಹೆಚ್ಚು ಮತಗಳನ್ನು ಪಡೆದ ಕೆ. ಸುರೇಂದ್ರನ್ ಮಂಜೇಶ್ವರದಲ್ಲಿ ಪರಾಭವಗೊಂಡರು. ಕಳೆದ ಎರಡು ಚುನಾವಣೆಗಳಲ್ಲಿ ಕೇವಲ 89 ಮತ್ತು 745 ಮತಗಳಿಂದ ಸೋತಿದ್ದ ಸುರೇಂದ್ರನ್ ಈ ಬಾರಿ ಗೆಲ್ಲುತ್ತಾರೆಂಬ ಭಯ ಮುಸ್ಲಿಂ ಲೀಗ್ ಮತ್ತು ಕಮ್ಯುನಿಸ್ಟ್ ಪಕ್ಷಕ್ಕೆ ಇತ್ತು. ಆದ್ದರಿಂದಲೇ ಈ ಬಾರಿ ಸಿಪಿಎಂ ಮುಸ್ಲಿಂ ಲೀಗ್‌ಗೆ 21,000 ಮತಗಳನ್ನು ವರ್ಗಾಯಿಸಿತು.

ತಮ್ಮ ಠೇವಣಿ ನಷ್ಟವಾದರೂ ಪರವಾಗಿಲ್ಲ ಸುರೇಂದ್ರನ್ ಸೋಲಬೇಕೆಂಬ ಹಠ ಅವರದ್ದಾಗಿತ್ತು. ಸುರೇಂದ್ರನ್ ಈ ಬಾರಿ 67,500 ಮತಗಳನ್ನು ಗಳಿಸಿದರು, ಅಂದರೆ ಚಲಾವಣೆಯಾದ ಹಿಂದೂ ಮತಗಳ ಪೈಕಿ 90% ಅವರಿಗೆ ಲಭಿಸಿದೆ. ಇಷ್ಟು ಏಕಪಕ್ಷೀಯವಾಗಿ ಹಿಂದೂ ಮತಗಳು ಬಿಜೆಪಿಗೆ ಲಭಿಸುವುದು ಭಾರತದಲ್ಲೇ ವಿರಳ. ಸುರೇಂದ್ರನ್ ಅವರನ್ನು ಸೋಲಿಸಲು ಮುಸ್ಲಿಂ ಲೀಗ್, ಕಾಂಗ್ರೆಸ್, ಪಾಪ್ಯುಲರ್ ಫ್ರಂಟ್, ಸಿಪಿಎಂ, ಜಮಾತ್-ಎ-ಇಸ್ಲಾಮಿ ಸೇರಿದಂತೆ ಎಲ್ಲಾ ಸಂಘಟನೆಗಳು ಒಂದಾದವು. ದೊಡ್ಡ ಮುಸ್ಲಿಂ ಉದ್ಯಮಿಗಳು ನೇರವಾಗಿ ಚುನಾವಣಾ ಪ್ರಚಾರದಲ್ಲಿ ಭಾಗಿಯಾದರು. ನಿಜಕ್ಕೂ ಮಂಜೇಶ್ವರದ ಫಲಿತಾಂಶದಿಂದ ಭಾರತದ ಹಿಂದೂಗಳು ಕಲಿಯಬೇಕಾದ ಪಾಠವಾಗಿದೆ.

ಮೂವರು ಶಾಸಕರು, ಆರು ಕ್ಷೇತ್ರಗಳಲ್ಲಿ ಎರಡನೇ ಸ್ಥಾನ, ಮತ್ತು 19 ಕ್ಷೇತ್ರಗಳಲ್ಲಿ 25% ಕ್ಕಿಂತ ಹೆಚ್ಚು ಮತಗಳು – ಈ ಫಲಿತಾಂಶವು ಕೇರಳದ ಜನತೆಗೆ ಒಂದು ದೊಡ್ಡ ಭರವಸೆಯನ್ನು ನೀಡಿದೆ. ಕೇರಳದಲ್ಲಿ ಇದುವರೆಗೆ ಇದ್ದ ಎಡ-ಬಲ ಮೈತ್ರಿ ಮಾತ್ರವಲ್ಲದೆ, ಬಿಜೆಪಿಯ ನೇತೃತ್ವದಲ್ಲಿ ಮೂರನೇ ರಂಗ ಉದಯಿಸಿದೆ. ಮುಂದಿನ ದಿನಗಳಲ್ಲಿ ಕೇರಳವನ್ನು ಬಿಜೆಪಿ ಆಳಲಿದೆ ಎಂಬ ಮುನ್ಸೂಚನೆ ಇದು.


ನೇಮಂ ಕ್ಷೇತ್ರದಲ್ಲಿ ಬಿಜೆಪಿ ಗೆಲ್ಲುವುದು ಅಚ್ಚರಿಯಲ್ಲ, ಆದರೆ ಚನ್ನೂರಿನಲ್ಲಿ ಬಿ.ಬಿ. ಗೋಪಕುಮಾರ್ ಅವರ ಜಯ ಎಡ-ಬಲ ರಂಗಗಳನ್ನು ಬೆಚ್ಚಿಬೀಳಿಸಿದೆ. ವಿ. ಮುರಳೀಧರನ್ ಅವರು ಕಳಕೂಟಂನಲ್ಲಿ ಸಾಧಿಸಿದ ಜಯವು ಸಂಘಟಿತವಾಗಿ ಕೆಲಸ ಮಾಡಿದರೆ ಯಶಸ್ಸು ಖಚಿತ ಎಂಬ ಸಂದೇಶ ನೀಡಿದೆ. ಬಿಜೆಪಿಯ ಈ ಪ್ರಗತಿಯಿಂದಾಗಿ 103 ಸೀಟುಗಳನ್ನು ಗೆದ್ದರೂ ಕಾಂಗ್ರೆಸ್ ಮತ್ತು ಮುಸ್ಲಿಂ ಲೀಗ್‌ಗೆ ಸಂತೋಷಪಡಲು ಸಾಧ್ಯವಾಗುತ್ತಿಲ್ಲ.

ಈ ಬಾರಿ ಮುಸ್ಲಿಂ ಮಸೀದಿಗಳಿಂದ ಕಾಂಗ್ರೆಸ್ ಮೈತ್ರಿಕೂಟಕ್ಕೆ ಮಾತ್ರ ಮತ ಹಾಕಬೇಕೆಂದು ಕರೆ ನೀಡಲಾಗಿತ್ತು. ಜಮಾತ್-ಎ-ಇಸ್ಲಾಮಿ ಕಾರ್ಯಕರ್ತರು ಕಾಂಗ್ರೆಸ್ ಗೆಲುವಿಗಾಗಿ ಮನೆ ಮನೆಗೆ ತೆರಳಿ ಕೆಲಸ ಮಾಡಿದರು. ಹಾಗೆಯೇ ಕ್ರಿಶ್ಚಿಯನ್ ಚರ್ಚ್‌ಗಳಲ್ಲಿಯೂ ಕಾಂಗ್ರೆಸ್‌ಗೆ ಬೆಂಬಲ ನೀಡಲು ಪತ್ರಗಳನ್ನು ಓದಲಾಯಿತು. ಬಿಜೆಪಿ ಬಂದರೆ ಸಂವಿಧಾನಕ್ಕೆ ಅಪಾಯವಿದೆ ಎಂಬ ಭಯವನ್ನು ಬಿತ್ತಲಾಯಿತು. ಇವೆಲ್ಲದರ ಫಲವಾಗಿ ಕಾಂಗ್ರೆಸ್ ಮೈತ್ರಿಕೂಟಕ್ಕೆ 103 ಸೀಟುಗಳು ಲಭಿಸಿದವು.

ಸಿಪಿಎಂನ ಈ ಮುಸ್ಲಿಂ ಓಲೈಕೆಯಿಂದಾಗಿ ಹಿಂದೂ ಸಮುದಾಯದ ಪ್ರಬಲ ಈಳವ ಸಮುದಾಯವು ಬಿಜೆಪಿಯತ್ತ ಆಕರ್ಷಿತವಾಗುತ್ತಿದೆ. ವಿಶ್ವಕರ್ಮ, ಮೀನುಗಾರ ಸಮುದಾಯ ಮತ್ತು ನಾಯರ್ ಸಮುದಾಯದ ದೊಡ್ಡ ಭಾಗ ಈಗ ಬಿಜೆಪಿಯ ಜೊತೆಗಿದೆ. ಸಿಪಿಎಂನ ಪತನವು ಬಿಜೆಪಿಯ ಬೆಳವಣಿಗೆಗೆ ದಾರಿಯಾಗಿದೆ. ಕಾಂಗ್ರೆಸ್ ಸರ್ಕಾರವು ಜಮಾತ್-ಎ-ಇಸ್ಲಾಮಿ ಮತ್ತು ಚರ್ಚ್‌ಗಳ ನಿಯಂತ್ರಣಕ್ಕೆ ಹೋದಷ್ಟೂ ಹಿಂದೂ ಸಮಾಜವು ಬಿಜೆಪಿಯತ್ತ ಹೆಚ್ಚು ಸಂಘಟಿತವಾಗಲಿದೆ.

### ಹಿಂದೂ ಸಮಾಜದಲ್ಲಿ ಈ ಜಾಗೃತಿ ಹೇಗೆ ಬಂತು?

2014ರ ನಂತರ ನಾವು ನೋಡುತ್ತಿರುವ ಹೊಸ ಭಾರತ ಮತ್ತು ಅದನ್ನು ಮುನ್ನಡೆಸುತ್ತಿರುವ ಋಷಿ ಸಮಾನ ನಾಯಕನ ಶ್ರಮ ಇದಕ್ಕೆ ಕಾರಣ. ಹಿಂದೂ ಧರ್ಮವು ನನ್ನ ಹೆಮ್ಮೆ ಎಂದು ತೋರಿಸಿಕೊಟ್ಟ ನಂತರ ಪ್ರತಿಯೊಬ್ಬ ಭಾರತೀಯನ ಸ್ವಾಭಿಮಾನ ಜಾಗೃತವಾಗಿದೆ. ಕಮ್ಯುನಿಸಂನ ಭದ್ರಕೋಟೆಯಾಗಿದ್ದ ಪಶ್ಚಿಮ ಬಂಗಾಳವೇ ಬದಲಾದ ಮೇಲೆ, ಕೇರಳವೂ ಬದಲಾಗುವುದು ಖಚಿತ. ಸ್ವಾಭಿಮಾನವಿರುವ ಜನ ಬದಲಾಗದೆ ಇರಲು ಸಾಧ್ಯವೇ ಇಲ್ಲ.



# ತಮಿಳುನಾಡು ಅಸೆಂಬ್ಲಿ ಚುನಾವಣೆ 2026

## ಅದರ ಸೋಲಿಗೆ ಬಿಜೆಪಿಯನ್ನು ದೂಷಿಸಬಹುದೇ?

(ವರದಿ)
**ನಂಬಿ ನಾರಾಯಣ್**
ಸಂಪಾದಕರು,
ಒರೆನಾಡು ಬಿಜೆಪಿ ತಮಿಳುನಾಡು ಸಾಪ್ತಾಹಿಕ ಪತ್ರಿಕೆ

ಅಣ್ಣಾ ದ್ರಾವಿಡ ಮುನ್ನೇತ್ರ ಕಳಗಂ ನೇತೃತ್ವದ ಎನ್‌ಡಿಎ ಮೈತ್ರಿಕೂಟ, ಪಾಟಲಿ ಮಕ್ಕಳ್ ಕಚ್ಚಿ (PMK), ಅಮ್ಮ ಮಕ್ಕಳ ಮುನ್ನೇತ್ರ ಕಳಗಂ(AMMK), ಭಾರತೀಯ ಜನತಾ ಪಕ್ಷ (BJP) 2026ರ ತಮಿಳುನಾಡು ವಿಧಾನಸಭೆ ಚುನಾವಣೆಯಲ್ಲಿ ಜಂಟಿಯಾಗಿ ಸ್ಪರ್ಧಿಸಿದ್ದವು.

ಇಂಡಿ ಮೈತ್ರಿಕೂಟದಲ್ಲಿ ಡಿಎಂಕೆ ಕಾಂಗ್ರೆಸ್ ಪಕ್ಷಕ್ಕೆ 28 ಸ್ಥಾನಗಳನ್ನು ನೀಡಿದ್ದರೆ, ಎಐಎಡಿಎಂಕೆ ರಾಷ್ಟ್ರೀಯ ಪ್ರಜಾಸತ್ತಾತ್ಮಕ ಒಕ್ಕೂಟದಲ್ಲಿ ಬಿಜೆಪಿಗೆ 27 ಸ್ಥಾನಗಳನ್ನು ನೀಡಿತ್ತು, ಕಾಂಗ್ರೆಸ್‌ಗಿಂತ ಒಂದು ಸ್ಥಾನ ಕಡಿಮೆ. ಬಿಜೆಪಿಗೆ ತಾನು ಬಯಸಿದಷ್ಟು ಸ್ಥಾನಗಳನ್ನು ಹಂಚಿಕೆ ಮಾಡಲಾಗಿಲ್ಲ ಮತ್ತು ಡಿಎಂಕೆ ಸಚಿವರ ಪ್ರಬಲ ಕ್ಷೇತ್ರಗಳನ್ನು ಹಂಚಿಕೆ ಮಾಡಲಾಗಿದೆ ಎಂದು ಸಾರ್ವಜನಿಕ ರಂಗದಲ್ಲಿ ಆರೋಪಗಳು ಬಂದಿದ್ದರೂ, ಬಿಜೆಪಿ ಯಾವುದೇ ಆರೋಪಗಳನ್ನು ಮಾಡಲಿಲ್ಲ, ಆದರೆ ಅದನ್ನು ಒಂದು ಸವಾಲಾಗಿ ಸ್ವೀಕರಿಸಿತು, ಏಕೆಂದರೆ ಅದು ತನ್ನ ಸಂಘಟನಾತ್ಮಕ ಶಕ್ತಿ ಹಾಗೂ ರಚನೆಯಲ್ಲಿ ವಿಶ್ವಾಸ ಹೊಂದಿದೆ. ಅಲ್ಲದೆ, ಪಕ್ಷವು ತಮಿಳುನಾಡಿನಾದ್ಯಂತ ತನ್ನ ಶಾಖೆಯನ್ನು ಉಳಿಸಿಕೊಳ್ಳಲು ಇದು ಅನುವು ಮಾಡಿಕೊಡುತ್ತದೆ ಎಂದು ಅದು ಭಾವಿಸಿತ್ತು.

2021 ರಲ್ಲಿ ಅದೇ ಎಐಎಡಿಎಂಕೆ ಮೈತ್ರಿಕೂಟದಲ್ಲಿ 4 ಸ್ಥಾನಗಳನ್ನು ಗೆದ್ದಿದ್ದ ಬಿಜೆಪಿ ಈ ಬಾರಿ ಸುಲಭವಾಗಿ 8 ರಿಂದ 12 ಸ್ಥಾನಗಳನ್ನು ಗೆಲ್ಲುತ್ತದೆ ಎಂದು ರಾಜಕೀಯ ವಿಶ್ಲೇಷಕರು ಮತ್ತು ಅನೇಕ ಚುನಾವಣಾ ವೀಕ್ಷಕರು ಹೇಳಿದ್ದಾರೆ. ಎಐಎಡಿಎಂಕೆ ಮತಗಳನ್ನು ಸರಿಯಾಗಿ ಬಿಜೆಪಿಗೆ ವರ್ಗಾಯಿಸಿದರೆ, ಬಿಜೆಪಿ 13 ರಿಂದ 16 ಸ್ಥಾನಗಳನ್ನು ಗೆಲ್ಲುತ್ತದೆ, ಇಲ್ಲದಿದ್ದರೆ ಅದರ ಸ್ವಂತ ವೈಯಕ್ತಿಕ ಪ್ರಭಾವವು ಖಂಡಿತವಾಗಿಯೂ ಏಳರಿಂದ ಎಂಟು ಸ್ಥಾನಗಳನ್ನು ಗೆಲ್ಲುವಂತೆ

| ಒಟ್ಟು ಸ್ಥಾನಗಳು | 234 |
| --- | --- |
| ಟಿವಿಕೆ | 107 |
| ಡಿಎಂಕೆ+ | 74 |
| ಎಐಎಡಿಎಂಕೆ | 53 |
| ಇತರೆ | 00 |

ಮಾಡುತ್ತದೆ ಎಂದು ಅವರಲ್ಲಿ ಕೆಲವರು ಹೇಳಿದರು. ರಾಜ್ಯ ಬಿಜೆಪಿ ಅಧ್ಯಕ್ಷ ಶ್ರೀ ನಯನಾರ್ ನಾಗೇಂದ್ರನ್ ಎರಡಂಕಿಯ ಗೆಲುವು ತಮ್ಮ ಗುರಿ ಮತ್ತು ಅದನ್ನು ಸಾಧಿಸುವುದಾಗಿ ಹೇಳುತ್ತಿದ್ದರು. ಬಿಜೆಪಿಯ ಎಲ್ಲಾ ತಂತ್ರಗಳು ಎರಡಂಕಿಯ ಗೆಲುವಿನತ್ತ ಸಜ್ಜಾಗಿದ್ದವು.

ಇಲ್ಲಿಯವರೆಗೆ ಕೇವಲ ಎರಡು ಒಕ್ಕೂಟಗಳ ನಡುವಿನ ನೇರಾ ನೇರ ತ್ರಿಕೋನಗಳ ಸ್ಪರ್ಧೆಯನ್ನು ಎದುರಿಸಿದ್ದ ತಮಿಳುನಾಡು, ನಟ ವಿಜಯ್ ಅವರ ಟಿವಿಕೆ ಪಕ್ಷದ ಆಗಮನದಿಂದ ರಾಜ್ಯವು ತ್ರಿಕೋನ ಸ್ಪರ್ಧೆಯಾಗಿ ಮಾರ್ಪಟ್ಟಿತು. ಆದರೆ ಟಿವಿಕೆ ಸುನಾಮಿಯಾಗಿ ಪರಿಣಮಿಸುತ್ತದೆ ಮತ್ತು ಅಧಿಕಾರವನ್ನು ವಶಪಡಿಸಿಕೊಳ್ಳುವ ಸಾಮರ್ಥ್ಯವಿರುವ ಏಕೈಕ ದೊಡ್ಡ ಪಕ್ಷವಾಗಿ ಹೊರಹೊಮ್ಮುತ್ತದೆ ಎಂಬುದನ್ನು ಗ್ರಹಿಸುವಲ್ಲಿ ಎಲ್ಲರೂ ವಿಫಲರಾದರು.

ಹೆಚ್ಚಿನ ಚುನಾವಣೋತ್ತರ ಸಮೀಕ್ಷೆಗಳು ಡಿಎಂಕೆ ಮೈತ್ರಿಕೂಟದ ಪರವಾಗಿದ್ದರೂ, ಟೈಮ್ಸ್ ನೌ – ಜೆವಿಸಿ, ಸಿಎನ್‌ಎನ್ – ನ್ಯೂಸ್ 18 ಮತ್ತು ಸ್ಪಾಟಿಫೈ ಎನ್‌ಡಿಎ ಮೈತ್ರಿಕೂಟಕ್ಕೆ ಗೆಲುವು ಸಿಗುತ್ತದೆ ಎಂದು ಭವಿಷ್ಯ ನುಡಿದಿದ್ದವು. ವಿಜಯ್ ಅವರ ಟಿವಿಕೆ 7–8 ಸ್ಥಾನಗಳಿಗಿಂತ ಹೆಚ್ಚು ಗೆಲ್ಲುತ್ತದೆ ಎಂದು ಅವುಗಳಲ್ಲಿ ಯಾವುದೂ ಭವಿಷ್ಯ ನುಡಿದಿಲ್ಲ. ಟಿವಿಕೆ ಹೆಚ್ಚೆಂದರೆ ಶೇಕಡಾ 16 ರಿಂದ 22 ರಷ್ಟು ಮತಗಳನ್ನು ಪಡೆಯುತ್ತದೆ, ಆದರೆ ಎರಡಂಕಿಯ ಸ್ಥಾನಗಳನ್ನು ಗಳಿಸುವುದಿಲ್ಲ ಎಂದು ಸಮೀಕ್ಷೆಗಳು ಹೇಳುತ್ತಿದ್ದವು. ಆದರೆ ಕೊನೆಯಲ್ಲಿ, ಟಿವಿಕೆ ಸುನಾಮಿ ಅಲೆಯನ್ನು ತಿರುಗಿಸಿದೆ, ಡಿಎಂಕೆ ಮತ್ತು ಎಐಎಡಿಎಂಕೆ ಎರಡೂ ಮೈತ್ರಿಕೂಟಗಳು ಬಹಳ ಹಿಂದೆ ಬಿದ್ದಿವೆ. ನಿಜಕ್ಕೂ ಎರಡೂ ಕಝುಕಂಗಳು ಟಿವಿಕೆ ಪಕ್ಷಗಳು ಅಲೆಯಲ್ಲಿ ಮುಳುಗಿಹೋದವು.

ಡಿಎಂಕೆಯಲ್ಲಿ, ಮುಖ್ಯಮಂತ್ರಿ, ಸ್ಪೀಕರ್ ಮತ್ತು ಪಕ್ಷದ ಪ್ರಧಾನ ಕಾರ್ಯದರ್ಶಿ ಸೇರಿದಂತೆ 16 ಪ್ರಮುಖ ಸಚಿವರು ಸೋತರು. ಎಐಎಡಿಎಂಕೆಯಲ್ಲೂ ಹತ್ತಕ್ಕೂ ಹೆಚ್ಚು ಮಾಜಿ ಸಚಿವರು ಸೋತರು. ಮೈತ್ರಿ ನಿರ್ಬಂಧಗಳಿಂದಾಗಿ ಚಾಲೆಂಜಿಂಗ್ ಸ್ಥಾನಗಳಲ್ಲಿ ಸ್ಪರ್ಧಿಸಿದ್ದ ಬಿಜೆಪಿ, 27 ಸ್ಥಾನಗಳಲ್ಲಿ ಕೇವಲ ಒಂದು ಸ್ಥಾನವನ್ನು ಗೆಲ್ಲುವಲ್ಲಿ ಯಶಸ್ವಿಯಾಯಿತು. ಬಿಜೆಪಿ ಸುಮಾರು ಸಾವಿರ ಮತಗಳ ಅಂತರದಿಂದ ಗೆದ್ದ ಏಕೈಕ ಸ್ಥಾನ ಊಟಿ. ಊಟಿ ವಿಧಾನಸಭಾ ಕ್ಷೇತ್ರವನ್ನು ಒಳಗೊಂಡ ನೀಲಗಿರಿ ಸಂಸದ ಸ್ಥಾನವು 90 ರ ದಶಕದಲ್ಲಿ ಬಿಜೆಪಿಯೊಂದಿಗೆ ಇತ್ತು.

ರಾಜ್ಯಾಧ್ಯಕ್ಷ ಶ್ರೀ ನಯನಾರ್ ನಾಗೇಂದ್ರನ್ ಸತ್ತೂರು ಕ್ಷೇತ್ರದಲ್ಲಿ ಸುಮಾರು 5000 ಮತಗಳ ಅಂತರದಿಂದ ಸೋತರು. ಆದರೆ ಇಲ್ಲಿ ಅವರ ಸೋಲಿಗೆ ಡಿಎಂಕೆ ಅಥವಾ ಟಿವಿಕೆ ಕಾರಣವಲ್ಲ. ಜಯಲಲಿತಾ ಅವರ ಆಪ್ತ ಸ್ನೇಹಿತೆಯಾಗಿದ್ದ ಮೇಡಂ ಶಶಿಕಲಾ ಅವರು ಪ್ರಾರಂಭಿಸಿದ ಜಾತಿ ಆಧಾರಿತ ಪಕ್ಷವೇ ಕಾರಣ, ಅವರು ಅಕ್ರಮ ಆಸ್ತಿ ಪ್ರಕರಣದಲ್ಲಿ ಭಾಗಿಯಾಗಿ ಶಿಕ್ಷೆ ಅನುಭವಿಸಿದರು. ಶಶಿಕಲಾ ಅಭ್ಯರ್ಥಿ ಹತ್ತು ಸಾವಿರಕ್ಕೂ ಹೆಚ್ಚು ಮತಗಳನ್ನು ಪಡೆದರೆ,ಶ್ರೀ ನಯನಾರ್ ನಾಗೇಂದ್ರನ್ 5000 ಮತಗಳ ಅಂತರದಿಂದ ಸೋತರು, ಇದು ಸಂಪೂರ್ಣವಾಗಿ ಅನಿರೀಕ್ಷಿತವಾಗಿತ್ತು.

ರಾಜ್ಯಾದ್ಯಂತ ಧಾರ್ಮಿಕ ಅಲ್ಪಸಂಖ್ಯಾತರ ಮತಗಳನ್ನು ಗೆಲ್ಲುವಲ್ಲಿ ಟಿವಿಕೆ ಯಶಸ್ವಿಯಾದರೂ, ಧಾರ್ಮಿಕವಾಗಿ ಹೆಚ್ಚು ಜನಸಂಖ್ಯೆಯನ್ನು ಹೊಂದಿರುವ ಕನ್ಯಾಕುಮಾರಿ ಜಿಲ್ಲೆಯಲ್ಲಿ ಅವರನ್ನು ಒಟ್ಟುಗೂಡಿಸಲು ಸಾಧ್ಯವಾಗಲಿಲ್ಲ. ಅಲ್ಲಿ ಕ್ರಿಶ್ಚಿಯನ್ ಚರ್ಚ್ ಪ್ರಾಬಲ್ಯತೆಯನ್ನು ಹೊಂದಿರುವುದರಿಂದ, ಬಿಜೆಪಿ ಜಿಲ್ಲೆಯಲ್ಲಿ ಸ್ಪರ್ಧಿಸಿದ ನಾಲ್ಕು ಸ್ಥಾನಗಳಲ್ಲಿಯೂ ಸೋತಿತು. ಅಲ್ಲಿನ ಕ್ರಿಶ್ಚಿಯನ್ ಮತ್ತು ಮುಸ್ಲಿಂ ಅಲ್ಪಸಂಖ್ಯಾತ ಜನಸಂಖ್ಯೆ ಇಬ್ಬರೂ ಒಗ್ಗಟ್ಟಿನಿಂದ ಬಿಜೆಪಿ ವಿರುದ್ಧ ಮತ ಚಲಾಯಿಸಿದರು.

ಆದರೆ ಒಳ್ಳೆಯ ಸುದ್ದಿ ಏನೆಂದರೆ ಮೀಸಲು ಕ್ಷೇತ್ರಗಳಲ್ಲಿ ಬಿಜೆಪಿಯ ಮತಗಳು ಗೆಲುವಿನ ಸಮೀಪದಲ್ಲಿದ್ದವು. ರಾಶಿಪುರಂ, ವಾಸುದೇವನಲ್ಲೂರು, ಗಂಧರ್ವಕೊಟ್ಟೈ ಮತ್ತು ಅವಿನಾಶಿ ಕ್ಷೇತ್ರಗಳಲ್ಲಿ ಬಿಜೆಪಿ ಪಡೆದ ಮತಗಳು ಪರಿಶಿಷ್ಟ ಜಾತಿಗಳ ಜನರು ಬಿಜೆಪಿಯನ್ನು ಬೆಂಬಲಿಸುತ್ತಿದ್ದಾರೆ ಎಂಬುದನ್ನು ಸಾಬೀತುಪಡಿಸಿದವು. ಬಿಜೆಪಿ ಮೇಲ್ಜಾತಿಯ ಪಕ್ಷ ಎಂಬ ಪ್ರಚಾರವು ನೆಲಕಚ್ಚಿತು. ಮೊಡಕುರಿಚಿಯಲ್ಲಿ ಬಿಜೆಪಿಯ ಮಹಿಳಾ ಅಭ್ಯರ್ಥಿ ಗೆಲ್ಲದಿದ್ದರೂ, ಅವರು ಕಠಿಣಕರವಾದ ಹೋರಾಟವನ್ನು ನಡೆಸಿದರು. ಕೆಲವನ್ನು ಹೊರತುಪಡಿಸಿ, ಬಿಜೆಪಿ ಸ್ಪರ್ಧಿಸಿದ ಬಹುತೇಕ ಎಲ್ಲಾ ಕ್ಷೇತ್ರಗಳಲ್ಲಿ ಉತ್ತಮ ಹೋರಾಟ ನೀಡಿದೆ ಎಂದು ಹೇಳುವುದು ಅತಿಶಯೋಕ್ತಿಯಲ್ಲ.

ಕಳೆದ 60 ವರ್ಷಗಳಿಂದ ತಮಿಳುನಾಡಿನಲ್ಲಿ ಪರಸ್ಪರ ಸ್ಪರ್ಧಿಸುತ್ತಿದ್ದ ಎರಡು ದ್ರಾವಿಡ ಪಕ್ಷಗಳು ವಿಜಯ್ ಅವರ ಟಿವಿಕೆ ಸುನಾಮಿಯಲ್ಲಿ ಕಣ್ಮರೆಯಾದ ನಂತರ, ಅದರ ಸೋಲಿಗೆ ಬಿಜೆಪಿಯನ್ನು ದೂಷಿಸುವುದು ಸರಿಯಲ್ಲ. ಅದರ ರಚನೆ ಮತ್ತು ಮೂಲ ಮಟ್ಟದ ಬೆಂಬಲ ಇಂದಿಗೂ ಹಾಗೆಯೇ ಇದೆ ಎಂಬುದರಲ್ಲಿ ಸಂದೇಹವಿಲ್ಲ. ರಾಜಕೀಯದಲ್ಲಿ ಇದ್ದಕ್ಕಿದ್ದಂತೆ ಉನ್ನತ ಸ್ಥಾನಕ್ಕೆ ಏರುವ ಪಕ್ಷವು, ಮೇಲಕ್ಕೆ ಬಂದಷ್ಟೇ ವೇಗವಾಗಿ ಕುಸಿಯುವುದು ಸಹಜ. ಈಗ ಶ್ರೀ ವಿಜಯ್ ಅವರು ತುಂಬಾ ವೇಗವಾಗಿ ಬೆಳೆದು ತಾವು ವಿರೋಧಿಸಿದವರ ಬೆಂಬಲದೊಂದಿಗೆ ತಮ್ಮ ಪ್ರಯಾಣವನ್ನು ಪ್ರಾರಂಭಿಸಿದ್ದಾರೆ, ಅವರ ಉಳಿಸಿಕೊಳ್ಳುವ ಸಾಮರ್ಥ್ಯವು ಪ್ರಶ್ನಾರ್ಹವಾಗಿದೆ. ಇದಲ್ಲದೆ, ಸೋಲಿನ ನಂತರ ಎರಡೂ ದ್ರಾವಿಡ ಪಕ್ಷಗಳಲ್ಲಿ ಬಿರುಕುಗಳು ಕಾಣಿಸಿಕೊಳ್ಳುವುದನ್ನು ನಾವು ನೋಡುತ್ತೇವೆ. ಎರಡೂ ದ್ರಾವಿಡ ಪಕ್ಷಗಳಲ್ಲಿ ಒಂದು ಮುಂದಿನ ದಿನಗಳಲ್ಲಿ ಕಣ್ಮರೆಯಾಗಲಿದೆ. ಆ ಜಾಗವನ್ನು ಬಿಜೆಪಿ ಆಕ್ರಮಿಸಿಕೊಳ್ಳುತ್ತದೆ ಎಂಬುದರಲ್ಲಿ ಸಂದೇಹವಿಲ್ಲ.



# 2011ರ ಜನಗಣತಿಯ ಆಧಾರ ಮತ್ತು ಮಸೂದೆಯ ತುರ್ತು ಉದ್ದೇಶ

**ಕೇಂದ್ರ ಗೃಹ ಸಚಿವ ಅಮಿತ್ ಶಾ ಅವರು ಲೋಕಸಭೆಯಲ್ಲಿ ಮಾಡಿದ ಭಾಷಣದ ಸಾರಾಂಶ**

**ಶ್ರೀ** ಅಮಿತ್ ಶಾ ಲೋಕಸಭೆಯಲ್ಲಿ ಮಸೂದೆಯ ಅತಿ ಮುಖ್ಯ ತಾಂತ್ರಿಕ ಅಂಶವನ್ನು ವಿವರಿಸುತ್ತಾ, ಕ್ಷೇತ್ರ ಮರುವಿಂಗಡಣೆ ಪ್ರಕ್ರಿಯೆಯನ್ನು ವಿಳಂಬ ಮಾಡದೆ ತಕ್ಷಣವೇ ಆರಂಭಿಸಲು 2011ರ ಜನಗಣತಿಯ (2011 Census) ಅಂಕಿಅಂಶಗಳನ್ನು ಬಳಸಿಕೊಳ್ಳಲು ಈ ತಿದ್ದುಪಡಿ ತರಲಾಗಿದೆ ಎಂದು ಸ್ಪಷ್ಟಪಡಿಸಿದರು.

ಸಾಮಾನ್ಯವಾಗಿ ಮರುವಿಂಗಡಣೆಯು ಇತ್ತೀಚಿನ ಜನಗಣತಿಯ ನಂತರ ನಡೆಯಬೇಕು, ಆದರೆ ಕೋವಿಡ್-19 ಕಾರಣದಿಂದ 2021ರ ಜನಗಣತಿ ವಿಳಂಬವಾಗಿದೆ. 2026ರ ನಂತರ ನಡೆಯುವ ಹೊಸ ಜನಗಣತಿಯ ವರದಿ ಬರಲು ಇನ್ನು ಹಲವು ವರ್ಷಗಳು ಬೇಕಾಗುವುದರಿಂದ, ಅಲ್ಲಿಯವರೆಗೆ ಕಾಯುತ್ತಾ ಕುಳಿತರೆ ಮಹಿಳಾ ಮೀಸಲಾತಿ ಮತ್ತು ಸೀಟುಗಳ ಹೆಚ್ಚಳ ವಿಳಂಬವಾಗುತ್ತದೆ. ಆದ್ದರಿಂದ, ಈಗ ಲಭ್ಯವಿರುವ ಅತ್ಯಂತ ಅಧಿಕೃತ ದತ್ತಾಂಶವಾದ 2011ರ ಜನಗಣತಿಯನ್ನೇ ಆಧಾರವಾಗಿಟ್ಟುಕೊಂಡು ಸೀಟುಗಳ ಸಂಖ್ಯೆಯನ್ನು ಹೆಚ್ಚಿಸಲು ಮತ್ತು ಕ್ಷೇತ್ರಗಳ ಮರುಹಂಚಿಕೆ ಮಾಡಲು ಈ ಮಸೂದೆಯು ದಾರಿ ಮಾಡಿಕೊಡುತ್ತದೆ. ಇದು ಸಮಯಪ್ರಜ್ಞೆಯ ನಿರ್ಧಾರವಾಗಿದ್ದು, ದೇಶದ ಪ್ರಜಾಪ್ರಭುತ್ವವ್ಯವಸ್ಥೆಯನ್ನು ಗಟ್ಟಿಗೊಳಿಸಲು ಮತ್ತು ಸಮಾನ ಪ್ರಾತಿನಿಧ್ಯದ ಹಕ್ಕನ್ನು ತಕ್ಷಣವೇ ಒದಗಿಸಲು ಅಗತ್ಯವಾಗಿದೆ ಎಂದು ಅವರು ಒತ್ತಿಹೇಳಿದರು.

### ಮಹಿಳಾ ಹಕ್ಕುಗಳ ವಿಚಾರದಲ್ಲಿ ಪ್ರತಿಪಕ್ಷಗಳ ದ್ವಂದ್ವ ನೀತಿ

ಪ್ರಮುಖ ವಿರೋಧ ಪಕ್ಷವು ಇತಿಹಾಸದುದ್ದಕ್ಕೂ ಮಹಿಳೆಯರ ಹಕ್ಕುಗಳನ್ನು ಕಡೆಗಣಿಸುತ್ತಾ ಬಂದಿದೆ. ಶಹಾ ಬಾನೊ ಪ್ರಕರಣದಿಂದ ಹಿಡಿದು ತ್ರಿವಳಿ ತಲಾಖ್ ರದ್ದತಿಯವರೆಗೆ ಪ್ರತಿಯೊಂದು ಸಾಮಾಜಿಕ ಸುಧಾರಣೆಯನ್ನೂ ಪ್ರತಿಪಕ್ಷಗಳು ರಾಜಕೀಯ ಲಾಭಕ್ಕಾಗಿ ವಿರೋಧಿಸಿವೆ.

ಕಳೆದ ಮೂರು ದಶಕಗಳಿಂದ ನೆನೆಗುದಿಗೆ ಬಿದ್ದಿದ್ದ ಮಹಿಳಾ ಮೀಸಲಾತಿ ಮಸೂದೆಯನ್ನು ನಮ್ಮ ಸರ್ಕಾರವು ಪ್ರಾಮಾಣಿಕವಾಗಿ ಜಾರಿಗೆ ತಂದಿದೆ. ಪ್ರತಿಪಕ್ಷಗಳು ಈ ಮಸೂದೆಯನ್ನು ಬೆಂಬಲಿಸುವ ನಾಟಕವಾಡುತ್ತಿದ್ದರೂ, ಕಾರ್ಯರೂಪಕ್ಕೆ ಬಂದಾಗ ಅದನ್ನು ಜಾರಿಗೊಳಿಸಲು ಇರುವ ತಾಂತ್ರಿಕತೆಗಳನ್ನು ವಿರೋಧಿಸುವ ಮೂಲಕ ಅಡೆತಡೆಗಳನ್ನು ಸೃಷ್ಟಿಸುತ್ತಿವೆ. ಇದರಿಂದಾಗಿ ವಿರೋಧ ಪಕ್ಷಗಳು ಮುಂಬರುವ 2029ರ ಲೋಕಸಭಾ ಚುನಾವಣೆ ಸೇರಿದಂತೆ ಪ್ರತಿಯೊಂದು ಹಂತದಲ್ಲೂ ದೇಶದ ಮಹಿಳೆಯರ ತೀವ್ರ ಆಕ್ರೋಶ ಮತ್ತು ಪ್ರತಿರೋಧವನ್ನು ಎದುರಿಸಬೇಕಾಗುತ್ತದೆ ಎಂದು ಎಚ್ಚರಿಸಿದರು.

### ಸಾಂವಿಧಾನಿಕ ಚೌಕಟ್ಟು ಮತ್ತು ಪ್ರಾತಿನಿಧ್ಯದ ಅನಿವಾರ್ಯತೆ

ಸಂವಿಧಾನದ 81, 82 ಮತ್ತು 170 ನೇ ವಿಧಿಗಳ ಪ್ರಕಾರ ಕಾಲಕಾಲಕ್ಕೆ ಕ್ಷೇತ್ರ ಮರುವಿಂಗಡಣೆ ನಡೆಸುವುದು ಸರ್ಕಾರದ ಸಾಂವಿಧಾನಿಕ ಜವಾಬ್ದಾರಿಯಾಗಿದೆ. 1971ರಲ್ಲಿ ಅಂದಿನ ಸರ್ಕಾರವು ಸೀಟುಗಳ ಸಂಖ್ಯೆಯನ್ನು ಸ್ಥಗಿತಗೊಳಿಸಿತ್ತು ಮತ್ತು 1976ರ ತುರ್ತು ಪರಿಸ್ಥಿತಿಯ ಕರಾಳ ಅವಧಿಯಲ್ಲಿ ಕೇವಲ ಅಧಿಕಾರ ಹಿಡಿಯುವ ಹಪಾಹಪಿಯಿಂದ ಕ್ಷೇತ್ರ ಮರುವಿಂಗಡಣೆಯನ್ನು ಸಂಪೂರ್ಣವಾಗಿ ತಡೆಹಿಡಿಯಲಾಗಿತ್ತು.

ಇದರಿಂದಾಗಿ ಅರ್ಧ ಶತಮಾನಕ್ಕೂ ಹೆಚ್ಚು ಕಾಲ ದೇಶದ ಜನಸಂಖ್ಯೆಗೆ ತಕ್ಕಂತೆ ಸಂಸತ್ತಿನಲ್ಲಿ ಪ್ರಾತಿನಿಧ್ಯ ಸಿಕ್ಕಿಲ್ಲ. ಇಂದು ದೇಶದಲ್ಲಿ ಸುಮಾರು 127 ಕ್ಷೇತ್ರಗಳು ತಲಾ 20 ಲಕ್ಷಕ್ಕೂ ಹೆಚ್ಚು ಮತದಾರರನ್ನು ಹೊಂದಿವೆ, ಇದು ಪ್ರಜಾಪ್ರಭುತ್ವದ ಮೂಲ ಆಶಯವಾದ ಒಬ್ಬ ವ್ಯಕ್ತಿ, ಒಂದು ಮತ, ಒಂದು ಮೌಲ್ಯ ತತ್ವದ ಸಂಪೂರ್ಣ ಉಲ್ಲಂಘನೆಯಾಗಿದೆ. ಈ ಮಿತಿಯು 2026ಕ್ಕೆ ಕೊನೆಗೊಳ್ಳುತ್ತಿದ್ದು, ಈಗ ನಾವು 2011ರ ಜನಗಣತಿಯ ಆಧಾರದ ಮೇಲೆ ತಿದ್ದುಪಡಿ ತರುವ ಮೂಲಕ ಸಮತೋಲಿತ ಮತ್ತು ಅಂತರ್ಗತ ಪ್ರಜಾಪ್ರಭುತ್ವಕ್ಕೆ ಅಡಿಪಾಯ ಹಾಕುತ್ತಿದ್ದೇವೆ ಎಂದು ವಿವರಿಸಿದರು.

### ಜನಸಂಖ್ಯೆಯ ಅಗಾಧ ಏರಿಕೆ ಮತ್ತು ಸೀಟುಗಳ ಹೆಚ್ಚಳದ ವೈಜ್ಞಾನಿಕ ಹಂಚಿಕೆ

ದೇಶದ ಜನಸಂಖ್ಯೆಯು 1976ರಲ್ಲಿ ಕೇವಲ 54.79 ಕೋಟಿ ಇತ್ತು, ಆದರೆ ಇಂದು 140 ಕೋಟಿಯ ಬೃಹತ್ ಮೈಲಿಗಲ್ಲನ್ನು ತಲುಪಿದೆ, ಎಂಬ ಅಂಕಿಅಂಶಗಳನ್ನು ಮಂಡಿಸಿದ ಅವರು, ಇಷ್ಟು ದೊಡ್ಡ ಜನಸಂಖ್ಯೆಯನ್ನು ಪ್ರತಿನಿಧಿಸಲು ಕೇವಲ 543 ಸೀಟುಗಳು ಸಾಲದು. ಹೆಚ್ಚುತ್ತಿರುವ ಈ ಜನಸಂಖ್ಯೆಗೆ ತಕ್ಕಂತೆ ಸದನದ ಸದಸ್ಯರ ಸಂಖ್ಯೆಯನ್ನು ಹೆಚ್ಚಿಸದಿದ್ದರೆ ಸಾಮಾನ್ಯ ಜನರ ಧ್ವನಿ ಸಂಸತ್ತಿನಲ್ಲಿ ಕ್ಷೀಣಿಸುತ್ತದೆ. ಆದ್ದರಿಂದ, ಯಾವುದೇ ರಾಜ್ಯದ ಪ್ರಸಕ್ತ ಪಾಲಿಗೆ ಮತ್ತು ಹಕ್ಕುಗಳಿಗೆ ಧಕ್ಕೆಯಾಗದಂತೆ ಪ್ರತಿ ರಾಜ್ಯದಲ್ಲಿ ಲೋಕಸಭಾ ಸೀಟುಗಳ ಸಂಖ್ಯೆಯನ್ನು ಶೇಕಡಾ 50 ರಷ್ಟು ಹೆಚ್ಚಿಸಲು ಸರ್ಕಾರ ನಿರ್ಧರಿಸಿದೆ.

ಇದರ ವೈಜ್ಞಾನಿಕ ಲೆಕ್ಕಾಚಾರದ ಪ್ರಕಾರ, ದೇಶದ ಒಟ್ಟು ಲೋಕಸಭಾ ಸೀಟುಗಳ ಸಂಖ್ಯೆ ಪ್ರಸ್ತುತ ಇರುವ 543 ರಿಂದ 816ಕ್ಕೆ ಭಾರಿ ಏರಿಕೆಯಾಗಲಿದೆ. ಇದರಿಂದ ಸಂಸತ್ತಿನ ಕಾರ್ಯಕ್ಷಮತೆ ಹೆಚ್ಚಲಿದೆ ಮತ್ತು ಜನಪ್ರತಿನಿಧಿಗಳು ತಮ್ಮ ಮತದಾರರೊಂದಿಗೆ ಹೆಚ್ಚು ನಿಕಟವಾಗಿ ಕೆಲಸ ಮಾಡಲು ಸಾಧ್ಯವಾಗುತ್ತದೆ ಎಂದು ಹೇಳಿದರು.

### 2026ರ ಜನಗಣತಿ ಮತ್ತು ಐತಿಹಾಸಿಕ ಜಾತಿ ಗಣತಿ (Caste Census)

ಕೋವಿಡ್-19 ಸಾಂಕ್ರಾಮಿಕ ರೋಗದ ತೀವ್ರತೆಯಿಂದಾಗಿ 2021ರಲ್ಲಿ ನಡೆಸಬೇಕಿದ್ದ ಜನಗಣತಿಯನ್ನು ಸಮಯಕ್ಕೆ ಸರಿಯಾಗಿ ನಡೆಸಲು ತಾಂತ್ರಿಕ ಮತ್ತು ಸುರಕ್ಷತಾ ಕಾರಣಗಳಿಂದ ಸಾಧ್ಯವಾಗಲಿಲ್ಲ. ಆದರೆ, 2024ರಲ್ಲಿ ಪ್ರಕ್ರಿಯೆ ಆರಂಭವಾದಾಗ ದೇಶದ ವಿವಿಧ ಭಾಗಗಳಿಂದ ಬಂದ ನ್ಯಾಯಸಮ್ಮತ ಬೇಡಿಕೆಗಳನ್ನು ಪರಿಗಣಿಸಿ, ಪ್ರಧಾನಿ ನರೇಂದ್ರ ಮೋದಿ ಅವರು  ನಡೆಸಲು ಐತಿಹಾಸಿಕ ತೀರ್ಮಾನ ಕೈಗೊಂಡಿದ್ದಾರೆ.

ಪ್ರಮುಖ ವಿರೋಧ ಪಕ್ಷವು ಹಿಂದೆ ಒಬಿಸಿ (OBC) ಸಮುದಾಯಗಳ2026ರ ಹೊಸ ಜನಗಣತಿಯನ್ನು ಜಾತಿ ಎಣಿಕೆಯೊಂದಿಗೆ (Caste Enumeration) ಹಿತಾಸಕ್ತಿಯನ್ನು ಸತತವಾಗಿ ಕಡೆಗಣಿಸಿತ್ತು, ಕಾಕಾ ಕಾಲೇಲ್ಕರ್ ವರದಿಗಳನ್ನು ಕಸದ ಬುಟ್ಟಿಗೆ ಹಾಕಿತ್ತು. ಆದರೆ ನಮ್ಮ ಸರ್ಕಾರವು ಎಲ್ಲಾ ವರ್ಗಗಳ ಸಮಾನ ಏಳಿಗೆಗಾಗಿ ಪಾರದರ್ಶಕವಾಗಿ ಜಾತಿ ಗಣತಿಯನ್ನು ನಡೆಸಲು ಮುಂದಾಗಿದೆ. ಇದು ಹಿಂದುಳಿದ ವರ್ಗಗಳಿಗೆ ಸಿಗಬೇಕಾದ ಸಾಂವಿಧಾನಿಕ ಹಕ್ಕುಗಳನ್ನು ನಿಖರವಾಗಿ ಒದಗಿಸಲು ದತ್ತಾಂಶ ಆಧಾರಿತ ಮಾರ್ಗವಾಗಲಿದೆ ಎಂದು ಅವರು ನುಡಿದರು.

### ಧರ್ಮ ಆಧಾರಿತ ಮೀಸಲಾತಿಯ ಸಾಂವಿಧಾನಿಕ ವಿರೋಧ ಮತ್ತು ನಿಲುವು

ಮುಸ್ಲಿಂ ಮಹಿಳೆಯರಿಗೂ ಪ್ರತ್ಯೇಕ ಮೀಸಲಾತಿ ನೀಡಬೇಕೆಂಬ ವಿರೋಧ ಪಕ್ಷಗಳ ಬೇಡಿಕೆಯನ್ನು ಅಮಿತ್ ಶಾ ಅವರು ಸಂವಿಧಾನದ ವಿಧಿಗಳ ಆಧಾರದ ಮೇಲೆ ಕಟ್ಟುನಿಟ್ಟಾಗಿ ತಳ್ಳಿಹಾಕಿದರು. ಭಾರತದ ಸಂವಿಧಾನವು ಧರ್ಮದ ಆಧಾರದ ಮೇಲೆ ಯಾವುದೇ ರೀತಿಯ ಮೀಸಲಾತಿಯನ್ನು ನೀಡಲು ಕಿಂಚಿತ್ತೂ ಅವಕಾಶ ನೀಡುವುದಿಲ್ಲ. ಮೀಸಲಾತಿಯು ಸಾಮಾಜಿಕ ಹಿನ್ನೆಲೆ ಮತ್ತು ಐತಿಹಾಸಿಕ ಅನ್ಯಾಯಗಳನ್ನು ಸರಿಪಡಿಸಲು ನೀಡಲಾದ ಹಕ್ಕಾಗಿದ್ದು, ಇದನ್ನು

## ದಕ್ಷಿಣ ಭಾರತದ ರಾಜ್ಯಗಳ ಹಿತರಕ್ಷಣೆ , ಅಂಕಿಅಂಶಗಳ ವಿವರಣೆ

**ಕ್ಷೇತ್ರ ಮರುವಿಂಗಡಣೆಯಿಂದ ದಕ್ಷಿಣ ಭಾರತದ ರಾಜ್ಯಗಳ ಪ್ರಾತಿನಿಧ್ಯ ಕಡಿಮೆಯಾಗುತ್ತದೆ ಎಂಬ ಭಯವು ಕೇವಲ ಜನರನ್ನು ಹಾದಿ ತಪ್ಪಿಸುವ ರಾಜಕೀಯ ಪ್ರೇರಿತ ನಿರೂಪಣೆಯಾಗಿದೆ ಎಂದ ಸಚಿವರು, ಪ್ರಸ್ತುತ ಕರ್ನಾಟಕ, ಆಂಧ್ರಪ್ರದೇಶ, ತೆಲಂಗಾಣ, ತಮಿಳುನಾಡು ಮತ್ತು ಕೇರಳ ರಾಜ್ಯಗಳು ಒಟ್ಟು 129 ಸೀಟುಗಳನ್ನು ಹೊಂದಿದ್ದು, ಇದು ರಾಷ್ಟ್ರದ ಒಟ್ಟು ಸೀಟುಗಳ ಶೇ. 23.76 ರಷ್ಟಿದೆ. ಮರುವಿಂಗಡಣೆಯ ನಂತರ 2011ರ ಜನಗಣತಿಯ ಮಾನದಂಡಗಳ ಪ್ರಕಾರ ಈ ರಾಜ್ಯಗಳ ಸೀಟುಗಳ ಸಂಖ್ಯೆ 195 ಕ್ಕೆ ಏರಲಿದೆ. ಅಂದರೆ ಒಟ್ಟು 816 ಸೀಟುಗಳಲ್ಲಿ ಇವುಗಳ ಪಾಲು ಶೇ. 23.87 ಆಗಲಿದೆ. ಇದರಿಂದ ದಕ್ಷಿಣದ ರಾಜ್ಯಗಳ ಪ್ರಾತಿನಿಧ್ಯ ಕಡಿಮೆಯಾಗುವ ಬದಲಿಗೆ ಶೇ. 0.11 ರಷ್ಟು ಹೆಚ್ಚಾಗಲಿದೆ. ವಿರೋಧ ಪಕ್ಷಗಳು ಉತ್ತರ ಮತ್ತು ದಕ್ಷಿಣದ ನಡುವೆ ವಿಷ ಬೀಜವನ್ನು ಬಿತ್ತುವಂತಹ ಈ ಪ್ರಯತ್ನವನ್ನು ಬಿಟ್ಟು ದೇಶದ ಒಕ್ಕೂಟ ವ್ಯವಸ್ಥೆಯ ಗೌರವವನ್ನು ಕಾಪಾಡಬೇಕು ಎಂದರು.**

ಧರ್ಮದ ಕನ್ನಡಕದಲ್ಲಿ ನೋಡುವುದು ಅಸಾಂವಿಧಾನಿಕ. ವಿರೋಧ ಪಕ್ಷಗಳು ಕೇವಲ ತುಷ್ಟೀಕರಣದ ರಾಜಕೀಯಕ್ಕಾಗಿ ಮತ್ತು ಮತಬ್ಯಾಂಕ್‌ನ್ನು ಭದ್ರಪಡಿಸಿಕೊಳ್ಳಲು ಇಂತಹ ಬೇಡಿಕೆಗಳನ್ನು ಇಡುತ್ತಿವೆ. ನಮ್ಮ ಸರ್ಕಾರವು ಸಂವಿಧಾನದ ಮೌಲ್ಯಗಳನ್ನು ಎತ್ತಿಹಿಡಿಯುತ್ತದೆ ಮತ್ತು ಧರ್ಮದ ಆಧಾರದ ಮೇಲೆ ಮೀಸಲಾತಿಯನ್ನು ನೀಡಲು ಎಂದಿಗೂ ಅವಕಾಶವನ್ನು ನೀಡುವುದಿಲ್ಲ ಎಂದು ಅವರು ಈ ಸಂದರ್ಭದಲ್ಲಿ ಸ್ಪಷ್ಟವಾಗಿ ಘೋಷಿಸಿದರು.

### ಐತಿಹಾಸಿಕ ಹಾದಿ ಮತ್ತು ರದ್ದಾದ ಮಹಿಳಾ ಮೀಸಲಾತಿ ಮಸೂದೆಗಳು

1992ರಲ್ಲಿ ಪಂಚಾಯತ್‌ಗಳಲ್ಲಿ ಮಹಿಳೆಯರಿಗೆ ಶೇ. 33 ಮೀಸಲಾತಿ ನೀಡಿದ ನಂತರ, ಸಂಸತ್ತಿನಲ್ಲಿ ಈ ಮೀಸಲಾತಿಗಾಗಿ ನಡೆದ ದೀರ್ಘ ಮತ್ತು ನೋವಿನ ಹಾದಿಯನ್ನು ಶಾ ವಿವರಿಸಿದರು. 1996ರಲ್ಲಿ ದೇವೇಗೌಡರ ಕಾಲದ 81ನೇ ಮಸೂದೆ, 1998ರ 84ನೇ ಮಸೂದೆ, ಮತ್ತು 2008ರ ಮನಮೋಹನ್ ಸಿಂಗ್ ಕಾಲದ 108ನೇ ಮಸೂದೆಗಳೆಲ್ಲವೂ ಪ್ರತಿಪಕ್ಷಗಳ ಆಂತರಿಕ ಕಲಹ ಮತ್ತು ಅಸಹಕಾರದಿಂದಾಗಿ ರದ್ದಾಗಿದ್ದವು. ಪ್ರತಿಪಕ್ಷಗಳು ಅಧಿಕಾರದಲ್ಲಿದ್ದಾಗ ಮಹಿಳೆಯರಿಗೆ ಸ್ಥಾನ ನೀಡಲು ಹಿಂಜರಿದವು.

ಆದರೆ ಮೋದಿ ಸರ್ಕಾರವು ಬದ್ಧತೆಯಿಂದ 'ನಾರಿ ಶಕ್ತಿ ವಂದನ್ ಕಾಯ್ದೆಯನ್ನು' ಜಾರಿಗೆ ತರುವಲ್ಲಿ ಯಶಸ್ವಿಯಾಗಿದೆ. 2011ರ ಜನಗಣತಿಯ ಆಧಾರದ ಮೇಲೆ ಈಗ ಸೀಟುಗಳ ಹೆಚ್ಚಳ ಮಾಡುತ್ತಿರುವುದರಿಂದ ಈ ಮೀಸಲಾತಿಯು ಶೀಘ್ರವಾಗಿ ಕಾರ್ಯರೂಪಕ್ಕೆ ಬರಲಿದೆ, ಇದು ಬರಿ ಘೋಷಣೆಯಲ್ಲ, ಇದೊಂದು ದೃಢ ಸಂಕಲ್ಪ ಎಂದು ಅವರು ಸಂಸತ್ತಿಗೆ ತಿಳಿಸಿದರು.

### ಮಹಿಳಾ ನೇತೃತ್ವದ ಅಭಿವೃದ್ಧಿ ಮತ್ತು ರಾಜಕೀಯ ಪ್ರಾತಿನಿಧ್ಯದ ಸಾಧನೆ

ಮೊದಲ ಲೋಕಸಭೆಯಲ್ಲಿ ಕೇವಲ 22 ಮಹಿಳೆಯರಿದ್ದರೆ, ಇಂದಿನ 18ನೇ ಲೋಕಸಭೆಯಲ್ಲಿ 75 ಮಹಿಳಾ ಸದಸ್ಯರಿದ್ದಾರೆ. ಸರ್ಕಾರವು ಶ್ರೀಮತಿ ಸುಷ್ಮಾ ಸ್ವರಾಜ್, ಕು. ಉಮಾ ಭಾರತಿ, ಶ್ರೀಮತಿ ವಸುಂಧರಾ ರಾಜೆ ಮತ್ತು ಶ್ರೀಮತಿ ಆನಂದಿಬೆನ್ ಪಟೇಲ್ ಅವರಂತಹ ಸಮರ್ಥ ಮಹಿಳೆಯರಿಗೆ ಉನ್ನತ ಸ್ಥಾನಗಳನ್ನು ನೀಡಿದೆ. ಶ್ರೀಮತಿ ದ್ರೌಪದಿ ಮುರ್ಮು ಅವರನ್ನು ದೇಶದ ಅತ್ಯುನ್ನತ ರಾಷ್ಟ್ರಪತಿ ಸ್ಥಾನಕ್ಕೆ ಆಯ್ಕೆ ಮಾಡುವ ಮೂಲಕ ಬುಡಕಟ್ಟು ಸಮುದಾಯದ ಮಹಿಳೆಯರಿಗೂ ಗೌರವ ನೀಡಿದೆ. ಇಂದು ಪಂಚಾಯತ್‌ಗಳಲ್ಲಿ 14 ಲಕ್ಷ ಮಹಿಳೆಯರು ಚುನಾಯಿತ ಪ್ರತಿನಿಧಿಗಳಾಗಿ ಸೇವೆ ಸಲ್ಲಿಸುತ್ತಿರುವುದು ಮಹಿಳಾ ನೇತೃತ್ವದ ಅಭಿವೃದ್ಧಿಯ ನಿಜವಾದ ಸಂಕೇತವಾಗಿದೆ ಎಂದು ಅವರು ಹೆಮ್ಮೆಯಿಂದ ನುಡಿದರು.

### ವಿರೋಧದ ಚಾಳಿ

ಪ್ರಧಾನಿ ಶ್ರೀ ನರೇಂದ್ರ ಮೋದಿ ಅವರು ಕೈಗೊಂಡ ಪ್ರತಿಯೊಂದು ಐತಿಹಾಸಿಕ ನಿರ್ಧಾರವನ್ನು ವಿರೋಧ ಪಕ್ಷಗಳು ಕಣ್ಣುಮುಚ್ಚಿ ವಿರೋಧಿಸುತ್ತಲೇ ಬಂದಿವೆ ಎಂದು ಶಾ ಆಕ್ರೋಶ ವ್ಯಕ್ತಪಡಿಸಿದರು. ಆರ್ಟಿಕಲ್ 370 ರದ್ದತಿ, ರಾಮಮಂದಿರ ನಿರ್ಮಾಣ, ಪೌರತ್ವ ತಿದ್ದುಪಡಿ ಕಾಯ್ದೆ (CAA), ಜಿಎಸ್‌ಟಿ ಜಾರಿ, ಆಯುಷ್ಮಾನ್ ಭಾರತ್ ಮತ್ತು ದೇಶದ ಹೆಮ್ಮೆಯ ಸರ್ಜಿಕಲ್ ಸ್ಟ್ರೈಕ್‌ಗಳನ್ನೂ ಸಂಶಯದ ಕಣ್ಣಿನಿಂದ ನೋಡಲಾಗಿತ್ತು.

ಇಂದು 2011ರ ಜನಗಣತಿಯ ಆಧಾರದ ಮೇಲೆ ಮಹಿಳೆಯರಿಗೆ ಮೀಸಲಾತಿ ಮತ್ತು ಸೀಟುಗಳ ಹೆಚ್ಚಳ ಮಾಡುತ್ತಿರುವುದು ಪ್ರಧಾನಿ ಶ್ರೀ ಮೋದಿಯವರ ಜನಪ್ರಿಯತೆಯನ್ನು ಇನ್ನಷ್ಟು ಹೆಚ್ಚಿಸುತ್ತದೆ ಎಂಬ ಹೊಟ್ಟೆಕಿಚ್ಚಿನಿಂದ ಪ್ರತಿಪಕ್ಷಗಳು ವಿರೋಧಿಸುತ್ತಿವೆ. ಅಂತರರಾತ್ಮವಿಲ್ಲದ ರಾಜಕೀಯ ಮಾಡುವವರು ಮಹಿಳೆಯರ ಆಕ್ರೋಶಕ್ಕೆ ಬಲಿಯಾಗುವುದು ಖಚಿತ ಎಂದು ಹೇಳಿದರು.





## ನಾರಿ ಶಕ್ತಿಯ ಹೆಜ್ಜೆಗೆ ಕಾಂಗ್ರೆಸ್ ವಿರೋಧ ಖಂಡಿಸಿ "ನಾರಿ ಶಕ್ತಿ ಫೋರಂ" ವತಿಯಿಂದ

# ಬೃಹತ್ ಪ್ರತಿಭಟನೆ






**ರತನ್ ರಮೇಶ್ ಪೂಜಾರಿ**
ವಕ್ತಾರರು, ಬಿಜೆಪಿ ಮಾಧ್ಯಮ ವಿಭಾಗ


**ಭಾ**ರತೀಯ ಸಂಸ್ಕೃತಿಯಲ್ಲಿ ಮಹಿಳೆಯರಿಗೆ ವಿಶೇಷವಾದ ಸ್ಥಾನ ನೀಡಲಾಗಿದೆ. 'ಯತ್ರ ನಾರ್ಯಸ್ತು ಪೂಜ್ಯಂತೆ ರಮಂತೆ ತತ್ರ ದೇವತಾಃ' - ಅಂದರೆ ಎಲ್ಲಿ ಮಹಿಳೆಯರು ಪೂಜಿಸಲ್ಪಡುತ್ತಾರೋ ಅಲ್ಲಿ ಸಾಕ್ಷಾತ್ ದೇವತೆಗಳೇ ನೆಲೆಸುತ್ತಾರೆ ಎಂದು ನಮ್ಮ ಶಾಸ್ತ್ರಗಳು ಹೇಳಿವೆ. ಭಾರತೀಯ ದೇವರುಗಳನ್ನು ಒಮ್ಮೆ ಅವಲೋಕಿಸಿದರೆ ವಿದ್ಯೆಗೆ ಅಧಿದೇವತೆ ಶಾರದೆ, ಸಂಪತ್ತಿಗೆ ಲಕ್ಷ್ಮಿ, ಶಕ್ತಿಗೆ ಅಧಿದೇವತೆ ದುರ್ಗೆ. ಹಾಗೆಯೇ ಭದ್ರಕಾಳಿ, ಮಹಾಕಾಳಿ, ಅಣ್ಣಮ್ಮ ದೇವಿ, ಮಾರಮ್ಮ ದೇವಿ ಹೀಗೆ ಹೀಗೆ ಹಲವಾರು ದೇವಾನುದೇವತೆಯರು ನಮ್ಮ ದೈನಂದಿನ ಆರಾಧ್ಯ ದೇವರುಗಳಾಗಿದ್ದಾರೆ.

ಇಂದಿನ ಆಧುನಿಕ ಪ್ರಪಂಚದಲ್ಲಿ ಮಹಿಳೆ ಕೇವಲ ಮನೆಯ ನಾಲ್ಕು ಗೋಡೆಗಳಿಗೆ ಸೀಮಿತವಾಗಿರದೆ ಉದ್ಯೋಗ, ಉದ್ಯಮ, ವಿವಿಧ ಉಪಕ್ರಮದ ಜೊತೆಗೆ ವಾಹನ, ಮೆಟ್ರೋ, ಫೈಟರ್ ಜೆಟ್ಟುಗಳನ್ನು ಮುನ್ನಡೆಸುವವರೆಗೆ ಮುಂದುವರಿದಿದ್ದಾರೆ. ಅದರಂತೆ ರಾಜ್ಯ ಹಾಗೂ ದೇಶದ ನೀತಿ ನಿಯಮ, ಕಾನೂನು ರೂಪಣೆ ಸೇರಿದಂತೆ ಶಾಸನ ರಚಿಸುವುದರಲ್ಲೂ ಕೂಡ ಮಹಿಳೆಯರ ಭಾಗಿದಾರಿಕೆ ದೊಡ್ಡ ಪ್ರಮಾಣದಲ್ಲಿ ಇರಬೇಕೆಂದು ನಾರಿ ಶಕ್ತಿ ವಂದನ್ ಅಧಿನಿಯಮ ಬಿಲ್ಲನ್ನು ನರೇಂದ್ರ ಮೋದಿ ಸರಕಾರ ಅಂಗೀಕರಿಸಲು ಇತ್ತೀಚಿಗೆ ವಿಶೇಷ ಅಧಿವೇಶನವನ್ನು ಕರೆದು ಚರ್ಚಿಸಿ ಪಾಸ್ ಮಾಡುವ ಒಂದು ದೊಡ್ಡ ಉಪಕ್ರಮಕ್ಕೆ ಕೈಹಾಕಿತ್ತು. ಆದರೆ ಕಾಂಗ್ರೆಸ್, ಟಿಎಂಸಿ, ಡಿಎಂಕೆ, ಎಸ್ಪಿ ಸೇರಿದಂತೆ ಹಲವು ವಿರೋಧ ಪಕ್ಷಗಳು ಈ ಬಿಲ್ ಪಾಸ್ ಮಾಡುವ ಕಾರ್ಯಕ್ಕೆ ಬಹುದೊಡ್ಡ ಅಡ್ಡಿ ಉಂಟುಮಾಡಿದ್ದರು.

ಪ್ರಧಾನಿ ಶ್ರೀ ನರೇಂದ್ರ ಮೋದಿ ಅವರು ಮಹಿಳೆಯರಿಗೆ ಹೆಚ್ಚಿನ ರಾಜಕೀಯ ಪ್ರಾತಿನಿಧ್ಯ ನೀಡುವ ನಿಟ್ಟಿನಲ್ಲಿ ಲೋಕಸಭೆ ಹಾಗೂ ವಿಧಾನಸಭೆಯಲ್ಲಿ ಶೇ. 33% ಮಹಿಳಾ ಮೀಸಲಾತಿ ನೀಡುವುದಕ್ಕೆ ಮುಂದಾಗಿದ್ದರು. ಆದರೆ, ಐತಿಹಾಸಿಕ ನಾರಿಶಕ್ತಿ ವಂದನಾ ಮಸೂದೆಯನ್ನು ಕಾಂಗ್ರೆಸ್ ಮತ್ತು ಪ್ರಾದೇಶಿಕ ಪಕ್ಷಗಳಾದ ಸಮಾಜವಾದಿ, ಡಿಎಂಕೆ, ಟಿಎಂಸಿ ಲೋಕಸಭೆಯಲ್ಲಿ ಸೋಲಿಸುವ ಮೂಲಕ ದೇಶದ ಮಹಿಳೆಯರಿಗೆ ದ್ರೋಹ ಬಗೆದಿವೆ.

ಕಾಂಗ್ರೆಸ್ ಪಕ್ಷ ಹಾಗೂ ಇತರ ವಿರೋಧ ಪಕ್ಷಗಳ ಈ ಮಹಿಳಾ ವಿರೋಧಿ ನಡೆಗೆ ದೇಶದಾದ್ಯಂತ ಮಹಿಳೆಯರಿಂದ ಆಕ್ರೋಶ ವ್ಯಕ್ತವಾಗಿದೆ. ನಾರಿಶಕ್ತಿಗೆ ದ್ರೋಹ ಬಗೆದ ಕಾಂಗ್ರೆಸ್ ಪಕ್ಷಕ್ಕೆ ತಕ್ಕ ಪಾಠ ಕಲಿಸಲು ಭಾರತೀಯ ಜನತಾ ಪಾರ್ಟಿ ಮಹಿಳಾ ಮೋರ್ಚಾ ವತಿಯಿಂದ ವಿರೋಧ ಪಕ್ಷಗಳ ಈ ಮಹಿಳಾ ವಿರೋಧಿ ಮನಸ್ಥಿತಿ ಜನರ ಅರಿವಿಗೆ ತರಲು ಹಲವು ಕಡೆಗಳಲ್ಲಿ ಪ್ರತಿಭಟನೆಗಳನ್ನು ನಡೆಸಲಾಯಿತು.

ದಿನಾಂಕ 25-4-2026 ರಂದು ಬೆಂಗಳೂರಿನ ಸ್ವಾತಂತ್ರ್ಯ ಉದ್ಯಾನದಲ್ಲಿ "ನಾರಿ ಶಕ್ತಿ ಫೋರಂ" ವತಿಯಿಂದ ಬೃಹತ್ ಪ್ರತಿಭಟನೆ ಹಮ್ಮಿಕೊಳ್ಳಲಾಗಿತ್ತು. ಕೇಂದ್ರ ಸಚಿವೆ ಕು. ಶೋಭಾ ಕರಂದ್ಲಾಜೆ, ರಾಜ್ಯ ಮಹಿಳಾ ಮೋರ್ಚಾ ಅಧ್ಯಕ್ಷೆ ಕು. ಸಿ.ಮಂಜುಳಾ, ಡಾ.ಎಸ್.ಜಿ. ಸುಶೀಲಮ್ಮ, 'ನಾರಿ ಶಕ್ತಿ ಫೋರಂ'ನ ಸಂಚಾಲಕರಾದ ಶ್ರೀಮತಿ ಪುಣ್ಯವತಿ

ಸಿ.ನಾಗರಾಜ್, ತಂಡದ ಸದಸ್ಯರಾದ ಶ್ರೀಮತಿ ಮಾಳವಿಕ ಅವಿನಾಶ್, ಶ್ರೀಮತಿ ವಿಜಯ ಲಕ್ಷ್ಮೀ ಆನಂದ್, ಶ್ರೀಮತಿ ರೂಪ ಅಯ್ಯರ್, ಕು.ಸುಗುಣ, ಶ್ರೀಮತಿ ರಜನಿ. ಪೈ, ಶ್ರೀಮತಿ ಅಶ್ವಿನಿ ಶಂಕರ್, ಶ್ರೀಮತಿ ಮಂಜುಳಾ ದೇವಿ, ಶ್ರೀಮತಿ ನೀತಾ ರೆಡ್ಡಿ, ಶ್ರೀಮತಿ ಶ್ವೇತಾ ರಾಘವೇಂದ್ರ, ಶ್ರೀಮತಿ ವಿಭಾ ಹಾಗೂ ವಿವಿಧ ಸಂಘ ಸಂಸ್ಥೆಗಳ ಮುಖಂಡರು. ಕಾರ್ಯಕರ್ತರು ಉಪಸ್ಥಿತರಿದ್ದರು

ರಾಜ್ಯದ ವಿಧಾನಸಭೆ ಮತ್ತು ದೇಶದ ಲೋಕಸಭೆಯಲ್ಲಿ ಮಹಿಳೆಯರ ಪ್ರಾತಿನಿಧ್ಯ ಜಾಸ್ತಿ ಆಗಬೇಕು. ಮಹಿಳೆಯರು ಕಾನೂನು ರೂಪಿಸುವ ಜವಾಬ್ದಾರಿಯುತ ಅವಕಾಶ ಪಡೆಯಬೇಕು ಎಂದು ಮಹಿಳಾ ಮೀಸಲಾತಿ ಮಸೂದೆ ಜಾರಿಗೆ ಕೇಂದ್ರ ಸರ್ಕಾರ ಮುಂದಾಗಿತ್ತು. ದೇಶಕ್ಕೆ ಬೇಕಾದ ಕಾನೂನು ಲೋಕಸಭೆಯಲ್ಲಿ ಸಿದ್ಧವಾಗುತ್ತದೆ. ಯಾವ ನೀತಿ ಬೇಕು? ಹೇಗಿರಬೇಕು ಎಂಬ ನಿರ್ಣಾಯಕ ಪಾತ್ರದಲ್ಲಿ ಮಹಿಳೆಯರ ಪಾಲು ಇರಬೇಕು ಎಂಬ ಉದ್ದೇಶದಿಂದ ಮಹಿಳಾ ಮೀಸಲಾತಿ ಮಸೂದೆ ಮಂಡನೆಯಾಗಿತ್ತು. ಆದರೆ ಈ ಮಸೂದೆಗೆ ಕಾಂಗ್ರೆಸ್ ಹಾಗೂ ಅವರ ಮಿತ್ರ ಪಕ್ಷಗಳು ಬೆಂಬಲ ನೀಡದೆ ಸೋಲಾಗುವಂತೆ ಮಾಡಿದವು ಎಂದು ಶೋಭಾ ಕರಂದ್ಲಾಜೆ ಅವರು ಆರೋಪಿಸಿದರು.

ಪ್ರಧಾನಿ ಮೋದಿ ಅವರು ಮಹಿಳಾ ಸಂಸದರಿಗೆ ದೊಡ್ಡ ದೊಡ್ಡ ಜವಾಬ್ದಾರಿ ಕೊಟ್ಟಿದ್ದಾರೆ. ನಿರ್ಮಲಾ ಸೀತಾರಾಮನ್ ಅವರು ಈಗ ಹಣಕಾಸು ಸಚಿವೆ ಆಗಿದ್ದಾರೆ. ಈ ಹಿಂದೆ ರಕ್ಷಣಾ ಸಚಿವರಾಗಿದ್ದರು. ಭಾರತ ಇಂದು ವಿಶ್ವದ ಆರ್ಥಿಕ ಶಕ್ತಿಗಳಲ್ಲಿ ನಾಲ್ಕನೇ ಶಕ್ತಿ ಆಗಿದೆ. ಇಂದು ಮಹಿಳೆ ಯುದ್ಧ ವಿಮಾನಗಳನ್ನು ಚಾಲನೆ ಮಾಡುತ್ತಾರೆ. ಸಿಂಧೂರ ಕಾರ್ಯಾಚರಣೆಯ ನೇತೃತ್ವ ವಹಿಸಿದ್ದು ಮಹಿಳೆ. ಹೀಗೆ ಮಹಿಳೆಯ ಧ್ವನಿ ದೊಡ್ಡದಿದೆ. ಈ ಧ್ವನಿಗೆ ಶಿಕ್ಷಣ ಇದ್ದಾಗ ಬೆಲೆ ಬರುತ್ತೆ. ಹಣ ಇದ್ದಾಗ ಗೌರವ ಬರುತ್ತೆ. ಇದೆಲ್ಲಕ್ಕಿಂತ ನೀತಿ ರೂಪಿಸುವಲ್ಲಿ ಮಹಿಳೆ ಇದ್ದರೆ ಇನ್ನೂ ಒಳ್ಳೆಯದು ಎಂದರು. ರಾಜ್ಯ ಮಹಿಳಾ ಆಯೋಗದ ಮಾಜಿ ಅಧ್ಯಕ್ಷರು ಮತ್ತು ವಕೀಲರಾದ ಕು. ಸಿ ಮಂಜುಳ ಅವರು ಮಾತನಾಡಿ, ನಾರೀ ಶಕ್ತಿ ಇಂದು ಪ್ರಬಲವಾಗಿ ಬೆಳೆದಿದೆ. ನಾರಿಶಕ್ತಿ ಗುಡುಗಿದರೆ ಸೋನಿಯಾಗಾಂಧಿ, ಪ್ರಿಯಾಂಕಾ ಗಾಂಧಿ ಹಾಗೂ ರಾಹುಲ್ ಗಾಂಧಿ ಅವರು ನಡುಗುವ ಹಾಗೆ ಆಗಬೇಕು. ಆ ಮಟ್ಟಿನ ಹೋರಾಟ ಮಾಡಬೇಕು ಎಂದರು.

ಸಿಲಿಕಾನ್ ಸಿಟಿಯ ಮಹಿಳೆಯರು ಕೇವಲ ಕಂಪ್ಯೂಟರ್ ಮುಂದೆ ಕುಳಿತು ಕೆಲಸ ಮಾಡುವವರಲ್ಲ. ಅನ್ಯಾಯದ ವಿರುದ್ಧ ಸಿಡಿದೇಳುವ ಜ್ವಾಲಾಮುಖಿಗಳು. ಭಾರತದ ಮಹಿಳೆ ಕೇವಲ ಹೂವಲ್ಲ, ಅವಳು ಜ್ವಾಲೆ. ನಾರೀ ಶಕ್ತಿ ರಾಷ್ಟ್ರಶಕ್ತಿಯಾಗಬೇಕು ಎಂದು ಹೇಳಿದರು. ಸುಮಂಗಲಿ ಸೇವಾ ಆಶ್ರಮದ ಸ್ಥಾಪಕರು ಮತ್ತು ಪದ್ಮಶ್ರೀ ಪ್ರಶಸ್ತಿ ಪುರಸ್ಕೃತರಾದ ಡಾ. ಎಸ್.ಜಿ. ಸುಶೀಲಮ್ಮ ಅವರು ಮಾತನಾಡಿ, ಮಹಿಳೆಯರ ಸಂಖ್ಯೆ ಜಾಸ್ತಿ ಆಗಿದೆ. ಅವರು ಇಂದು ಹೆಚ್ಚು ಹೆಚ್ಚು ಓದಿದ್ದಾರೆ. ತಿಳಿವಳಿಕೆ ಇದೆ. ಆದ್ದರಿಂದ ಲೋಕಸಭೆ ಮತ್ತು ವಿಧಾನಸಭೆಗಳಲ್ಲಿ ಸ್ಥಾನಗಳನ್ನು ಪಡೆಯಲು ಮಸೂದೆ ಮಂಡಿಸಲಾಗಿತ್ತು, ಆದರೆ ಕಾಂಗ್ರೆಸ್ ಬೆಂಬಲ ನೀಡಲಿಲ್ಲ. ನಾವೆಲ್ಲರೂ ಕಾಂಗ್ರೆಸ್ ವಿರುದ್ಧ ಹೋರಾಟ ಮಾಡೋಣ ಎಂದು ಕರೆ ನೀಡಿದರು.

ದಿನಾಂಕ 1-5-2026ರಂದು ಬಿಜೆಪಿ ಮಹಿಳಾ ಮೋರ್ಚಾ ವತಿಯಿಂದ ಹುಬ್ಬಳ್ಳಿಯಲ್ಲಿ ಬೃಹತ್ ಜನಾಕ್ರೋಶ ಮಹಿಳಾ ಪ್ರತಿಭಟನಾ ಸಭೆ ಜರುಗಿತು. ರಾಜ್ಯಾಧ್ಯಕ್ಷರಾದ ಶ್ರೀ ವಿಜಯೇಂದ್ರ ಯಡಿಯೂರಪ್ಪ, ಕೇಂದ್ರ ಸಚಿವರಾದ ಶ್ರೀ ಪ್ರಲ್ಹಾದ್ ಜೋಶಿ, ಕು. ಶೋಭಾ ಕರಂದ್ಲಾಜೆ, ಮಾಜಿ ಮುಖ್ಯಮಂತ್ರಿ ಮತ್ತು ಸಂಸದ ಶ್ರೀ ಬಸವರಾಜ ಬೊಮ್ಮಾಯಿ, ವಿರೋಧ ಪಕ್ಷದ ಉಪನಾಯಕ ಶ್ರೀ ಅರವಿಂದ ಬೆಲ್ಲದ್, ಶಾಸಕ ಶ್ರೀ ಮಹೇಶ್ ಟೆಂಗಿನಕಾಯಿ, ವಿಧಾನಪರಿಷತ್ ಸದಸ್ಯರಾದ ಶ್ರೀಮತಿ ಭಾರತಿ ಶೆಟ್ಟಿ, ರಾಜ್ಯ ಉಪಾಧ್ಯಕ್ಷರಾದ ಶ್ರೀಮತಿ ಮಾಳವಿಕ ಅವಿನಾಶ್, ಶ್ರೀಮತಿ ರೂಪಾಲಿ ನಾಯಕ್, ಮಹಿಳಾ ಮೋರ್ಚಾ ರಾಜ್ಯ ಅಧ್ಯಕ್ಷರಾದ ಕು. ಸಿ. ಮಂಜುಳಾ, ಪಕ್ಷದ ಶಾಸಕರು, ಜನಪ್ರತಿನಿಧಿಗಳು, ಪಕ್ಷದ ಪದಾಧಿಕಾರಿಗಳು, ಕಾರ್ಯಕರ್ತರು ಭಾಗವಹಿಸಿದ್ದರು.

ಪ್ರಧಾನಮಂತ್ರಿಗಳಾದ ನರೇಂದ್ರ ಮೋದಿಜೀ ಅವರು ದೇಶದ ಅಭಿವೃದ್ಧಿಯಲ್ಲಿ ನಾರಿಶಕ್ತಿಯ ಮಹತ್ವದ ಪಾತ್ರವನ್ನು ಅರ್ಥ ಮಾಡಿಕೊಂಡವರು. ಮೋದಿಜೀ ಅವರ ಸಂಕಲ್ಪಕ್ಕೆ ಬೆಂಬಲ ನೀಡಲು ಸುತ್ತಲಿನ ಜಿಲ್ಲೆಗಳಿಂದ ಬಂದ ಮಹಿಳೆಯರು, ಜನರನ್ನು ಅಭಿನಂದಿಸುತ್ತೇನೆ. ಬಿಜೆಪಿ ಯಾವತ್ತೂ ತಾಯಂದಿರ ಪರ ನಿಲ್ಲಲಿದೆ. ಮುಂದಿನ ದಿನಗಳಲ್ಲೂ ಈ ಹೋರಾಟ ಮುಂದುವರೆಸೋಣ. ಮಾಜಿ ಮುಖ್ಯಮಂತ್ರಿ, ಯಡಿಯೂರಪ್ಪ ಅವರೂ ಭಾಗ್ಯಲಕ್ಷ್ಮಿ ಯೋಜನೆಯನ್ನು ಜಾರಿಗೊಳಿಸಿದ್ದರು. ಬೈಸಿಕಲ್ ಯೋಜನೆ ತಂದಿದ್ದರು. ಬಿಜೆಪಿ, ನಾರಿ ಶಕ್ತಿಗೆ ಗೌರವ ಕೊಡುವ ಕೆಲಸ ಮಾಡುತ್ತಿದೆ ಎಂದು ರಾಜ್ಯಾಧ್ಯಕ್ಷರಾದ ಶ್ರೀ ವಿಜಯೇಂದ್ರ ಯಡಿಯೂರಪ್ಪನವರು ಮಾತನಾಡಿದರು.

ಕೇಂದ್ರ ಸಚಿವರಾದ ಶ್ರೀ ಪ್ರಹ್ಲಾದ್ ಜೋಶಿ ರವರು ಕಾಂಗ್ರೆಸ್ಸನ್ನು ಮಹಿಳಾ ವಿರೋಧಿ ನೀತಿ ವಿರುದ್ಧ ಹರಿಹಾಯ್ದಿದ್ದಾರೆ. ನಕಲಿ ಗಾಂಧಿ ಮನೆತನದ ಮಹಿಳೆಯರಷ್ಟೇ ಆಡಳಿತಕ್ಕೆ ಬರಬೇಕೆಂದು ಕಾಂಗ್ರೆಸ್ ಬಯಸುತ್ತದೆ ಎಂದು ಆಕ್ಷೇಪಿಸಿದರು. ದುರ್ಬಲರು, ಮಹಿಳೆಯರು, ಒಬಿಸಿಗಳ ವಿರುದ್ಧ ಇರುವಂಥ ಕಾಂಗ್ರೆಸ್ ಪಕ್ಷವನ್ನು ಕಸದ ಬುಟ್ಟಿಗೆ ಹಾಕಬೇಕು. ಅಲ್ಲಿನವರೆಗೆ ಅಭಿಯಾನ ಮುಂದುವರೆಯಲಿದೆ ಎಂದು ತಿಳಿಸಿದರು.ರಾಜ್ಯದ 33 ಜಿಲ್ಲೆಗಳಲ್ಲಿ ಪಾದಯಾತ್ರೆ, ಹಾಗೂ ಜನಾಕ್ರೋಶ ಸಭೆ ನಡೆದಿದ್ದು, 127 ಮಂಡಲಗಳಲ್ಲಿ ಉಗ್ರ ಪ್ರತಿಭಟನೆ ನಡೆದಿದೆ. ಪಿಎಂ ಮೋದಿ ಅವರು ಮಹಿಳೆಯರನ್ನು 'ರಾಷ್ಟ್ರ ನಿರ್ಮಾಪಕರು' ಎಂದು ನೋಡಿದರೆ, ವಿರೋಧ ಪಕ್ಷಗಳು ಅವರನ್ನು ಕೇವಲ 'ಮತದಾರರು' ಎಂದು ಗುರುತಿಸುತ್ತವೆ. ಯಾರು ಮಹಿಳೆಯರ ಪರವಾಗಿದ್ದಾರೆ ಮತ್ತು ಯಾರು ಮಹಿಳೆಯರ ಹಕ್ಕನ್ನು ಕಸಿದುಕೊಳ್ಳುತ್ತಿದ್ದಾರೆ ಎಂಬುದು ಇಂದು ಸ್ಪಷ್ಟವಾಗಿದೆ.



ಕಾರ್ಯಕರ್ತರ ಹೃದಯದಲ್ಲಿ ಶಾಶ್ವತವಾಗಿ ಉಳಿದ

# ಜಗದೀಶ್ ಹಿರೇಮನಿ




**ಬಸವರಾಜ ಹೂಗಾರ**

ನಿಕಟಪೂರ್ವ ಜಿಲ್ಲಾ ಅಧ್ಯಕ್ಷರು,
ಬಿಜೆಪಿ ಯುವ ಮೋರ್ಚಾ,
ವಿಜಯಪುರ ಜಿಲ್ಲೆ


**ಕೆ**ಲವು ವ್ಯಕ್ತಿಗಳು ಬದುಕಿರುವ ತನಕ ಮಾತ್ರವಲ್ಲ, ಅಗಲಿದರೂ ಸಾವಿರಾರು ಹೃದಯಗಳ ಉಸಿರಾಗಿದ್ದಾರೆ. ಅವರ ಅಗಲಿಕೆ ಕುಟುಂಬದ ಹಾಗೂ ಕಾರ್ಯಕರ್ತರ ಬದುಕಿನಲ್ಲಿ ಎಂದಿಗೂ ತುಂಬಲಾರದ ಖಾಲಿತನವನ್ನು ಸೃಷ್ಟಿಸುತ್ತದೆ. ಅಂತಹ ಅಪರೂಪದ ವ್ಯಕ್ತಿತ್ವ ಜಗದೀಶ್ ಹಿರೇಮನಿ. ಅವರು ಕೇವಲ ಒಬ್ಬ ನಾಯಕನಲ್ಲ ಅನೇಕ ಯುವಕರಿಗೆ ಪ್ರೇರಣೆ, ಕಾರ್ಯಕರ್ತರಿಗೆ ಆತ್ಮೀಯತೆ, ರಾಷ್ಟ್ರೀಯ ಚಿಂತನೆಗೆ ಜೀವ ತುಂಬಿದ ವ್ಯಕ್ತಿತ್ವ.

ಬಾಗಲಕೋಟೆ ಜಿಲ್ಲೆಯ ಕಡುಬಡವ ಕುಟುಂಬದಲ್ಲಿ ಜನಿಸಿದ ಜಗದೀಶ್ ಹಿರೇಮನಿ ತಮ್ಮ ಬಾಲ್ಯವನ್ನು ಬಸವನ ಬಾಗೇವಾಡಿ ಕ್ಷೇತ್ರದ ಚೀರಲ್ಲದಿನ್ನಿ ಗ್ರಾಮದಲ್ಲಿ ಕಳೆದರು. ಬಾಲ್ಯದಿಂದಲೇ ಸರಳತೆ, ಕಷ್ಟಸಹಿಷ್ಣುತೆ ಮತ್ತು ದೇಶಭಕ್ತಿಯ ಗುಣಗಳನ್ನು ಮೈಗೂಡಿಸಿಕೊಂಡ ಅವರು, ಮುಂದೆ ಇಡೀ ಬದುಕನ್ನೇ ರಾಷ್ಟ್ರಸೇವೆಗೆ ಸಮರ್ಪಿಸಿದರು. 1985ರಲ್ಲಿ ರಾಷ್ಟ್ರೀಯ ಸ್ವಯಂಸೇವಕ ಸಂಘದ ಸಂಪರ್ಕಕ್ಕೆ ಬಂದ ಅವರು, 1988ರಲ್ಲಿ ಅಖಿಲ ಭಾರತೀಯ ವಿದ್ಯಾರ್ಥಿ ಪರಿಷತ್‌ನ ಪೂರ್ಣಾವಧಿ ಕಾರ್ಯಕರ್ತರಾಗಿ ಸಾರ್ವಜನಿಕ ಬದುಕಿಗೆ ಕಾಲಿಟ್ಟರು. ಬೆಂಗಳೂರು, ಹುಬ್ಬಳ್ಳಿ ಸೇರಿದಂತೆ ಹಲವು ಭಾಗಗಳಲ್ಲಿ ವಿದ್ಯಾರ್ಥಿ ಪರಿಷತ್ ಕಾರ್ಯಕರ್ತರಾಗಿ ಕೆಲಸ ಮಾಡಿದ ಅವರು, ನಂತರ ವಿದ್ಯಾರ್ಥಿ ಪರಿಷತ್ತಿಗಾಗಿ ರಾಜ್ಯದ ಮೂಲೆ ಮೂಲೆಯಲ್ಲಿ ವಿವಿಧ ಸ್ಥಳದ ಜವಾಬ್ದಾರಿ ಹೊತ್ತು ಕಾರ್ಯನಿರ್ವಹಿಸಿದರು. ಎಬಿವಿಪಿ ವಿವಿಧ ಸ್ಥಳದ ಜವಾಬ್ದಾರಿ ಹೊತ್ತು ರಾಜ್ಯದ ಮೂಲೆಮೂಲೆಗಳಲ್ಲಿ ಸಾವಿರಾರು ಯುವಕರಲ್ಲಿ ರಾಷ್ಟ್ರಭಕ್ತಿಯ ಜ್ಯೋತಿ ಬೆಳಗಿಸಿದರು. ಕಾರ್ಯಕರ್ತರನ್ನು ಕಟ್ಟುವ ಕಲೆ ಅವರಿಗೆ ದೇವರ ವರವಾಗಿತ್ತು.

2004ರಲ್ಲಿ ಬಿಜೆಪಿಯ ಪೂರ್ಣಾವಧಿ ಕಾರ್ಯಕರ್ತರಾಗಿ ಸೇವೆ ಆರಂಭಿಸಿದ ಜಗದೀಶ್, ನಂತರದಲ್ಲಿ ಎಸ್‌ಸಿ ಎಸ್‌ಟಿ ಮೋರ್ಚಾ ಯುವ ಮೋರ್ಚಾ, ಪ್ರಶಿಕ್ಷಣ ವರ್ಗ ಸ್ಲಂ ಮೋರ್ಚಾ ಅಲ್ಪಸಂಖ್ಯಾತ ಮೋರ್ಚಾ ಉಸ್ತುವಾರಿ ನೋಡಿಕೊಂಡು ಹೀಗೆ ರಾಜ್ಯದ ಬಹುತೇಕ ಬಿಜೆಪಿಯ ದೊಡ್ಡ ಜವಾಬ್ದಾರಿಗಳನ್ನು ನಿಭಾಯಿಸಿ ಸೈ ಎನಿಸಿಕೊಂಡು, 2016 ರಿಂದ ಬಿಜೆಪಿ ರಾಜ್ಯ ಕಾರ್ಯದರ್ಶಿಯಾಗಿ ಎರಡು ಬಾರಿ ರಾಜ್ಯ ಬಿಜೆಪಿ ಕಾರ್ಯದರ್ಶಿಯಾಗಿ ನೇಮಕರಾಗಿ ಪಕ್ಷವನ್ನು ಅತ್ಯಂತ ಗಟ್ಟಿಯಾಗಿಸಿದ ನಾಯಕ. ಆದರೆ ಜಗದೀಶ್ ಹಿರೇಮನಿಯವರ ನಿಜವಾದ ಪರಿಚಯ ಹುದ್ದೆಗಳಲ್ಲಿ ಇರಲಿಲ್ಲ; ಅದು ಕಾರ್ಯಕರ್ತರ ಮೇಲಿನ ಅವರ ಪ್ರೀತಿಯಲ್ಲಿ ಇತ್ತು. ರಾಜ್ಯದ ದೊಡ್ಡ ನಾಯಕರೊಂದಿಗೆ ಆತ್ಮೀಯ ಸಂಬಂಧ ಹೊಂದಿದ್ದರೂ, ಸಾಮಾನ್ಯ ಕಾರ್ಯಕರ್ತರ ಮನೆಯಲ್ಲಿ ಊಟ ವಾಸ್ತವ್ಯ ಮಾಡುವಷ್ಟು ಆತ್ಮೀಯ ಸಂಬಂಧವನ್ನು ಕಾರ್ಯಕರ್ತರೊಂದಿಗೆ ಹೊಂದಿದ್ದರು. ಕಾರ್ಯಕರ್ತನಿಗೆ ನೋವಾದರೆ ಅವರ ಕಣ್ಣಲ್ಲೂ ನೀರು ಬರುತ್ತಿತ್ತು. ರಾತ್ರಿ ಎರಡು ಗಂಟೆಗೆ ಪಕ್ಷದ ಕೆಲಸಕ್ಕಾಗಿ ಕರೆ ಬಂದರೂ ಕೂಡ ಬರುತ್ತೇನೆಂದು ತಕ್ಷಣ ಹೊರಡುವ ಅಪರೂಪದ ಕಾರ್ಯಕರ್ತ ಅವರು. ವಿಜಯ ಪತಾಕೆ ಹಾರಿಸುವವರೆಗೂ ವಿಶ್ರಾಂತಿ ಪಡೆಯದ ಹೋರಾಟಗಾರ. ಅವರ ಕುಟುಂಬವೇ ರಾಷ್ಟ್ರೀಯ ಚಿಂತನೆಗೆ ಸಮರ್ಪಿತವಾಗಿತ್ತು. ಪತ್ನಿ ಅರ್ಪಣಾ ಜಗದೀಶ್ ಹಿರೇಮನಿ ಅವರೂ ಎಬಿವಿಪಿಯ ಪೂರ್ಣಾವಧಿ ಕಾರ್ಯಕರ್ತೆಯಾಗಿದ್ದು, ಮಗಳು ತನಿಷ್ಕಾ ಕೂಡ ಸಂಘಟನೆಯಲ್ಲಿ ಸಕ್ರಿಯವಾಗಿರುವುದು ಈ ಕುಟುಂಬದ ದೇಶಭಕ್ತಿಯ ಪ್ರತೀಕವಾಗಿದೆ.

ಕೇಂದ್ರ ಸಫಾಯಿ ಕರ್ಮಚಾರಿ ಆಯೋಗದ ಸದಸ್ಯರಾಗಿದ್ದ ಸಂದರ್ಭದಲ್ಲಿ, ಪೌರಕಾರ್ಮಿಕರು, ಸ್ವಚ್ಛತಾ ಸಿಬ್ಬಂದಿ ಹಾಗೂ ವಿವಿಧ ಇಲಾಖೆಗಳ ಕಾರ್ಮಿಕ ಬಂಧುಗಳಿಗೆ ಸರ್ಕಾರದ ಸೌಲಭ್ಯಗಳ ಬಗ್ಗೆ ಜಾಗೃತಿ ಮೂಡಿಸಲು ರಾಜ್ಯದ ಮೂಲೆಮೂಲೆಗೂ ಸಂಚರಿಸಿದರು. ಹೋರಾಟದ ಮೂಲಕಗುತ್ತಿಗೆ ಆಧಾರದ ಕಾರ್ಮಿಕರಿಗೆ ಕೆಲಸ ಖಾಯಂ ಗೊಳಿಸಿದರು. ಕೊನೆಯವರೆಗೂ ಅವರು ಹೋರಾಟವನ್ನೇ ಬದುಕಾಗಿಸಿಕೊಂಡಿದ್ದರು. ಈ ಹಿಂದೆ ಬೆಂಗಳೂರಿನ ಫ್ರೀಡಂ ಪಾರ್ಕ್‌ನಲ್ಲಿ ರಾಜ್ಯ ಸರ್ಕಾರದ ವಿರುದ್ಧ ನಡೆದ ಪ್ರತಿಭಟನೆಯಲ್ಲಿ ಭಾಗವಹಿಸಿದ್ದ ವೇಳೆ, ಪೊಲೀಸರು ತಳ್ಳಿದ ಬ್ಯಾರಿಕೇಡ್ ಅವರ ಎದೆ ಭಾಗಕ್ಕೆ ಬಲವಾಗಿ ಬಡಿದು ಒಳಗಡೆ ಗಂಭೀರ ಗಾಯವಾಗಿ, ಶ್ವಾಸಕೋಶಕ್ಕೂ ತೊಂದರೆ ಉಂಟಾಗಿತ್ತು. ಆದರೆ ತಮ್ಮ ನೋವನ್ನು ಮರೆತು ಮತ್ತೆ ಪಕ್ಷದ ಕೆಲಸಕ್ಕೆ ತೊಡಗಿಕೊಂಡರು. ರಾಜ್ಯದ ಮೂಲೆಮೂಲೆಗಳಲ್ಲಿ ಸಭೆ, ಪ್ರವಾಸ, ಹೋರಾಟ, ಸಂಘಟನಾ ಚಟುವಟಿಕೆಗಳಲ್ಲಿ ನಿರಂತರವಾಗಿ ಭಾಗವಹಿಸುತ್ತಲೇ ಇದ್ದರು. ಕಳೆದ ಕೆಲವು ತಿಂಗಳುಗಳಿಂದ ಉಸಿರಾಟದ ತೊಂದರೆ ಹೆಚ್ಚಾಗಿದ್ದರೂ, ಕಾರ್ಯಕರ್ತರ ಕೆಲಸವೇ ಮೊದಲು ಎಂದು ವಿಶ್ರಾಂತಿ ತೆಗೆದುಕೊಳ್ಳದೆ ದುಡಿದರು.

ಒಂದು ಅರ್ಥದಲ್ಲಿ ನೋಡಿದರೆ, ಜಗದೀಶ್ ಹಿರೇಮನಿ ತಮ್ಮ ಬದುಕನ್ನಷ್ಟೇ ಅಲ್ಲ, ತಮ್ಮ ದೇಹವನ್ನೂ ಪಕ್ಷ ಮತ್ತು ರಾಷ್ಟ್ರ ಚಿಂತನೆಗಾಗಿ ಸಮರ್ಪಿಸಿದ್ದರು. ಹೋರಾಟದಲ್ಲಿ ತಿಂದ ಪೆಟ್ಟನ್ನೇ ಹೊತ್ತುಕೊಂಡು ಕೊನೆಯ ಉಸಿರಿನವರೆಗೂ ರಾಷ್ಟ್ರಭಕ್ತಿಯ ದಾರಿಯಲ್ಲಿ ನಡೆದ ಅಪರೂಪದ ತ್ಯಾಗಮೂರ್ತಿ ಅವರು. ಇಂದು ಜಗದೀಶ್ ಹಿರೇಮನಿ ದೇಹತಃ ನಮ್ಮೊಂದಿಗಿಲ್ಲ. ಆದರೆ ಕರ್ನಾಟಕದ ಪ್ರತಿಯೊಂದು ಮಂಡಲದಲ್ಲೂ, ಪ್ರತಿಯೊಂದು ಕಾರ್ಯಕರ್ತನ ಮನಸ್ಸಲ್ಲೂ, ರಾಷ್ಟ್ರಭಕ್ತಿಯ ಪ್ರತಿಯೊಂದು ಘೋಷಣೆಯಲ್ಲೂ ಅವರು ಜೀವಂತವಾಗಿದ್ದಾರೆ. ಕಾರ್ಯಕರ್ತರ ಕಣ್ಣೀರಿನಲ್ಲಿ, ಯುವಕರ ಪ್ರೇರಣೆಯಲ್ಲಿ, ಸಂಘಟನೆಯ ಹೆಜ್ಜೆ ಗುರುತುಗಳಲ್ಲಿ ಜಗದೀಶ್ ಹಿರೇಮನಿ ಸದಾಕಾಲ ಅಜರಾಮರ.

37 ಹಿರಿಯ ಕಾರ್ಯಕರ್ತರ **ಪರಿಚಯಮಾಲೆ**





# ಜೈಲಿನಲ್ಲಿ ಕೈದಿಗಳಿಂದಲೇ ಮಾರಕ ದಾಳಿಗೀಡಾದವರು 'ಡಿ.ಎಂ. ರಂಗನಾಥ'



**ದು.ಗು. ಲಕ್ಷ್ಮಣ**
ಹಿರಿಯ ಪತ್ರಕರ್ತರು

ಅದು ತುರ್ತು ಪರಿಸ್ಥಿತಿ ವಿರುದ್ಧದ ಸತ್ಯಾಗ್ರಹ ಹೋರಾಟದ ಸಂದರ್ಭ. 1975ರ ನವೆಂಬರ್ 14ರಂದು ಎಲ್ಲೆಡೆ ಸತ್ಯಾಗ್ರಹ ಆರಂಭ. ಶಿವಮೊಗ್ಗ ಜಿಲ್ಲೆ ಹೋರಾಟದ ಹೂಂಕಾರ ಗೈಯಲು ಸಕಲ ಸಿದ್ಧತೆಗಳನ್ನು ನಡೆಸಿತ್ತು. ನವೆಂಬರ್ 14ರ ಹೋರಾಟಕ್ಕೆ ಮುಖಂಡತ್ವ ವಹಿಸಿದವರು ಶಿವಮೊಗ್ಗದ ಪ್ರಮುಖ ವ್ಯಾಪಾರಿ ಹಾಗೂ ಜನಸಂಘದ ಜಿಲ್ಲಾ ಕಾರ್ಯದರ್ಶಿಯಾಗಿದ್ದ ಡಿ.ಎಂ. ರಂಗನಾಥ ಅವರು ಸತ್ಯಾಗ್ರಹಕ್ಕೆ ಮುನ್ನವೇ ಅವರನ್ನು ಬಂಧಿಸಲು ಪೊಲೀಸರು ಇನ್ನಿಲ್ಲದ ಸಾಹಸ ಮಾಡಿದರು. ಆದರೆ ಅವರ ಹಂಜಿಕೆ ಕೈಗೂಡಲಿಲ್ಲ.

ಪೂರ್ವ ಯೋಜನೆಯಂತೆ ರಂತನಾಥ್ ತಮ್ಮ 25 ಜನರ ತಂಡದೊಂದಿಗೆ ಎಲ್ಲರೆದುರಿಗೆ ಪ್ರತ್ಯಕ್ಷರಾದರು. ಒಂದು ಫರ್ಲಾಂಗ್ ದೂರ ಮೆರವಣಿಗೆ, ಘೋಷಣೆ, ನೂರಾರು ಕರಪತ್ರಗಳ ವಿತರಣೆ, ಕೊನೆಯಲ್ಲಿ ಐದು ನಿಮಿಷಗಳ ಭಾಷಣ. ಪೊಲೀಸರು ಎಲ್ಲರನ್ನೂ ಬಂಧಿಸಿದರು, ನ್ಯಾಯಾಲಯಕ್ಕೆ ಒಯ್ದರು.

ಆದರೆ ರಂಗನಾಥ್ ಅಲ್ಲೂ ಸುಮ್ಮನಿರಲಿಲ್ಲ. 'ನಾವು ಮಾಡಿದ್ದು ಅಪರಾಧವಾಗುವುದಾದರೂ ಹೇಗೆ? ಭಾರತ್ ಮಾತಾ ಕೀ ಜೈ ಹೇಳುವುದು ಅಪರಾಧವೇ?' - ನ್ಯಾಯಾಧೀಶರಿಗೆ ರಂಗನಾಥ್ ಸವಾಲು - ಅಲ್ಲಿದ್ದ ಎಲ್ಲ ನ್ಯಾಯವಾದಿಗಳಿಗೂ ಕರಪತ್ರ ಹಂಚಿ, ದೇಶಕ್ಕೆ ಕವಿದಿರುವ ಭೀಕರ ಗಂಡಾಂತರವನ್ನು ದೂರಗೊಳಿಸಲು ನ್ಯಾಯವಾದಿಗಳೂ ಉಜ್ವಲ ಪಾತ್ರ ವಹಿಸಬೇಕಾಗಿದೆ ಎಂದು ರಂಗನಾಥ್ ಕರೆ ನೀಡಿದರು. ರಂಗನಾಥ್ ಒಂದು ತಿಂಗಳು ಡಿಐಆರ್ ಅನ್ವಯ ಸೆರೆವಾಸಕ್ಕೀಡಾದರು. ಈ ಸೆರೆವಾಸ ಮುಗಿಯುತ್ತಿದ್ದಂತೆ ಮತ್ತೆ 'ಮೀಸಾ' ಬಂಧನಕ್ಕೊಳಗಾಗಿ ಬಳ್ಳಾರಿ ಸೆರೆಮನೆ ಸೇರಿದರು.

ಬಳ್ಳಾರಿ ಸೆರೆಮನೆಯಲ್ಲಿ 1976ರ ಜನವರಿ 27ರಂದು ನಡೆದ ಭೀಕರ ಹಿಂಸಾಕಾಂಡದಲ್ಲಿ ರಂತನಾಥ್ ಬದುಕಿದ್ದೇ ಪವಾಡ. 'ಆ ಸ್ವತಂತ್ರ ಸ್ವರ್ಗವೇ ನಮ್ಮ ನಾಡು ಏಳಲೇಳಲೇಳಲಿ' ಎಂಬ ಜಯಘೋಷ ಮೊಳಗಿಸಿದ್ದರು. ಅದರ ಮರುದಿನ ರಾಜಕೀಯ ಬಂದಿಗಳ ಮೇಲೆ ಅಲ್ಲಿದ್ದ ಹಳೆಯ ಕೈದಿಗಳಿಂದ ಅನಿರೀಕ್ಷಿತವಾಗಿ ತೀವ್ರ ಹಲ್ಲೆ. ಯಾರು, ಏನು, ಯಾಕೆ ಎಂದು ಕೇಳುವಷ್ಟರಲ್ಲೇ ಕೈದಿಗಳು ಕೈಯಲ್ಲಿ ಲಾಠಿ ಹಿಡಿದು ಬಂದಿಗಳ ಮೇಲೆರಗಿದ್ದರು. ಬಂದಿಗಳಾಗಿದ್ದ ಶೃಂಗೇರಿಯ ಟಿ.ಎನ್. ಕೃಷ್ಣಭಟ್, ಸಕಲೇಶಪುರದ ಡಾ. ವಿ.ಎಸ್. ಭಟ್, ಶಿವಮೊಗ್ಗದ ಡಿ.ಎಂ. ರಂಗನಾಥ್ ಮೊದಲಾದವರು ಗಲಭೆಯ ಸ್ಥಳಕ್ಕೆ ಧಾವಿಸಿದರು.

ಆ ಹೊತ್ತಿಗೆ ಕ್ಯಾಂಟೀನ್ ಬಳಿ ಹೊಡೆತ ತಿಂದು ತಲೆಯಿಂದ ರಕ್ತ ಸೋರುತ್ತಿದ್ದ ಮಂಗಳೂರಿನ ಮೀಸಾ ಬಂಧಿ ಮೋಹನ ಶೆಣೈ ಅಧಿಕಾರಿಗಳಿಗೆ ಕೈ ಮುಗಿದು ಹೊಡೆಯುವುದನ್ನು ನಿಲ್ಲಿಸುವಂತೆ ಕೋರಿದರು. ಆದರೂ ಪೆಟ್ಟು ಬೀಳುತ್ತಲೇ ಹೋಯಿತು. ಕೈಗೆ ಸಿಕ್ಕಿದ ಮರದ ರೀಪರ್, ಮರದ ರೆಂಟೆಗಳೇ ಕೈದಿಗಳಿಗೆ ಆಯುಧವಾಯಿತು.

ಮೀಸಾ ಸೆಲ್‌ನ ಬಾಗಿಲ ಬಳಿಯಿದ್ದ ಡಾ. ವಿ.ಎಸ್. ಭಟ್ ಈ 'ರಾಕ್ಷಸರ' ಕೈಗೆ ಸಿಕ್ಕಿದರು. ಅವರ ಕೈಕಾಲುಗಳ ಮೂಳೆ ಮುರಿಯಿತು. ತಲೆಯೊಡೆಯಿತು. ಅಲ್ಲೇ ಕುಸಿದು ಬಿದ್ದ ಅವರನ್ನು ಎತ್ತುವವರೂ ಇರಲಿಲ್ಲ. ಮೀಸಾ ಸೆಲ್‌ನೊಳಗೆ ಅಷ್ಟರೊಳಗೇ ಪೆಟ್ಟು ತಿಂದು ಕೈ ಮುರಿದು ಹೋಗಿದ್ದ ಡಿ.ಎಂ. ರಂಗನಾಥ್ ಕೆಳಗೆ ಬಿದ್ದು ಏಳಲಾರದೆ ನರಳುತ್ತಿದ್ದರು. ಜೈಲಿನೊಳಗೆ ಕೈದಿಗಳ ಮೂಲಕ ಜೈಲು ಪೋಲೀಸಧಿಕಾರಿಗಳು ಮೀಸಾ ಬಂದಿಗಳ ಮೇಲೆ ನಡೆಸಿದ ಹಲ್ಲೆ ಇದಾಗಿತ್ತು. ಐಜಿಪಿಯ ಆಗಮನವಾಗಿ ಆಮೂಲಾಗ್ರ ವಿಚಾರಣೆ ನಡೆಯಿತು. ಜೈಲಿನ ಮುಖ್ಯಾಧಿಕಾರಿ, ಉಪಮುಖ್ಯಾಧಿಕಾರಿ ಹಾಗೂ ಒಬಬ ವಾರ್ಡರ್‌ನನ್ನು ಅಮಾನತುಗೊಳಿಸಲಾಯಿತು. ರಂನಾಥ್ ಹಲವು ದಿನಗಳ ಬಳಿಕ ಚೇತರಿಸಿಕೊಂಡಿದ್ದರು.

ಡಿ.ಎಂ. ರಂಗನಾಥ್ ಅವರದ್ದು ಸಂಘದ ಮನೆಯಾಗಿತ್ತು. ಅವರ ಸೋದರರೆಲ್ಲ ಸಂಘದ ಸ್ವಯಂಸೇವಕರಾಗಿದ್ದರು. ಅವರ ಒಬ್ಬ ತಮ್ಮ ದಾ.ಮ. ರವೀಂದ್ರ 1974ರಲ್ಲಿ ಪ್ರಚಾರಕರಾಗಿ ಹೊರಟು, ಪುತ್ತೂರು, ಮಂಗಳೂರು, ಅನಂತರ ಬೆಂಗಳೂರಿನಲ್ಲಿ ಕಾರ್ಯನಿರ್ವಹಿಸಿದರು. ಕರ್ನಾಟಕ ದಕ್ಷಿಣ ಪ್ರಾಂತದ ಪ್ರಚಾರಕರಾಗಿಯೂ ಇದ್ದರು. ಈಗಲೂ ಹಿರಿಯ ಪ್ರಚಾರಕರಾಗಿ ಸೇವೆ ಸಲ್ಲಿಸುತ್ತಿದ್ದಾರೆ.

ರಂಗನಾಥ್ ಜನಸಂಘದ ಜಿಲ್ಲಾ ಕಾರ್ಯದರ್ಶಿಯಾಗಿದ್ದರು. ಬಿಜೆಪಿಯ ಶಿವಮೊಗ್ಗ ಜಿಲ್ಲಾ ಉಪಾಧ್ಯಕ್ಷರಾಗಿಯೂ ಕಾರ್ಯ ನಿರ್ವಹಿಸಿದರು. ಶಿವಮೊಗ್ಗ ನರೇಂದ್ರ ಪ್ರಭಾತ್ ಶಾಖೆಯ ಕಾರ್ಯವಾಹಕರಾಗಿಯೂ ಸಂಘಕಾರ್ಯದಲ್ಲಿ ಕೈ ಜೋಡಿಸಿದ್ದರು. ವಿಧವೆ ಅಥವಾ ವಿಕಲಾಂಗ ಯುವತಿಯನ್ನು ಮದುವೆಯಾಗಬೇಕೆಂಬ ಆದರ್ಶದ ಕನಸನ್ನೂ ಕಟ್ಟಿಕೊಂಡಿದ್ದರು. ಆದರೆ ಅದು ನೆರವೇರಲಿಲ್ಲ.

ರಂಗನಾಥರು ಬೆಂಗಳೂರಿನ ಗೀತಾರನ್ನು ಮದುವೆಯಾದರು. ವ್ಯಾಪಾರದಲ್ಲಿ ನಷ್ಟ ಅನುಭವಿಸಿ, ಆರೋಗ್ಯವೂ ಕೈಕೊಟ್ಟು ಎರಡು ಬಾರಿ ಪಾರ್ಶ್ವಘಾತದಿಂದ ನರಳಬೇಕಾಯಿತು. ಈಗ ಅವರು ಮನೆಯಲ್ಲೇ ಇದ್ದು ವಿಶ್ರಾಂತಿ ಜೀವನವನ್ನು ಸಾಗಿಸುತ್ತಿದ್ದಾರೆ. ಅವರು ನಿರ್ಭೀಕತೆ, ವೈಚಾರಿಕ ಚರ್ಚೆಯಲ್ಲಿ ಆಸಕ್ತರಾಗಿದ್ದರು.

ಚರ್ಚೆಗೊಂದು ಸಾಲು...

# ಪ್ರತೀ ಚುನಾವಣೆಗಳೂ ಹೊಸ ಕಾರ್ಯಕರ್ತನ ಅನ್ವೇಷಣೆಗೆ ಸಿಗುವ ಒಂದು ಅವಕಾಶ

ಪ್ರಜಾಪ್ರಭುತ್ವದ ಹಬ್ಬವಾದ ಚುನಾವಣೆಗಳು ಕೇವಲ ಅಧಿಕಾರ ಹಿಡಿಯುವ ಪ್ರಕ್ರಿಯೆಯಲ್ಲ. ರಾಜಕೀಯ ಸಂಘಟನೆಯನ್ನು ಮತ್ತಷ್ಟು ಸಶಕ್ತಗೊಳಿಸಲು ಸಿಗುವ ಅವಕಾಶ. ಪ್ರತಿ ಚುನಾವಣೆಯೂ ಪಕ್ಷಕ್ಕೆ ಹೊಸ ಹೊಸ ಸಾಮರ್ಥ್ಯವುಳ್ಳ ಮತ್ತು ಹೊಸ ವ್ಯಕ್ತಿಗಳನ್ನು ಸಂಘಟನೆಯ ತೆಕ್ಕೆಗೆ ತರುವ ಅವರನ್ನು ಕಾರ್ಯಕರ್ತರನ್ನಾಗಿಸುವ ವೇದಿಕೆಯಾಗಿರುತ್ತದೆ. ಅದರಲ್ಲೂ ಸಂಘಟನೆಯೇ ಶಕ್ತಿ, ಆ ಶಕ್ತಿಗೆಕಾರ್ಯಕರ್ತರೇ ಜೀವಾಳ ಎಂಬ ಮಂತ್ರವನ್ನು ಳವಡಿಸಿಕೊಂಡಿರುವ ' ಬಿಜೆಪಿಗೆ ಚುನಾವಣೆಗಳು ಹೊಸ ಕಾರ್ಯಕರ್ತರನ್ನು ಅನ್ವೇಷಿಸಲು ಮತ್ತು ಅವರನ್ನು ಪಕ್ಷದ ಸಿದ್ಧಾಂತದ ಒಳಗೆ ತರಲು ಸಿಗುವ ಅತ್ಯುತ್ತಮ ಅವಕಾಶವಾಗಿದೆ.

ಬಿಜೆಪಿ ಎಂಬ ಬೃಹತ್ ವೃಕ್ಷಕ್ಕೆ ಕಾರ್ಯಕರ್ತರೇ ಬೇರುಗಳು. ಕಾರ್ಯಕರ್ತ ಪಕ್ಷದೊಂದಿಗೆ ಇರುವವರೆಗೆ ಪಕ್ಷಕ್ಕೆ ಯಾವುದೇ ಸಂಕಟ ಬರುವುದಿಲ್ಲ. ಅಧಿಕಾರ ಇರಲಿ, ಬಿಡಲಿ ಆದರೆ ಕಾರ್ಯಕರ್ತ ಸಿದ್ಧಾಂತಕ್ಕೆ ಬದ್ಧನಾಗಿ ಪಕ್ಷದೊಂದಿಗೆ ನಿಂತರೆ ಮಾತ್ರ ಪಕ್ಷ ಉಳಿಯಲು ಮತ್ತು ಬಲಗೊಳ್ಳಲು ಸಾಧ್ಯ. ಆದರೆ ಕಾರ್ಯಕರ್ತನನ್ನಾಗಿಸಲು ವ್ಯಕ್ತಿಗಳನ್ನು ಹುಡುಕುವುದಕ್ಕೆ ಚುನಾವಣೆಗಳೂ ವೇದಿಕೆಯಾದರೆ, ನಂತರ ಅವನನ್ನು ಸೂಕ್ತ ಪ್ರಶಿಕ್ಷಣವನ್ನು ನೀಡುವ ಮೂಲಕ ಪಕ್ಷದ ಸಿದ್ಧಾಂತದೊಂದಿಗೆ ಇರಿಸಿಕೊಳ್ಳುವುದು ನಾಯಕತ್ವದ ಜವಾಬ್ದಾರಿ..

ಚುನಾವಣೆಗಳು ಬಂದಾಗ ಅನೇಕ ಕಾರ್ಯಕರ್ತರು ಪಕ್ಷದೊಂದಿಗೆ ಬರುತ್ತಾರೆ. ಸಿದ್ಧಾಂತದ ಮೇಲೆ ನಂಬಿಕೆ ಇಟ್ಟು ಸ್ವಯಂಪ್ರೇರಿತರಾಗಿ ಕೆಲವರು ಬಂದರೆ, ಆಯಾ ಸನ್ನಿವೇಶಕ್ಕನುಗುಣವಾಗಿ ಸೃಷ್ಟಿಯಾಗುವ ಮೋದಿ,ಅಯೋಧ್ಯಾ ಅಲೆಯಲ್ಲಿಯೂ ಕೆಲವರು ಚುನಾವಣೆಯಲ್ಲಿ ಸಕ್ರಿಯರಾಗುತ್ತಾರೆ. ಇನ್ನೂಂದಿಷ್ಟು ಜನ ತಮ್ಮದೊಂದಿಷ್ಟು ಸ್ವಹಿತಾಸಕ್ತಿಯಿಂದಲೂ ಸ.ಂಘಟನೆಯೊಳಗೆ ಬರುತ್ತಾರೆ. ಮತ್ತೊಂದಿಷ್ಟು ಜನ ವೈಯುಕ್ತಿಕ ದ್ವೇಷ, ಬೇರರಾರನ್ನೋ ಸೋಲಿಸಬೇಕೆಂದು ಸಂಘಟನೆಯೊಳಕ್ಕೆ ಬರುತ್ತಾರೆ. ಹೀಗೆ ಹಲವು ಕಾರಣಗಳಿಗಾಗಿ ಪಕ್ಷದೊಂದಿಗೆ ಸೇರುತ್ತಾರೆ. ಇಂತಹ ಸಂದರ್ಭದಲ್ಲಿ ಮಂಡಲ ಮಟ್ಟದ ನಾಯಕರಿಂದ ರಾಷ್ಟ್ರೀಯ ನಾಯಕರುಗಳು ಈ ಹೊಸ ಮುಖಗಳನ್ನು ಗುರುತಿಸಿ, ಅವರ ಸಾಮರ್ಥ್ಯಕ್ಕನುಗುಣವಾಗಿ ಜವಾಬ್ದಾರಿ ನೀಡಬೇಕು. ಸಂಘಟನೆಯೊಂದಿಗೆ ಯಾವ ಸ್ತರದಲ್ಲಿ, ಯಾವ ವಿಭಾಗದಲ್ಲಿ ಆ ವ್ಯಕ್ತಿಯನ್ನು ಜೋಡಿಸಿಕೊಳ್ಳಬಹುದೆಂದು ಯೋಚಿಸಿ, ಯೋಜಿಸಿ ಚುನಾವಣೆ ಮುಗಿದ ನಂತರವೂ ಪಕ್ಷದೊಂದಿಗೆ ಇರುವಂತೆ ನೋಡಿಕೊಳ್ಳಬೇಕು. ಇದರಿಂದ ಪಕ್ಷದ ಕಾರ್ಯಕರ್ತರ ಪಡೆ ಮತ್ತಷ್ಟು ವಿಸ್ತಾರಗೊಳ್ಳುತ್ತದೆ.

## ಚುನಾವಣೆ ಸೋಲು-ಗೆಲುವಿನ ಆಟವಲ್ಲ

**ಚುನಾವಣೆ ಸಮಯದಲ್ಲಿ ಬಂದ ಹೊಸ ಕಾರ್ಯಕರ್ತರನ್ನು ಚುನಾವಣೆ ಮುಗಿದ ನಂತರ ಮರೆಯಬಾರದು. ಅವರನ್ನು ನಿರಂತರವಾಗಿ ಸಂಪರ್ಕದಲ್ಲಿಟ್ಟುಕೊಳ್ಳುವುದು, ಪಕ್ಷದ ಕಾರ್ಯಕ್ರಮಗಳಿಗೆ ಆಹ್ವಾನಿಸುವುದು ಮತ್ತು ಸಿದ್ಧಾಂತದ ತರಬೇತಿ ನೀಡುವ ಮೂಲಕ ಅವರನ್ನು ಕಾಯಂ ಕಾರ್ಯಕರ್ತರನ್ನಾಗಿ ರೂಪಿಸಬೇಕು. ಚುನಾವಣೆ ಎಂಬುದು ಕೇವಲ ಫಲಿತಾಂಶಕ್ಕೆ ಸೀಮಿತವಲ್ಲ. ಗೆಲುವು-ಸೋಲುಗಳಾಚೆಗೆ ಪಕ್ಷಕ್ಕೆ ಎಷ್ಟು ಹೊಸತನ ಮತ್ತು ಹೊಸ ಕಾರ್ಯಕರ್ತರು ಸೇರ್ಪಡೆಯಾದವು ಎಂಬುದು ಮುಖ್ಯ. ಆ ನಿಟ್ಟನಲ್ಲಿ ಚುನಾವಣೆಗಳು ಹೊಸ ಕಾರ್ಯಕರ್ತನ ಅನ್ವೇಷಿಸಿ,ಅವರನ್ನು ವೈಚಾರಿಕ ಚಿಂತನೆಯಲ್ಲಿ ಬಲಗೊಳಿಸಿ ಪಕ್ಷದ ಮೂಲಕ ಸಮಾಜದ ಆಸ್ತಿಯಾಗಿಸುವ ಪ್ರಯತ್ನ ನಿರಂತರವಾಗಿರಲೇ ಬೇಕು.**

ಸಾಮಾಜಿಕ ಜಾಲತಾಣಗಳ ನಿರ್ವಹಣೆ, ಡೇಟಾ ವಿಶ್ಲೇಷಣೆ ಮತ್ತು ತಳಮಟ್ಟದ ತಂತ್ರಜ್ಞಾನ ಬಳಕೆಯಲ್ಲಿ ಇಂದಿನ ಯುವಜನತೆ ನಿಪುಣರು. ಇಂತಹ ಹೊಸ ತಲೆಮಾರಿನ ಕಾರ್ಯಕರ್ತರು ಚುನಾವಣಾ ಸಮಯದಲ್ಲಿ ಪಕ್ಷದ ಪರವಾಗಿ ಕೆಲಸ ಮಾಡಲು ಮುಂದೆ ಬಂದಾಗ, ಅವರಿಗೆ ಸೂಕ್ತ ಮಾರ್ಗದರ್ಶನ ನೀಡಿದರೆ ಅವರು ಪಕ್ಷದ ಖಾಯಂ ಸೈನಿಕರಾಗುತ್ತಾರೆ. ಇದು ಪಕ್ಷಕ್ಕೆ ನವೀನ ಆಲೋಚನೆಗಳನ್ನು ತರುತ್ತದೆ. ಸುಪ್ತ ಪ್ರತಿಭೆಗಳನ್ನು ಗುರುತಿಸಿ, ಅವರಿಗೆ ತರಬೇತಿ ನೀಡಿ ಮುಖ್ಯವಾಹಿನಿಗೆ ತರುವುದು ಚುನಾವಣೆಯ ಪ್ರಮುಖ ಉದ್ದೇಶಗಳಲ್ಲಿ ಒಂದಾಗಬೇಕು.

ಚುನಾವಣೆಗಳು ವಿವಿಧ ಸಮುದಾಯಗಳ, ವಿವಿಧ ವೃತ್ತಿಪರರ ಮತ್ತು ಮಹಿಳೆಯರ ದೊಡ್ಡ ಪಡೆಯನ್ನೇ ಪಕ್ಷದತ್ತ ಸೆಳೆಯುತ್ತವೆ. ಈ ಹೊಸ ಕಾರ್ಯಕರ್ತರು ತರುವ ವೈವಿಧ್ಯತೆ, ಪಕ್ಷದ ಸರ್ವಸ್ಪರ್ಶಿ ಮತ್ತು ಸರ್ವವ್ಯಾಪಿ ಸೂತ್ರಕ್ಕೆ ಪೂರಕವಾಗಿರುತ್ತದೆ. ಇವರು ಪಕ್ಷದ ವಿಚಾರಧಾರೆಗಳನ್ನು ಸಮಾಜದ ಕಟ್ಟಕಡೆಯ ವ್ಯಕ್ತಿಗೂ ಮುಟ್ಟಿಸಲು ಸೇತುವೆಯಾಗಿ ಕೆಲಸ ಮಾಡುತ್ತಾರೆ.

**ಚುನಾವಣೆಯಲ್ಲಿನ ಗೆಲುವು ಜವಾಬ್ದಾರಿ, ಸೋಲು ಸವಾಲು**



## ಮಾಸದ ಮಾಧುರ್ಯ 108ನೇ ಕಾರ್ಯಕ್ರಮದಲ್ಲಿ ಅಭಿನಯ ತರಂಗ ವತಿಯಿಂದ

# ಶಬ್ದಾನುಸಂಧಾನ

ಕನ್ನಡ ಕಾವ್ಯ ಪರಂಪರೆಗೆ ಪಂಪನೇ ಆದಿಕವಿ. ಹಳಗನ್ನಡ, ನಡುಗನ್ನಡ, ಪ್ರಚಲಿತ ಅಥವಾ ಕಾವ್ಯ, ಕನ್ನಡ ಹೀಗೆ ಸಾವಿರಾರು ವರುಷದಿಂದ ಕನ್ನಡ ಬರವಣಿಗೆ ಕಾಲಕ್ಕೆ ತಕ್ಕಂತೆ ಕೆಲವು ಅನಿವಾರ್ಯ ಬದಲಾವಣೆಯನ್ನು ಇನ್ನುಳಿದಂತೆ ಆರ್ಥಿಕ ದೃಷ್ಟಿಯಿಟ್ಟುಕೊಂಡು ಬದಲಾವಣೆ ತಂದದ್ದು, ಕಾವ್ಯ ರೂಪದಲ್ಲಿದ್ದರೆ ಜನಸಾಮಾನ್ಯರಿಗೆ ಅರ್ಥವಾಗುವುದಿಲ್ಲ ಎಂಬ ದೃಷ್ಟಿಯಿಂದ ಹಾಗೂ ನಮ್ಮ ವಿದ್ವಾಂಸರ ಪರಿಚಯ ಸಾರಸ್ವತಲೋಕ್ಕೆ ಆಗುವುದಿಲ್ಲ ಎಂಬ ದೃಷ್ಟಿಯಿಂದ ಕಾವ್ಯರೂಪದಿಂದ ಗದ್ಯರೂಪಕ್ಕೆ ಲಕ್ಷಾಂತರ ಪುಸ್ತಕಗಳನ್ನು ನೂರಾರು ಪಂಡಿತರು, ಪ್ರಾಜ್ಞ ಬರಹಗಾರರು ಪುಸ್ತಕಗಳನ್ನು ಲೋಕಾರ್ಪಣೆ ಮಾಡಿ ಕನ್ನಡದ ಶ್ರೀಮಂತಿಕೆಯನ್ನು ದೇಶ ವಿದೇಶಕ್ಕೆ ಪ್ರಸರಿಸಲು ಕಾರಣಕರ್ತರಾಗಿದ್ದಾರೆ.

ದಿ. 03.05.2026 ರಂದು ಅಭಿನಯ ತರಂಗ ನಾಟಕ ಶಾಲೆಯ ಸಹಯೋಗದಿಂದ ಮಾಸದ ಮಾಧುರ್ಯ 108ನೇ ಕಾರ್ಯಕ್ರಮದಲ್ಲಿ ಶಬ್ದಾನುಸಂದಾನ ಎಂಬ ವಿನೂತನ ಪ್ರಯೋಗವನ್ನು ಜಗನ್ನಾಥ ಭವನದ ಮಂಥನ ಸಭಾಂಗಣದಲ್ಲಿ ಯಶಸ್ವಿಯಾಗಿ ತೋರಿಸಿದರು.

ಹೊಸ ತರುವಾಯದ ಹುಡುಗ-ಹುಡುಗಿಯರೆ ಇದ್ದಂತಹ ಈ ಕಲಾತಂಡ ಕನ್ನಡವನ್ನು ಅದರ ಮೂಲದಿಂದ ವರ್ತಮಾನದವರೆಗೆ ಕನ್ನಡ ಭಾಷೆಯು ಬೆಳೆದುಬಂದ ಮತ್ತು ಪ್ರಾದೇಶಿಕತೆಗನುಸಾರವಾದ ಅಲ್ಲಿ ಪ್ರಚಲಿತದಲ್ಲಿರುವ ಆಡು ಭಾಷೆಯಲ್ಲಿ ಮಾತನಾಡಿ ಪ್ರೇಕ್ಷಕರಿಂದ ಚಪ್ಪಾಳೆ ಗಿಟ್ಟಿಸಿಕೊಂಡರು. ಪಂಪನ ಆದಿಪುರಾಣದಿಂದ ಆಯ್ದ ಭರತ ಬಾಹುಬಲಿ ಯುದ್ಧದ ಪ್ರಸಂಗವನ್ನು ಹಳಗನ್ನಡ ಕಾವ್ಯರೂಪದಲ್ಲಿ ಹಾಗೆಯೇ ಕುವೆಂಪು ವಿರಚಿತ ರಾಮಾಯಣದರ್ಶನಂದ ಅಧ್ಯಾಯ-1 ಹಾಗೂ 5ರ ಸಣ್ಣ ಪ್ರಸಂಗವನ್ನು ಅತ್ಯಂತ ಸಮರ್ಥವಾಗಿ ಕಾವ್ಯರೂಪದಲ್ಲಿ ಪ್ರಸ್ತುತಪಡಿಸಿದ್ದು, ಕನ್ನಡದ ಬೇರು ಎಷ್ಟು ಗಟ್ಟಿಯಾಗಿದೆ ಎನ್ನುವ ಅರಿವನ್ನು ತಾವು ತಿಳಿದು ಈ ಪೀಳಿಗೆಯ ಗೆಳೆಯರಿಗೆ ತಲುಪಿಸುವ ಕೆಲಸ ನಿಜಕ್ಕೂ ಅಭಿನಂದನೀಯ. ಚ.ಹ. ರಘುನಾಥ ಅವರ ಕಥೆ ಸುಯ್ ಟುಪಕ್ ದುಬಾಕು ಶ್ರೀ ಎಸ್. ದಿವಾಕರ್ ಅನುವಾದಿಸಿದ ಸಣ್ಣಕಥೆ ಸಂಬಂಧಗಳು ಶ್ರೀ ಶ್ರೀನಿವಾಸ ವೈದ್ಯರ ಕಥೆ ಭಾಶಿಂಗ ಬಲ ಈ ಐದು ವಿಧದ ಪ್ರಕಾರವನ್ನು ಆಯಾ ಕಾಲಘಟ್ಟದ ಪ್ರಾದೇಶಿಕ ಕಥೆಯ ಸೊಗಡಿನಲ್ಲಿ ರಂಗದ ಮೇಲೆ ಪ್ರಸ್ತುತಪಡಿಸಿದ್ದು ಶ್ಲಾಘನೀಯ. ವರ್ತಮಾನದ ಹೆಸರಾಂತ ನಿರ್ದೇಶಕ ಶ್ರೀ ಮಂಜುನಾಥ ಎಲ್. ಬಡಿಗೇರ್ ಅವರ ನಿರ್ದೇಶನ ಶ್ರೀ ಗೋಪಿನಾಥ ಶ್ರೀಮತಿ ಗೌರಿದತ್ತು ಅವರ ಸಂಯೋಜನೆಯಲ್ಲಿ ಕಾರ್ಯಕ್ರಮ ಕಲಾಭಿಮಾನಿಗಳ ಪ್ರಶಂಸೆಗೆ ಪಾತ್ರವಾಯಿತು.

ಕಲಾವಿದರಾದ ಅಪರ್ಣ, ಅನನ್ಯ, ಕಾವ್ಯ, ಶೋಭಿತ, ಕನಕರತ್ನ, ಹರ್ಷವರ್ಧನ, ಪ್ರಮೋದ್, ಪವನ, ತೇಜಸ್, ಮಿಥುನ್, ಸೌರಭ, ದೀಕ್ಷಿತ್, ಸ್ವದೇಶ, ಶಿವು, ಪ್ರಸನ್ನ, ರಾಮಚಂದ್ರ, ಎಲ್ಲರೂ ತಮಗೆ ಕೊಟ್ಟ ಪಾತ್ರಕ್ಕೆ ಜೀವ ತುಂಬಿದರು. ಕಾರ್ಯಕ್ರಮದ ಕೊನೆಯಲ್ಲಿ ಗೌರಿದತ್ತು ಹಾಗೂ ಗೋಪಿನಾಥ ಅವರನ್ನು ಮಲ್ಲೇಶ್ವರ ಮಂಡಲದ ಮಹಿಳಾ ಮೋರ್ಚಾ ಅಧ್ಯಕ್ಷರಾದ ಶ್ರೀಮತಿ ಕಾವೇರಿ ಕೇದಾರನಾಥ್, ಮಾಸಧ ಮಾಧುರ್ಯ ಸಂಚಾಲಕರಾದ ಶ್ರೀ ದತ್ತಗುರು ಹೆಗಡೆಯವರು ಸನ್ಮಾನಿಸಿದರು. ಎಲ್ಲಾ ಕಲಾವಿದರಿಗೂ ಅಭಿನಂದನಾ ಪತ್ರವನ್ನು ಕೊಟ್ಟು ಶುಭ ಕೋರಲಾಯಿತು. ಶ್ರೀ ದಾಮೋದರ್ ಅವರ ವಂದನಾರ್ಪಣೆಯೊಂದಿಗೆ ಕಾರ್ಯಕ್ರಮ ಸಂಪನ್ನವಾಯಿತು.



# ಜನರ ಸಹಭಾಗಿತ್ವ ದೇಶದ ಅಭಿವೃದ್ಧಿ

**ಏಪ್ರಿಲ್ ತಿಂಗಳ ಮನ್ ಕಿ ಬಾತ್ ಕಾರ್ಯಕ್ರಮದಲ್ಲಿ ಮಾನ್ಯ ಪ್ರಧಾನಮಂತ್ರಿ ಶ್ರೀ ನರೇಂದ್ರ ಮೋದಿ ಜೀ ಅವರು ದೇಶದ ಜನತೆಯೊಂದಿಗೆ ಮತ್ತೊಮ್ಮೆ ಆತ್ಮೀಯ ಸಂವಾದ ನಡೆಸಿದರು. ಸಮಾಜ ಸೇವೆ, ಪರಿಸರ ಸಂರಕ್ಷಣೆ, ಹೊಸ ಆವಿಷ್ಕಾರಗಳು ಹಾಗೂ ಭಾರತದ ಸಮೃದ್ಧ ಸಾಂಸ್ಕೃತಿಕ ಪರಂಪರೆಯ ಬಗ್ಗೆ ಪ್ರೇರಣಾದಾಯಕ ವಿಚಾರಗಳನ್ನು ಹಂಚಿಕೊಂಡ ಅವರು, ಜನಸಾಮಾನ್ಯರ ಭಾಗವಹಿಸುವಿಕೆಯಿಂದ ರಾಷ್ಟ್ರ ನಿರ್ಮಾಣ ಸಾಧ್ಯವೆಂಬ ಸಂದೇಶವನ್ನು ನೀಡಿದರು. ದೇಶದ ಪ್ರಗತಿಗೆ ಪ್ರತಿಯೊಬ್ಬ ನಾಗರಿಕರೂ ತಮ್ಮದೇ ಆದ ಕೊಡುಗೆ ನೀಡಬೇಕು ಎಂಬ ಪ್ರೇರಣೆಯನ್ನು ಈ ಕಾರ್ಯಕ್ರಮ ಮತ್ತೊಮ್ಮೆ ಮೂಡಿಸಿತು.**

**ಪರಿಸರ ಸಂರಕ್ಷಣೆ – ನಮ್ಮ ಹೊಣೆಗಾರಿಕೆ :** ಬೇಸಿಗೆ ಕಾಲದಲ್ಲಿ ನೀರಿನ ಸಂರಕ್ಷಣೆ ಕುರಿತು ಪ್ರಧಾನಿ ಶ್ರೀ ಮೋದಿ ಅವರು ಒತ್ತಿ ಹೇಳಿದರು. ಮಳೆನೀರು ಸಂಗ್ರಹಣೆ, ಕೆರೆ–ಕೊಳಗಳ ಪುನರುಜ್ಜೀವನ, ನದಿಗಳ ಶುದ್ಧೀಕರಣದ ಮಹತ್ವವನ್ನು ಅವರು ವಿವರಿಸಿದರು. ಗ್ರಾಮಗಳಲ್ಲಿ ಜನರು ಈ ಕಾರ್ಯಗಳಲ್ಲಿ ಭಾಗವಹಿಸುತ್ತಿರುವುದನ್ನು ಅವರು ಉಲ್ಲೇಖಿಸಿ ''ಪ್ರತಿ ಹನಿ ನೀರು ಅಮೂಲ್ಯ'' ಎಂಬ ಸಂದೇಶದ ಮೂಲಕ, ಮನೆಯಿಂದಲೇ ನೀರನ್ನು ಉಳಿಸುವ ಅಭ್ಯಾಸವನ್ನು ಬೆಳೆಸಿಕೊಳ್ಳಬೇಕೆಂದು ಕರೆ ನೀಡಿದರು.

**ಜನ ಭಾಗೀದಾರಿ – ಅಭಿವೃದ್ಧಿಯ ನಿಜವಾದ ಶಕ್ತಿ :** ಯುವಕರು ತಮ್ಮ ಗ್ರಾಮಗಳಲ್ಲಿ ಸ್ವಚ್ಛತಾ ಅಭಿಯಾನಗಳನ್ನು ನಡೆಸುತ್ತಿದ್ದಾರೆ, ಶಾಲಾ ಮಕ್ಕಳಿಂದ ಹಿಡಿದು ಹಿರಿಯರವರವರೆಗೆ ಎಲ್ಲರೂ ಪರಿಸರದ ಬಗ್ಗೆ ಜಾಗೃತರಾಗುತ್ತಿದ್ದಾರೆ. ಮಹಿಳಾ ಸ್ವಸಹಾಯ ಗುಂಪುಗಳು ಸಣ್ಣ ಉದ್ಯಮಗಳನ್ನು ಆರಂಭಿಸಿ ಕುಟುಂಬಗಳ ಆರ್ಥಿಕ ಸ್ಥಿತಿಯನ್ನು ಬಲಪಡಿಸುತ್ತಿವೆ. ಇವು ಕೇವಲ ಸಣ್ಣ ಕಾರ್ಯಗಳಂತೆ ಕಾಣಬಹುದಾದರೂ, ಒಟ್ಟಾಗಿ ನೋಡಿದಾಗ ಇವು ದೇಶದ ಅಭಿವೃದ್ಧಿಗೆ ಮಹತ್ವದ ಕೊಡುಗೆ ನೀಡುತ್ತವೆ. ''ಜನ ಭಾಗೀದಾರಿ'' ಎಂಬ ತತ್ವದ ಮೂಲಕ ಪ್ರತಿಯೊಬ್ಬ ನಾಗರಿಕನೂ ರಾಷ್ಟ್ರ ನಿರ್ಮಾಣದ ಭಾಗಿಯಾಗಬೇಕು ಎಂಬ ಸಂದೇಶವನ್ನು ಅವರು ನೀಡಿದರು.

**ಕೃಷಿಯಲ್ಲಿ ಹೊಸ ದಾರಿ – ತಂತ್ರಜ್ಞಾನ ಮತ್ತು ಪ್ರಕೃತಿ ಸ್ನೇಹಿ ವಿಧಾನಗಳು :** ಕೃಷಿ ಕ್ಷೇತ್ರದಲ್ಲಿ ನಡೆಯುತ್ತಿರುವ ಹೊಸ ಪ್ರಯತ್ನಗಳನ್ನು ಪ್ರಧಾನಿ ಅವರು ಪ್ರಶಂಸಿಸಿದರು. ರೈತರು ಈಗ ಡ್ರೋನ್ ತಂತ್ರಜ್ಞಾನವನ್ನು ಬಳಸುತ್ತಿದ್ದಾರೆ. ಸಾವಯವ ಕೃಷಿ, ನೈಸರ್ಗಿಕ ಗೊಬ್ಬರಗಳ ಬಳಕೆ ಮತ್ತು ನೀರು ಉಳಿಸುವ ವಿಧಾನಗಳು ಹೆಚ್ಚು ಜನಪ್ರಿಯವಾಗುತ್ತಿವೆ. ಈ ವಿಧಾನಗಳು ಪರಿಸರ ಸ್ನೇಹಿಯಾಗಿದ್ದು, ಬೆಳೆ ಉತ್ಪಾದಕತೆ ಹಾಗೂ ಆದಾಯವನ್ನು ಹೆಚ್ಚಿಸಲು ಸಹಾಯ ಮಾಡುತ್ತವೆ. ಇವು ಭವಿಷ್ಯದ ಕೃಷಿ ಕ್ಷೇತ್ರದ ಮಹತ್ವದ ಹೆಜ್ಜೆಗಳಾಗಿವೆ ಎಂದು ಹೇಳಿದರು.

**ವೋಕಲ್ ಫಾರ್ ಲೋಕಲ್–ಸ್ಥಳೀಯತೆಗೆ ಬೆಂಬಲ :** ವೋಕಲ್ ಫಾರ್ ಲೋಕಲ್ ಅಭಿಯಾನದ ಮೂಲಕ ದೇಶೀಯ ಉತ್ಪನ್ನಗಳನ್ನು ಖರೀದಿಸಲು ಪ್ರಧಾನಿ ಕರೆ ನೀಡಿದರು. ಕೈಗಾರಿಕಾ ವಸ್ತುಗಳು, ಹಸ್ತಕಲಾ ಉತ್ಪನ್ನಗಳು ಮತ್ತು ಸಣ್ಣ ಉದ್ಯಮಗಳ ವಸ್ತುಗಳನ್ನು ಬೆಂಬಲಿಸುವುದರಿಂದ ಗ್ರಾಮೀಣ ಆರ್ಥಿಕತೆ ಬಲವಾಗುತ್ತದೆ. ಈ ಅಭಿಯಾನವು ಕೇವಲ ಆರ್ಥಿಕ ಪ್ರಯೋಜನವಲ್ಲ, ನಮ್ಮ ಸಂಸ್ಕೃತಿ ಮತ್ತು ಪರಂಪರೆಯನ್ನು ಉಳಿಸುವ ಒಂದು ಮಹತ್ಕಾರ್ಯವಾಗಿದೆ.

**ವಿದ್ಯಾರ್ಥಿಗಳಿಗೆ ಮಾರ್ಗದರ್ಶನ – ಆತ್ಮವಿಶ್ವಾಸವೇ ಕೀಲಿ :** ಪರೀಕ್ಷಾ ಕಾಲದಲ್ಲಿ ವಿದ್ಯಾರ್ಥಿಗಳು ಅನುಭವಿಸುವ ಒತ್ತಡದ ಬಗ್ಗೆ ಪ್ರಧಾನಿರವರು ಮಾತನಾಡಿ ಅಂಕಗಳಿಗಿಂತ ಕಲಿಕೆಯ ಮಹತ್ವವನ್ನು ಒತ್ತಿ ಹೇಳಿದರು. ತಪ್ಪುಗಳಿಂದ ಕಲಿಕೆ ಮತ್ತು ಆತ್ಮವಿಶ್ವಾಸದಿಂದ ಮುಂದುವರಿಯುವುದು ಯಶಸ್ಸಿಗೆ ದಾರಿ ಎಂದು ಅವರು ತಿಳಿಸಿದರು. ಪೋಷಕರು ಮತ್ತು ಶಿಕ್ಷಕರು ವಿದ್ಯಾರ್ಥಿಗಳಿಗೆ ಬೆಂಬಲ ನೀಡಬೇಕು ಮತ್ತು ಒತ್ತಡವನ್ನು ಕಡಿಮೆ ಮಾಡುವ ವಾತಾವರಣವನ್ನು ಸೃಷ್ಟಿಸಬೇಕೆಂಬ ಸಲಹೆ ನೀಡಿದರು.

**ಆರೋಗ್ಯಕರ ಜೀವನಶೈಲಿಯೇ – ಸಣ್ಣ ಅಭ್ಯಾಸ, ಹೆಚ್ಚಿನ ಲಾಭ :** ಆರೋಗ್ಯದ ಬಗ್ಗೆ ಜಾಗೃತಿ ಮೂಡಿಸುವ ಸಲುವಾಗಿ ದಿನನಿತ್ಯದ ಜೀವನದಲ್ಲಿ ಸಣ್ಣ ಬದಲಾವಣೆಗಳನ್ನು ತರಬೇಕು ಎಂದು ಅವರು ಹೇಳಿದರು. ನಿಯಮಿತ ವ್ಯಾಯಾಮ, ಯೋಗ, ಸಮತೋಲನ ಆಹಾರ ಮತ್ತು ಸರಿಯಾದ ನಿದ್ರೆ ಉತ್ತಮ ಆರೋಗ್ಯಕ್ಕೆ ಅಗತ್ಯ. ಇಂತಹ ಸರಳ ಅಭ್ಯಾಸಗಳು ದೀರ್ಘಕಾಲದಲ್ಲಿ ದೊಡ್ಡ ಫಲಿತಾಂಶಗಳನ್ನು ನೀಡುತ್ತವೆ ಎಂಬುದನ್ನು ಅವರು ಸ್ಪಷ್ಟಪಡಿಸಿದರು.

**ಜೈವ ವೈವಿಧ್ಯತೆ – ಪ್ರಕೃತಿಯೊಂದಿಗೆ ಸಹಜ ಜೀವನ :** ಪಕ್ಷಿಗಳು ಮತ್ತು ಪ್ರಾಣಿಗಳನ್ನು ರಕ್ಷಿಸುವುದು ನಮ್ಮ ಜವಾಬ್ದಾರಿ, ವಿಶೇಷವಾಗಿ ಬೇಸಿಗೆಯಲ್ಲಿ ಪಕ್ಷಿಗಳಿಗೆ ನೀರು ಇಡುವಂತಹ ಸಣ್ಣ ಕಾರ್ಯಗಳು ಜೀವಜಾಲದ ಉಳಿವಿಗೆ ಸಹಾಯ ಮಾಡುತ್ತವೆ.ಪ್ರಕೃತಿಯೊಂದಿಗೆ ಸಮತೋಲನ ಸಾಧಿಸುವುದು ನಮ್ಮ ಭವಿಷ್ಯಕ್ಕೆ ಅತ್ಯಂತ ಅಗತ್ಯ ಎಂಬ ಸಂದೇಶವನ್ನು ಪ್ರಧಾನಿ ಶ್ರೀ ಮೋದಿ ಅವರು ನೀಡಿದರು.




ಕರ್ನಾಟಕ ಬಿಜೆಪಿ ನಾಯಕರಿಂದ ಪ್ರಧಾನಿ ಶ್ರೀ ನರೇಂದ್ರ ಮೋದಿ ರವರಿಗೆ ಅಭಿನಂದನಾ ಸನ್ಮಾನ



ಪಶ್ಚಿಮ ಬಂಗಾಳ ಮತ್ತು ಅಸ್ಸಾಂ ರಾಜ್ಯಗಳಲ್ಲಿ ಬಿಜೆಪಿಯ ಭರ್ಜರಿ ವಿಜಯದ ಹಿನ್ನೆಲೆಯಲ್ಲಿ
ರಾಜ್ಯ ಬಿಜೆಪಿ ಕಾರ್ಯಾಲಯ ಜಗನ್ನಾಥ ಭವನದ ಎದುರು ಬಿಜೆಪಿ ನಾಯಕರಿಂದ ಸಂಭ್ರಮಾಚರಣೆ



ಬಿಜೆಪಿ ರಾಜ್ಯ ಕಾರ್ಯಾಲಯ ಜಗನ್ನಾಥ ಭವನದಲ್ಲಿ
ಬಸವ ಜಯಂತಿ ಆಚರಣೆ



ಕಾಲೇ ವರ್ಷತು ಪರ್ಜನ್ಯಃ

# ಸಜ್ಜನರ ಮೌನ, ದುರ್ಜನರ ಕ್ರಿಯಾಶೀಲತೆ

**ಮಾ**ತು ಬೆಳ್ಳಿ, ಮೌನ ಬಂಗಾರ – ಆದರೆ ಎಲ್ಲಿ ಮಾತನಾಡಬೇಕೋ ಅಲ್ಲಿ ಮಾತನಾಡದಿದ್ದರೆ ಮೌನ ಬಂಗಾರವಾಗುವುದಿಲ್ಲ. ಬದಲಾಗಿ ಕಬ್ಬಿಣದಷ್ಟು ಕಠಿಣ ಪರಿಸ್ಥಿತಿ ಎದುರಾಗಬಹುದು, ಮೌನದಿಂದಾಗಿ ಅಧರ್ಮದ ಮೇಲುಗೈಯಾಗಬಹುದು. ಸಜ್ಜನರ ಮೌನ ದುರ್ಜನರ ಸಕ್ರಿಯತೆಗಿಂತ ಅಪಾಯಕಾರಿ. ಕಣ್ಣೆದುರೇ ನಡೆಯುತ್ತಿರುವ ದುಷ್ಕೃತ್ಯಗಳನ್ನು ಖಂಡಿಸದಿರುವ ಮೌನದ ವ್ಯಕ್ತಿ ಎಷ್ಟೇ ಶ್ರೇಷ್ಟನಾದರೂ ಅವನು ಸಮಾಜಕ್ಕೆ ಮಾರಕವೇ.

ಮಹಾಭಾರತದ ಕುರುಕ್ಷೇತ್ರ ಯುದ್ಧಕ್ಕೆ ಕಾರಣವಾಗಿದ್ದು, ಕೇವಲ ಭೂಮಿಯ ಮೇಲಿನ ಆಸೆಯಲ್ಲ. ಅದರ ಮೂಲವಿದ್ದದ್ದು ಅಂದು ಹಸ್ತಿನಾಪುರದ ತುಂಬಿದ ಸಭೆಯಲ್ಲಿ ನಡೆದ ದ್ರೌಪದಿಯ ಮಾನ ಹಾಗೂ ವಸ್ತ್ರಾಪಹರಣದ ಘಟನೆಯಲ್ಲಿ ಜ್ಞಾನಿಗಳು ವಹಿಸಿದ ಮೌನ. ದ್ರೌಪದಿಯ ಅಳಲು ಕೇವಲ ಒಬ್ಬ ಮಹಿಳೆಯ ನೋವಾಗಿರಲಿಲ್ಲ. ಅದು ಇಡೀ ಸಮಾಜದ ನೈತಿಕತೆಯ ಪರೀಕ್ಷೆಯಾಗಿತ್ತು. ಅಂದು ಸಭೆಯಲ್ಲಿದ್ದವರೆಲ್ಲರೂ ಅಸಾಮಾನ್ಯರೇ ಆಗಿದ್ದರು. ಭೀಷ್ಮರಂತಹ ಅಪ್ರತಿಮ ವೀರರಿದ್ದರು, ದ್ರೋಣರಂತಹ ಮಹಾ ಗುರುಗಳಿದ್ದರು, ವಿದುರನಂತಹ ಜ್ಞಾನಿಗಳಿದ್ದರು. ಆದರೆ, ಅನ್ಯಾಯ ನಡೆಯುವಾಗ ಅವರೆಲ್ಲರೂ ತಾಳಿದ ಮೌನ ಮಹಾಭಾರತದ ಯುದ್ಧಕ್ಕೆ ಮುನ್ನುಡಿಯಾಯಿತು.

ದುಶ್ಯಾಸನ ದ್ರೌಪದಿಯ ವಸ್ತ್ರಾಪಹರಣಕ್ಕೆ ಕೈಹಾಕಿದಾಗ, ಆತ ಕೇವಲ ಒಬ್ಬ ಹೆಣ್ಣನ್ನು ಅವಮಾನಿಸಲಿಲ್ಲ. ಸಭೆಯ ಮರ್ಯಾದೆಯನ್ನು, ದೇಶದ ಸಂಸ್ಕೃತಿಯನ್ನು ಮತ್ತು ಮನುಷ್ಯತ್ವವನ್ನೇ ತುಳಿದು ಹಾಕಿದ. ಆದರೆ ಇಲ್ಲಿ ದುಶ್ಯಾಸನನಿಗಿಂತಲೂ ದೊಡ್ಡ ಅಪರಾಧಿಗಳು ಯಾರು ಗೊತ್ತೇ? ಅನ್ಯಾಯವನ್ನು ಕಣ್ಣಾರೆ ಕಂಡು ಮೌನಕ್ಕೆ ಶರಣಾದವರು. ದುಶ್ಯಾಸನನಿಗಿಂತ ಅಧರ್ಮವನ್ನು ನೋಡಿಯೂ ವಿರೋಧಿಸದೆ ಮೌನ ವಹಿಸಿದವರ ಪಾಪ ದೊಡ್ಡದು. ಸತ್ಯ ಮತ್ತು ಧರ್ಮದ ಪರವಾಗಿ ನಿಲ್ಲಬೇಕಾದ ಶಕ್ತಿಶಾಲಿಗಳು ಮೌನಕ್ಕೆ ಶರಣಾದಾಗ, ಅದು ಅಧರ್ಮಕ್ಕೆ ನೀಡಿದ ಬಹಿರಂಗ ಬೆಂಬಲದಂತೆ ಕಂಡಿತು.

ಇವತ್ತಿಗೂ ನಮ್ಮ ಸಮಾಜದಲ್ಲಿ ಈ ಕಥೆ ಜೀವಂತವಾಗಿದೆ. ಸಮಾಜದ ಶಾಂತಿ ಕದಡುವವರು, ಮಹಿಳೆಯರ ಗೌರವಕ್ಕೆ ಧಕ್ಕೆ ತರುವವರು ಮತ್ತು ಭ್ರಷ್ಟಾಚಾರದಲ್ಲಿ ಮುಳುಗಿದವರು ನಮ್ಮೊಂದಿಗಿದ್ದಾರೆ. ಆದರೆ ಇದೆಲ್ಲವನ್ನು ನೋಡಿ, ನಮಗೇಕೆ? ಎಂದು ಸುಮ್ಮನಿರುವ ಕೆಲಸವನ್ನು ನಾವೆಲ್ಲರೂ ಮಾಡುತ್ತಿದ್ದೇವೆ.

ಇಂದಿನ ರಾಜಕೀಯ ಮತ್ತು ಸಾಮಾಜಿಕ ಸನ್ನಿವೇಶದಲ್ಲಿ, ರಾಷ್ಟ್ರ ವಿರೋಧಿ ಶಕ್ತಿಗಳು ದೇಶದ ಏಕತೆಗೆ ಧಕ್ಕೆ ತರುವಾಗ ಅಥವಾ ಸನಾತನ ಸಂಸ್ಕೃತಿಯ ಮೇಲೆ ಹಲ್ಲೆ ಮಾಡುವಾಗ ಸಭ್ಯ ಸಮಾಜ ಮೌನವಾಗಿರುವುದು ಅತ್ಯಂತ ಅಪಾಯಕಾರಿ. ಮೌನ ಎನ್ನುವುದು ಕೆಲವೊಮ್ಮೆ ಸಂಯಮದ ಸಂಕೇತವಾಗಿರಬಹುದು, ಆದರೆ ಅನ್ಯಾಯದ ಎದುರು ಮೌನ ತಾಳುವುದು ರಾಷ್ಟ್ರದ್ರೋಹಕ್ಕೆ ಸಮಾನ.

ನಾವು ಇಂದು ಕಟ್ಟಬೇಕಿರುವುದು ಮೌನದ ಭಾರತವಲ್ಲ, ಬದಲಿಗೆ ಅನ್ಯಾಯದ ವಿರುದ್ಧ ಧ್ವನಿ ಎತ್ತುವ ಜಾಗೃತ ಭಾರತವನ್ನು. ದ್ರೌಪದಿಯಂತಹ ಸಂಕಷ್ಟದಲ್ಲಿರುವವರಿಗೆ ಅಂದು ಕೃಷ್ಣ ಧಾವಿಸಿ ಬಂದಂತೆ, ಇಂದು ಪ್ರತಿಯೊಬ್ಬ ನಾಗರಿಕನೂ ಸಮಾಜದ ರಕ್ಷಣೆಗೆ ಕೃಷ್ಣನಾಗಿ ನಿಲ್ಲಬೇಕಿದೆ. ಧರ್ಮದ ರಕ್ಷಣೆ ಕೇವಲ ಪೂಜೆ-ಪುನಸ್ಕಾರಗಳಲ್ಲ, ಅನ್ಯಾಯ ನಡೆಯುವಲ್ಲಿ ಪ್ರತಿಭಟಿಸುವುದು ಮತ್ತು ಸತ್ಯದ ಪರವಾಗಿ ನಿಲ್ಲುವುದು. ರಾಜಸಭೆಯ ಭೀಷ್ಮ-ದ್ರೋಣರಂತೆ ಶಕ್ತಿಯಿದ್ದು ಅಸಹಾಯಕರಾಗಬಾರದು. ಭೀಮನಂತೆ ಅಧರ್ಮದ ಸಂಹಾರಕ್ಕೆ ಮತ್ತು ಕೃಷ್ಣನಂತೆ ನ್ಯಾಯದ ಸ್ಥಾಪನೆಗೆ ನಾವು ಸನ್ನದ್ಧರಾಗಬೇಕು.

ರಾಜಕೀಯ ಪಕ್ಷದ ಕಾರ್ಯಕರ್ತರಾದ ನಾವುಗಳೂ ನಮ್ಮ ವೈಚಾರಿಕ ಚಿಂತನೆಗೆ ಹಿನ್ನಡೆಯಾದಾಗ ಮೌನ ಮುರಿಯಲೇ ಬೇಕು. ಸಂಘಟನೆ ಸಶಕ್ತವಾಗಿರುವುದು ಸಂಘಟನೆಯೊಳಗೆ ಸಂದರ್ಭಕ್ಕನುಗುಣವಾಗಿ ಕೆಲವು ಮುರಿದ ಮೌನದಿಂದಲೇ. ಹಾಗೆಯೇ ಬಿಜೆಪಿ ಇಷ್ಟೊಂದು ಸಶಕ್ತವಾಗಿರುವುದು ದೇಶದೊಳಗಿನ ದುಷ್ಕೃತ್ಯಗಳ ವಿರುದ್ಧ ನಡೆಸಿದ ಹೋರಾಟಗಳಿಂದಲೇ. ಅಂದಿನ ಗೋವಾ ವಿಮೋಚನಾ ಚಳುವಳಿ, ಕಾಶ್ಮೀರಕ್ಕೆ ವಿಶೇಷ ಸ್ಥಾನಮಾನ ನೀಡಿದ ಆರ್ಟಿಕಲ್ 370 ವಿರುದ್ಧದ ಹೋರಾಟ, ಹುಬ್ಬಳ್ಳಿಯ ಈದ್ಗಾ ಹೋರಾಟ, ಚಿಕ್ಕಮಗಳೂರಿನ ದತ್ತಪೀಠದ ಹೋರಾಟಗಳೇ ಇಂದು ಬಿಜೆಪಿಯನ್ನು ದೇಶದ ರಾಜಕಾರಣದಲ್ಲಿ ಮೊದಲ ಸ್ಥಾನಕ್ಕೆ ತಂದು ನಿಲ್ಲಿಸಿದೆ.  ಇದೇ ತೆರನಾದ ಹೋರಾಟ, ಅನ್ಯಾಯಗಳ ವಿರುದ್ಧ ಸೆಟೆದು ನಿಲ್ಲುವ ನಿಲುವುಗಳು ನಿರಂತರವಾಗಿರಲೇ ಬೇಕು.

– ಸ್ವಯಂಭೂ

**KAMALA PATHA** Monthly in Kannada

RNI No.:KARKAN/2023/84034 REGISTERED NEWSPAPER UNDER No. KRNA/BGE/1173/2023-25
LICENCED TO POST WITHOUT PAYMENT - LICENCE No. PMG BG/WPP-408/2023-2025
OFFICE OF POSTING : BENGALURU PSO - 560 026

**KAMALA PATHA** – Printed and Published by **H.S. GOPINATH** on behalf of **SAMAGRA VIKASA TRUST**, Printed at **RASHTROTTHANA MUDRANALAYA,** No. 8 & 8/1, Satya Pramoda Teertha, Building, 3rd Main, 9th Cross, Chamrajpet, BENGALURU – 560 018. Published At # 7/6, 4TH Cross, CC Road, Sarvagna Nagar, Cox Town, BENGALURU – 560 005. Editor: **B. V. PRAKASH (Bidare Prakash)**